ಅ) ರಾಜ್ಯದಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ನೂತನ ಯೋಜನೆಗಳಾವುವು? (ವಿವರ ಒದಗಿಸುವುದು)

ಆ) ಗಂಗಾಕಲ್ಯಾಣ ಯೋಜನೆಯನ್ನು ಮುಂದುವರೆಸಿ ಈ ಸೌಲಭ್ಯವನ್ನು ಇನ್ನೂ ಹೆಚ್ಚಿನ ಫಲಾನುಭವಿಗಳಿಗೆ ವಿಸ್ತರಿಸುವ ಉದ್ದೇಶ ಸರ್ಕಾರದ ಮುಂದಿದೆಯೇ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) **ಸಮಾಜ ಕಲ್ಯಾಣ ಇಲಾಖೆ** 2006ರಲ್ಲಿ ಸರ್ಕಾರವು ಸಮಾಜ ಕಲ್ಯಾಣ ಇಲಾಖೆಯಡಿ ಪರಿಶಿಷ್ಟ ಜಾತಿ ಜನಾಂಗದವರಿಗಾಗಿ ಆಯವ್ಯಯದಲ್ಲಿ ಪ್ರಕಟಿಸಲಾದ ಹೊಸ ಯೋಜನೆಗಳು, ನಿಗದಿಪಡಿಸಿರುವ ಅನುದಾನ, ಇಲ್ಲಿಯವರೆಗೂ ಮಾಡಿರುವ ವೆಚ್ಚ, ಹೊಂದಿರುವ ಗುರಿ, ಪ್ರಯೋಜನ ಪಡೆದಿರುವವರ ವಿವರ ಕೆಳಕಂಡಂತಿದೆ

ಕಾರ್ಯಕ್ರಮ	ನಿಗದಿಪಡಿಸಿದ ಅನುದಾನ	ಬಿಡುಗಡೆ	ಖರ್ಚು	ಪ್ರಯೋಜನ ಪಡೆದವರ ಸಂಖ್ಯೆ
ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಹೊಸ 50 ವಿದ್ಯಾರ್ಥಿ ನಿಲಯಗಳ ಪ್ರಾರಂಭ	400 00	100 00	100 00	2500 ವಿದ್ಯಾರ್ಥಿಗಳು
30 ಹೊಸ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾರಂಭ	400 00	200 00	200 00	1500 ವಿದ್ಯಾರ್ಥಿಗಳು
ಡಾ ಬಿ ಆರ್ ಅಂಬೇಡ್ಕರ್ ಮತ್ತು ಬಾಬು ಜಗಜೀವನರಾಂ	100 70	50 35	50 35	2 ಗ್ರಾಮಗಳು

ಇವರ ಹೆಸರಿನ ಎರಡು ಗ್ರಾಮಗಳ ಸರ್ವತೋಮುಖ ಅಭಿವೃದ್ಧಿ				
ಬೆಳಗಾಂನಲ್ಲಿ ಡಾ ಅಂಬೇಡ್ಕರ್ ಭವನ ನಿರ್ಮಾಣ	100 00	75 00	75 00	1 ಭವನ
ಕೆ ಎಸ್ ಎಫ್ ಸಿ ಮೂಲಕ ಶೇ 4ರ ಬಡ್ಡಿ ದರದಲ್ಲಿ ಸಾಲ ಮಂಜೂರು ಮಾಡಲು	200,00			ಯೋಜನೆ ಜಾರಿ ಜಾರಿಯಾಗಿ ಗಿರುವುದಿಲ್ಲ

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ರೂಪಿಸಿರುವ ನೂತನ ಯೋಜನೆಗಳ ವಿವರ ಈ ಕೆಳಕಂಡಂತಿದೆ

1 ಪರಿಶಿಷ್ಟ ವರ್ಗದ ಮಕ್ಕಳ ಅನುಕೂಲಕ್ಕಾಗಿ 24 ವಿದ್ಯಾರ್ಥಿನಿಲಯಗಳ ಹಾಗೂ 10 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ

2 ಪರಿಶಿಷ್ಟ ವರ್ಗದ ಜನರ ಅಭಿವೃದ್ಧಿಗಾಗಿ ಪ್ರತ್ಯೇಕ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಗಿದೆ

3 ಪರಿಶಿಷ್ಟ ವರ್ಗದ 853 ವಿದ್ಯಾರ್ಥಿಗಳನ್ನು ನರ್ಸಿಂಗ್ ತರಬೇತಿಗಾಗಿ ನಿಯೋಜಿಸಲಾಗಿದೆ

4 ಪರಿಶಿಷ್ಟ ವರ್ಗದ 1175 ವಿದ್ಯಾವಂತ ನಿರುದ್ಯೋಗಿ ಅಭ್ಯರ್ಥಿಗಳಿಗೆ ಸರ್ಕಾರಿ ಟೂಲ್ ಅಂಡ್ ಟ್ರೈನಿಂಗ್ (GTTC) ಮೂಲಕ ವಿವಿಧ ಕೋರ್ಸುಗಳಲ್ಲಿ ವೃತ್ತಿ ತರಬೇತಿ ನೀಡಲಾಗುತ್ತಿದೆ

ಆ) ಹೌದು

633 (963) ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಆಸ್ಪತ್ರೆಗಳಲ್ಲಿ ಬಡರೋಗಿಗಳಿಗೆ ಎಲ್ಲಾ ತರಹದ ಕಾಯಿಲೆಗಳ ಚಿಕಿತ್ಸಾ ಸೌಲಭ್ಯ ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅಂತಹ ಸಂದರ್ಭಗಳಲ್ಲಿ ಅನಿವಾರ್ಯವಾಗಿ ಖಾಸಗೀ ನರ್ಸಿಂಗ್ ಹೋಮ್‌ಗಳಲ್ಲಿ ದಾಖಲೆಯಾದ ರೋಗಿಗಳಿಗೆ ಹೆಚ್ಚು ಶುಲ್ಕವನ್ನು ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಖಾಸಗೀ ನರ್ಸಿಂಗ್ ಹೋಮ್‌ಗಳು ಯಾವುದೇ ವಿದಿ ವಿಧಾನಗಳಿಲ್ಲದೇ ಕೇವಲ ಹಣ ಮಾಡುವ ಸಲುವಾಗಿ ನಡೆಸುತ್ತಿರುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ, ಈ ನರ್ಸಿಂಗ್ ಹೋಮ್‌ಗಳಲ್ಲಿ ಬಡ ರೋಗಿಗಳಿಗೆ ಹೆಚ್ಚಿನ ರೀತಿಯಲ್ಲಿ ಚಿಕಿತ್ಸೆ ನೀಡಲು ಸರ್ಕಾರ ಕಾರ್ಯರೂಪವನ್ನು ರೂಪಿಸಲು ಸಾಧ್ಯವಿಲ್ಲವೇ?

ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಪ್ರಥಮ ಚಿಕಿತ್ಸಾ ಸೌಲಭ್ಯವನ್ನು ಗ್ರಾಮ ಮಟ್ಟದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒದಗಿಸುತ್ತಿದ್ದು, ಹೆಚ್ಚಿನ ಹಾಗೂ ತಜ್ಞ ಚಿಕಿತ್ಸೆಗಳನ್ನು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಒದಗಿಸಲಾಗುತ್ತಿದೆ ಆದುದರಿಂದ ಎಲ್ಲಾ ತರಹದ ಕಾಯಿಲೆಗಳಿಗೆ ಸರ್ಕಾರದ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯ ದೊರಕಿಸಿಕೊಡಲಾಗುತ್ತಿದೆ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಸಾಧ್ಯವಿದೆ

ಉ) ಇಂತಹ ವಿಧೇಯಕವನ್ನು ತರಲು ಯೋಜಿಸಲಾಗಿದೆ

964 ಶ್ರೀ ಶಿವಶಂಕರರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೆಡಿಕಲ್ ಸ್ಟೋರ್‌ಗಳಲ್ಲಿ ಮಾರಾಟ ಮಾಡುವ ಔಷಧಿಗಳ ಬೆಲೆ ಒಂದು ಅಂಗಡಿಗಿಂತ ಇನ್ನೊಂದು ಅಂಗಡಿಯಲ್ಲಿ ವ್ಯತ್ಯಾಸ ಕಂಡು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೀತಿ ಬೆಲೆಯಲ್ಲಿ ವ್ಯತ್ಯಾಸ ಇದ್ದರೂ ಸಹ ಸರ್ಕಾರದ ಔಷಧಿಗಳ ನಿಯಂತ್ರಣ ಸಂಸ್ಥೆಯು ಕೈಗೊಂಡಿರುವ ಕ್ರಮಗಳೇನು, ಇದನ್ನು ಸರಿಯಾಗಿ ಉಸ್ತುವಾರಿ ನಡೆಸಲಾಗುತ್ತಿದೆಯೇ, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಔಷಧಿಯ ಮಾರಾಟಗಾರರು ನಿಜವಾದ ಬೆಲೆ ಮೇಲೆ ಶೇಕಡವಾರು 30 ರಿಂದ 40 ರವರೆಗೆ ಹೆಚ್ಚಿನ ಲಾಭವನ್ನು ಪಡೆಯುತ್ತಿರುವುದು ಸರಿಯೇ, ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡು ಅನೇಕ ರೋಗಗಳಿಂದ ಬಳಲುತ್ತಿರುವ ಬಡರೋಗಿಗಳಿಗೆ ಅನುಕೂಲ ಮಾಡಿಕೊಡಲಾಗುವುದೇ?

ಈ) ಹಾಗಿದ್ದಲ್ಲಿ, ಇದರ ವಿರುದ್ಧ ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

ಆ) ಯಾವುದೇ ಔಷಧಿ ಅಂಗಡಿಯವರು ಔಷಧಿಯ ಲೇಬಲ್ ಮೇಲೆ ನಮೂದಿಸಿದ ಗರಿಷ್ಠ ಮಾರಾಟ ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು ಕಂಡು ಬಂದಲ್ಲಿ ಅವರ ವಿರುದ್ಧ ಅವಶ್ಯಕ ವಸ್ತು ಕಾಯಿದೆ 1955 ಮತ್ತು ಔಷಧ ಬೆಲೆ ನಿಯಂತ್ರಣ ಆದೇಶ 1995 ರ ಮೇರೆಗೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗುವುದು

ಅಂತಹ ಪ್ರಕರಣಗಳನ್ನು ಉಪ ಔಷಧ ನಿಯಂತ್ರಕರ ನೇತೃತ್ವದಲ್ಲಿರುವ ಬೆಲೆ ನಿಯಂತ್ರಣ ಕೋಶದ ಅಧಿಕಾರಿಗಳು ಉಸ್ತುವಾರಿ ಮಾಡುತ್ತಿರುತ್ತಾರೆ

ಇ) 1995ರ ಕೇಂದ್ರ ಸರ್ಕಾರದ ಔಷಧ ಬೆಲೆ ನಿಯಂತ್ರಣ ಆದೇಶದ ಮೇರೆಗೆ ಅನುಸೂಚಿತ ಔಷಧಿಗಳ ಗರಿಷ್ಠ ಮಾರಾಟ ಬೆಲೆಗಳನ್ನು ಮತ್ತು ಔಷಧಿ ಮಾರಾಟಗಾರರ ಲಾಭಾಂಶವನ್ನೂ ರಾಷ್ಟ್ರೀಯ ಫಾರ್ಮಾಸ್ಯೂಟಿಕಲ್ ಪ್ರೈಸಿಂಗ್ ಪ್ರಾಧಿಕಾರದ ಮೂಲಕ ಕೇಂದ್ರ ಸರ್ಕಾರವೇ ನಿಗದಿಪಡಿಸುತ್ತದೆ ನಿಗದಿತ ಬೆಲೆಗಳಲ್ಲಿ

ನಿರಂತರವಾಗಿ ಸಾಕಷ್ಟು ಪ್ರಮಾಣದಲ್ಲಿ ಔಷಧಿಗಳು ಎಲ್ಲಾ ಕಾಲಗಳಲ್ಲೂ ಲಭ್ಯವಾಗುವಂತೆ ಮಾಡುವ ಸಲುವಾಗಿ ಕೇಂದ್ರ ಸರ್ಕಾರವು ಈ ಬೆಲೆ ನಿಯಂತ್ರಣ ಆದೇಶ 1995ನ್ನು ಹೊರಡಿಸಿರುತ್ತದೆ

ಈ) ಸಾರ್ವಜನಿಕರು ನಿಗಧಿತ ಬೆಲೆಗಳಿಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರೆ, ಅಂತಹ ಪ್ರಕರಣಗಳನ್ನು ಔಷಧ ನಿಯಂತ್ರಣ ಇಲಾಖೆಯ ಬೆಲೆ ನಿಯಂತ್ರಣ ಕೋಶಕ್ಕೆ ತಿಳಿಸಿದ್ದಲ್ಲಿ ಅಂತಹವರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದು

635 (1074) ಶ್ರೀ ಶಿವಶಂಕರ್‌ರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರೇ ತಿಳಿಸಿದಂತೆ ಜನರಲ್ ಸ್ಟೋರ್‌ನಿಂದ ಸರಬರಾಜಾಗುತ್ತಿರುವ ಔಷಧಿಗಳು ನೂರಕ್ಕೆ ಅರವತ್ತು ಭಾಗ ಅನುಪಯುಕ್ತ ಎಂದು ಹೇಳಲ್ಪಡುತ್ತಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ, ಈ ಅನುಪಯುಕ್ತ ಔಷಧಿಗಳನ್ನು ನೀಡುವುದರಿಂದ ಬಡವರಿಗೆ ಅನ್ಯಾಯವಾಗುವುದಿಲ್ಲವೇ? ಇದರ ಉದ್ದೇಶವಾದರೂ ಏನು?

ಇ) ಇದನ್ನು ನಿಯಂತ್ರಿಸಿ ಆಸ್ಪತ್ರೆಯ ವೈದ್ಯರು ಕೇಳುವ ಔಷಧಿಗಳನ್ನು ಸರಬರಾಜು ಮಾಡಲಾಗುವುದೇ?

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).

ಅ) ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಿಗೆ ಸರ್ಕಾರ ಅನುದಾನ ನಿಗಧಿಗೊಳಿಸಿದೆ ನಿಗಧಿಗೊಳಿಸಿರುವ ಅನುದಾನಕ್ಕೆ ತಕ್ಕಂತೆ ಸಂಬಂಧಪಟ್ಟ ಆಸ್ಪತ್ರೆಯ ವೈದ್ಯಾಧಿಕಾರಿಗಳು ಅವರ ಆಸ್ಪತ್ರೆಯಲ್ಲಿ ರಚಿತವಾಗಿರುವ ಆಂತರಿಕ ಸಮಿತಿಯ ಶಿಫಾರಸ್ಸಿನಂತೆ ಆಸ್ಪತ್ರೆಯ ಬಳಕೆಗೆ ಅನುಗುಣವಾಗಿ ಔಷಧಿಗಳನ್ನು ಆಯ್ಕೆ ಮಾಡಿ ಬೇಕಾಗಿರುವ ಪ್ರಮಾಣಕ್ಕೆ ಬೇಡಿಕೆಗಳನ್ನು ಸಲ್ಲಿಸುತ್ತಾರೆ

ಈ ರೀತಿ ಆಸ್ಪತ್ರೆಗಳಿಂದ ಪಡೆದ ಬೇಡಿಕೆಗಳನ್ವಯ ಔಷಧಿಗಳನ್ನು ಮೂಲ ಉತ್ಪಾದಕರಿಂದ ದರಗುತ್ತಿಗೆ ದರಗಳಲ್ಲಿ ಖರೀದಿಸಿ, ಜಿಲ್ಲಾ ಔಷಧ ಉಗ್ರಾಣಗಳ ಮೂಲಕ ಔಷಧಿಗಳನ್ನು ಸಂಬಂಧಪಟ್ಟ ಆಸ್ಪತ್ರೆಗಳಿಗೆ ಪೂರೈಕೆ ಮಾಡಲಾಗುತ್ತಿದೆ

ಆದ್ದರಿಂದ ಆಸ್ಪತ್ರೆಗಳಿಗೆ ಸರಬರಾಜಾಗುತ್ತಿರುವ ಔಷಧಿಗಳು ನೂರಕ್ಕೆ ಅರವತ್ತು ಭಾಗ ಅನುಪಯುಕ್ತ ಎಂದು ಹೇಳುವುದು ನಿಜವಲ್ಲ

ಆ) ಉದ್ಭವಿಸುವುದಿಲ್ಲ

ಇ) ನಿಗಧಿಗೊಳಿಸಿರುವ ಅನುದಾನಕ್ಕೆ ಸಂಬಂಧಪಟ್ಟ ಆಸ್ಪತ್ರೆಯ ವೈದ್ಯಾಧಿಕಾರಿಗಳು ಅವರ ಆಸ್ಪತ್ರೆಯಲ್ಲಿ ರಚಿತವಾಗಿರುವ ಆಂತರಿಕ ಸಮಿತಿಯ ಶಿಫಾರಸ್ಸಿನಂತೆ ಆಸ್ಪತ್ರೆಯ ಬಳಕೆಗೆ ಅನುಗುಣವಾಗಿ ಔಷಧಿಗಳನ್ನು ಆಯ್ಕೆ ಮಾಡಿ ಬೇಕಾಗಿರುವ ಪ್ರಮಾಣಕ್ಕೆ ಬೇಡಿಕೆಗಳನ್ನು ಸಲ್ಲಿಸುತ್ತಿದ್ದು, ಈ ರೀತಿ ಆಸ್ಪತ್ರೆಗಳಿಂದ ಪಡೆದ ಬೇಡಿಕೆಗಳನ್ವಯ ಈ ರೀತಿ ಆಸ್ಪತ್ರೆಗಳಿಂದ ಪಡೆದ ಬೇಡಿಕೆಗಳನ್ವಯ ಔಷಧಿಗಳನ್ನು ಮೂಲ ಉತ್ಪಾದಕರಿಂದ ದರಗುತ್ತಿಗೆ ದರಗಳಲ್ಲಿ ಖರೀದಿಸಿ ಜಿಲ್ಲಾ ಔಷಧ ಉಗ್ರಾಣಗಳ ಮೂಲಕ ಔಷಧಿಗಳನ್ನು ಸಂಬಂಧಪಟ್ಟ ಆಸ್ಪತ್ರೆಗಳಿಗೆ ಪೂರೈಕೆ ಮಾಡಲಾಗುತ್ತದೆ

ಈ) ಮೇಲೆ ನೀಡಿರುವ ಮಾಹಿತಿಯ ಹಿನ್ನೆಲೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ

636 (871) ಶ್ರೀ ಸಿದ್ದುಸಾವದಿ (ಜಮಖಂಡಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಒಟ್ಟು ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು? ಸ್ವಂತ ಕಟ್ಟಡಗಳಿರುವ ವಸತಿ ನಿಲಯಗಳೆಷ್ಟು, ಉಳಿದ ವಸತಿ ನಿಲಯಗಳಿಗೆ ಯಾವಾಗ ಸ್ವಂತ ಕಟ್ಟಡಗಳನ್ನು ಒದಗಿಸಲಾಗುವುದು?

ಆ) ರಾಜ್ಯದಲ್ಲಿರುವ ಒಟ್ಟು ವಸತಿ ಶಾಲೆಗಳೆಷ್ಟು? ಅವುಗಳಲ್ಲಿ ಮೊರಾರ್ಜಿ ವಸತಿ ಶಾಲೆಗಳೆಷ್ಟು? (ತಾಲ್ಲೂಕುವಾರು ಮಾಹಿತಿ ಒದಗಿಸುವುದು)?

ಇ) ಜಮಖಂಡಿ ತಾಲ್ಲೂಕಿನಲ್ಲಿ ಅತಿ ಅವಶ್ಯಕವಾಗಿ ಇನ್ನೂ 4 ಕಡೆ ವಸತಿ ಶಾಲೆಗಳ ಬೇಡಿಕೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಯಾವಾಗ ಮಂಜೂರಾತಿ ನೀಡಲಾಗುವುದು?

ಉ) ರಾಜ್ಯದಲ್ಲಿರುವ ಒಟ್ಟು ವಿದ್ಯಾರ್ಥಿನಿಲಯಗಳೆಷ್ಟು? (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

ಊ) ಜಮಖಂಡಿ ತಾಲ್ಲೂಕುನಲ್ಲಿಯೂ ಸಹ ವಿದ್ಯಾರ್ಥಿನಿಲಯಗಳಿಗೆ ಹೆಚ್ಚಿನ ಬೇಡಿಕೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಋ) ಹಾಗಿದ್ದಲ್ಲಿ ಯಾವಾಗ ಒದಗಿಸಲಾಗುವುದು?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಜಮಖಂಡಿ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿಯ 6 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿದ್ದು, 5 ವಿದ್ಯಾರ್ಥಿನಿಲಯಗಳನ್ನು ಸ್ವಂತ ಕಟ್ಟಡದಲ್ಲಿ ನಡೆಸಲಾಗುತ್ತಿದೆ ಹಾಗೂ ಒಂದು ವಿದ್ಯಾರ್ಥಿನಿಲಯವನ್ನು ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುತ್ತಿದೆ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳಿಗೆ ನಿವೇಶನದ ಲಭ್ಯತೆ ಹಾಗೂ ಅನುದಾನದ ಲಭ್ಯತೆಯನ್ನು ಅನುಸರಿಸಿ ಸ್ವಂತ ಕಟ್ಟಡವನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು ಪ್ರಸ್ತಕ ಸಾಲಿನಲ್ಲಿ ಒಂದು ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ಪ್ರಾರಂಭಿಸಲು ಹೊಸದಾಗಿ ಮಂಜೂರಾತಿ ನೀಡಲಾಗಿದೆ

ಆ) ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ 1 ರಿಂದ 5ನೇ ತರಗತಿಯವರೆಗೆ 90 ವಸತಿ ಶಾಲೆಗಳು ನಡೆಸಲ್ಪಡುತ್ತಿವೆ (ತಾಲ್ಲೂಕುವಾರು ವಿವರವನ್ನು ಅನುಬಂಧ–ಅ ರಲ್ಲಿ ನೀಡಿದೆ)

ರಾಜ್ಯದಲ್ಲಿ ಒಟ್ಟು 266 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿರುತ್ತವೆ (ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ–ಇ ರಲ್ಲಿ ನೀಡಲಾಗಿದೆ)

ಇ) ಜಮಖಂಡಿ ತಾಲ್ಲೂಕಿನಲ್ಲಿ 1 ರಿಂದ 5ನೇ ತರಗತಿಯ ವಸತಿ ಶಾಲೆಯ ಮಂಜೂರಾತಿಗಾಗಿ ಬೇಡಿಕೆ / ಪ್ರಸ್ತಾವನೆ ಬಂದಿರುವುದಿಲ್ಲ ಆದರೆ ಒಂದು ಮೊರಾರ್ಜಿ ದೇಸಾಯಿ ವಸತಿ ಶಾಲೆಗಾಗಿ ಬೇಡಿಕೆ ಬಂದಿರುತ್ತದೆ

ಈ) ಅನುದಾನದ ಲಭ್ಯತೆ ಹಿನ್ನೆಲೆಯಲ್ಲಿ ಪರಿಶೀಲಿಸಲಾಗುವುದು

ಉ) ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗಾಗಿ ಒಟ್ಟು 1435 ವಿದ್ಯಾರ್ಥಿನಿಲಯಗಳಿವೆ ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ–ಆ ರಲ್ಲಿ ನೀಡಲಾಗಿದೆ

ಊ) ಹೌದು

ಋ) 2006–07ನೇ ಸಾಲಿನಲ್ಲಿ ರಾಜ್ಯಾದ್ಯಂತ ಬಂದಿರುವ ಬೇಡಿಕೆಗಳಿಗೆ ಆಯವ್ಯಯದಲ್ಲಿ ಒದಗಿಸಲಾಗಿರುವ ಅನುದಾನದ ಲಭ್ಯತೆ ಹಾಗೂ ಅವಶ್ಯಕತೆಯನ್ನು ಅನುಸರಿಸಿ 50 ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಈಗಾಗಲೇ ಆದೇಶಿಸಿದೆ ಜಮಖಂಡಿ ತಾಲ್ಲೂಕಿನ ಬೇಡಿಕೆಗಳನ್ನು ರಾಜ್ಯದ ಇನ್ನಿತರೆ ಬೇಡಿಕೆಗಳ ಪ್ರಸ್ತಾವನೆಯೊಂದಿಗೆ ಮುಂದಿನ ವರ್ಷದ ಆಯವ್ಯಯದಲ್ಲಿ ಒದಗಿಸುವ ಅನುದಾನದ ಲಭ್ಯತೆ ಮತ್ತು ಅವಶ್ಯಕತೆಯನ್ನು ಅನುಸರಿಸಿ ಪರಿಶೀಲಿಸಲಾಗುವುದು

ವಿಧಾನ ಸಭಾ ಸದಸ್ಯರಾದ ಶ್ರೀ ಸಿದ್ದು ಸಾವದಿ (ಜಮಖಂಡಿ) ರವರ ಪ್ರಶ್ನೆ

ಸಂ 871 ರ ಪ್ರಶ್ನೆ ಸಂ: 'ಅ'ಕ್ಕೆ ಅನುಬಂಧ – ಅ

ಕ್ರ ಸಂ	ಜಿಲ್ಲೆಯ ಹೆಸರು	ತಾಲ್ಲೂಕು	ಶಾಲೆ ಇರುವ ಸ್ಥಳ	ವಸತಿ ಶಾಲೆಗಳಲ್ಲಿ ಇರುವ ವಿದ್ಯಾರ್ಥಿಗಳ ಸಂಖ್ಯೆ
1	ಬೆಂಗಳೂರು ನಗರ	ಬೆಂಗಳೂರು ದಕ್ಷಿಣ	ದೊಡ್ಡ ಕನ್ನಲ್ಲಿ	125
		ಬೆಂಗಳೂರು ಉತ್ತರ	ಬಾಗಲೂರು ಲೇಔಟ್	125
2	ಬೆಂಗಳೂರು ಗ್ರಾಮಾಂತರ	ದೇವನಹಳ್ಳಿ	ದೇವನಹಳ್ಳಿ	125
		ಹೊಸಕೋಟೆ	ಹೊಸಕೋಟೆ	125
3	ಶಿವಮೊಗ್ಗ	ಶಿಕಾರಿಪುರ	ಮಳವಳ್ಳಿ ತಾಂಡ	125
		ಶಿಕಾರಿಪುರ	ಮಂಚಿಕೊಪ್ಪ	125
4	ದಾವಣಗೆರೆ	ಚನ್ನಗಿರಿ	ಚನ್ನಗಿರಿ	125
5	ಕೋಲಾರ	ಕೋಲಾರ	ಕೋಲಾರ ಟೌನ್	125
		ಬಂಗಾರಪೇಟೆ	ಬಂಗಾರಪೇಟೆ	125
		ಗೌರಿಬಿದನೂರು	ಗೌರಿಬಿದನೂರು	125
6	ತುಮಕೂರು	ತುಮಕೂರು	ತುಮಕೂರು ಟೌನ್	125
		ಪಾವಗಡ	ಪಾವಗಡ	125
7	ಚಿತ್ರದುರ್ಗ	ಚಿತ್ರದುರ್ಗ	ಚಿತ್ರದುರ್ಗ ಟೌನ್	125
		ಹಿರಿಯೂರು	ಹಿರಿಯೂರು ಟೌನ್	125
		ಚಿತ್ರದುರ್ಗ	ಭರಮಸಾಗರ	125
8	ಮೈಸೂರು	ಮೈಸೂರುನಗರ	ಬಂಬೂ ಬಜಾರ್	125
		ಮೈಸೂರುನಗರ	ಗಾಂಧಿನಗರ	125
		ಟಿ ನರಸೀಪುರ	ಟಿ ನರಸೀಪುರ	125
9	ಮಂಡ್ಯ	ಮಳವಳ್ಳಿ	ಮಳವಳ್ಳಿ	125

10	ದಕ್ಷಿಣ ಕನ್ನಡ	ಭಂಟ್ವಾಳ	ಭಂಟ್ವಾಳ	125
11	ಹಾಸನ	ಹಾಸನ	ಕಾರ್ಲೆ	125
		ಬೇಲೂರು	ನರಸೀಪುರ ಬೋವಿ ಕಾಲೋನಿ	125
		ಚನ್ನರಾಯಪಟ್ಟಣ	ಸಂತೇನಹಳ್ಳಿ	125
		ಹೊಳೆನರಸೀಪುರ	ಹೊಳೆನರಸೀಪುರ	125
		ಅರಸೀಕೆರೆ	ಗಂಡಸಿ	125
12	ಚಿಕ್ಕಮಗಳೂರು	ತರೀಕೆರೆ	ಮಲ್ಲೇಚನ್ನೇನಹಳ್ಳಿ	125
		ಕಡೂರು	ಕಡೂರು	125
13	ಕೊಡಗು	ಮಡಿಕೇರಿ	ಕಾಕಂಬೆ	125
14	ಬೆಳಗಾಂ	ಬೆಳಗಾಂ ನಗರ	ಬೆಳಗಾಂ	125
		ಬೆಳಗಾಂ	ಬಾಳೆಕುಂದ್ರಿ	125
		ರಾಯಭಾಗ್	ಕುಡಚಿ	125
		ಚಿಕ್ಕೋಡಿ	ಚಿಕ್ಕೋಡಿ	125
15	ಬಿಜಾಪೂರ	ಬಿಜಾಪುರ	ಬಿಜಾಪುರ ಟೌನ್	125
		ಇಂಡಿ	ಇಂಡಿ	125
		ಇಂಡಿ	ಚಡಚಣ	125
		ಇಂಡಿ	ಹಣಜೆ	125
		ಬಿಜಾಪುರ	ಕನ್ನಾಳ ತಾಂಡಾ	125
		ಮುದ್ದೇಬಿಹಾಳ	ಮುದ್ದೇಬಿಹಾಳ	125
		ಬಾಗೇವಾಡಿ	ಕುದುರೆಸಾಲವಾಡಗಿ	125
16	ಬಾಗಲಕೋಟೆ	ಬೀಳಗಿ	ಕುಂದರಗಿ	125
		ಮುಧೋಳ	ಮುಧೋಳ	125
		ಬಾಗಲಕೋಟೆ	ಮುಚಕುಂದಿ	125
17	ಧಾರವಾಡ	ಧಾರವಾಡ	ಧಾರವಾಡ ಟೌನ್	125
18	ಗದಗ್	ಶಿರಹಟ್ಟಿ	ಶಿಗ್ಲಿ	125
		ರೋಣ	ಗಜೇಂದ್ರಗಡ	125

19	ಹಾವೇರಿ	ರಾಣೆಬೆನ್ನೂರು	ರಾಣೆಬೆನ್ನೂರು	125
			ನೂಕಾಪುರ	125
		ಹಿರೇಕೆರೂರು	ಹಿರೇಕೆರೂರು	125
		ಬ್ಯಾಡಗಿ	ಬ್ಯಾಡಗಿ	125
		ಶಿಗ್ಗಾಂವ	ಶಿಗ್ಗಾಂವ	125
		ಹಾನಗಲ್	ಹಾನಗಲ್	125
		ಹಾವೇರಿ	ಹಾವೇರಿ ಟೌನ್	125
20	ಉತ್ತರ ಕನ್ನಡ	ಸಿದ್ದಾಪುರ	ಸಿದ್ದಾಪುರ	125
		ಹಳಿಯಾಲ	ಹಳಿಯಾಳ	125
		ಸಿರ್ಸಿ	ಸಿರ್ಸಿ ಬನವಾಸಿ	125
21	ಗುಲ್ಬರ್ಗಾ	ಗುಲ್ಬರ್ಗಾ ನಗರ	ಸಂತರಸವಾಡಿ	125
		ಗುಲ್ಬರ್ಗಾ ನಗರ	ಅಶುಚಿ	125
		ಗುಲ್ಬರ್ಗಾ	ಕಂದಲ ತಾಂಡ	125
		ಚಿತ್ತಾಪುರ	ಕುಲಗಿ	125
		ಚಿತ್ತಾಪುರ	ಬಂಕೂರ	125
		ಚಿತ್ತಾಪುರ	ವಡೇರ್ ಕಾಲೋನಿ, ಶಹಾಬಾದ್	125
		ಚಿಂಚೋಳಿ	ಚಿಂಚೋಳಿ	125
		ಗುಲ್ಬರ್ಗಾ ಟೌನ್	ಭಾರತೀನಗರ ತಾಂಡ	125
		ಚಿಂಚೋಳಿ	ಪಾಲ್ತಾನ ತಾಂಡ	125
		ಆಳಂದ	ಕೋರಹಳ್ಳಿ ತಾಂಡ	125
		ಯಾದಗೀರ್	ಬೋರಬಂಡಾ	125
		ಯಾದಗೀರ್	ಅಲೀಪುರ	125
		ಸೇಡಂ	ಮಾಲ್ಕೇಡ ಸ್ಟೇಷನ್	125
		ಅಫಜಲಪುರ	ಅಫಜಲಪುರ	125
		ಅಫಜಲಪುರ	ಅರ್ಜುನಗಿ	125
		ಚಿಂಚೋಳಿ	ಗೋಪ ನಾಯಕನ ತಾಂಡಾ	125

22	ರಾಯಚೂರು	ರಾಯಚೂರು	ರಾಯಚೂರು ಟೌನ್	125
		ರಾಯಚೂರು	ಉದುಮಗಲ ಖಾನಾಪುರ	125
		ಲಿಂಗಸೂಗೂರು	ಅಡವಿ ಬಾವಿ ತಾಂಡಾ	125
		ಲಿಂಗಸೂಗೂರು	ಅಶೀಲ ತಾಂಡ	125
		ರಾಯಚೂರು	ಮರಳುದಿಣ್ಣ ತಾಂಡಾ	125
		ದೇವದುರ್ಗ	ದೇವದುರ್ಗ ಟೌನ್	125
		ದೇವದುರ್ಗ	ನವಾಲಿ ತಾಂಡ	125
23	ಕೊಪ್ಪಳ	ಗಂಗಾವತಿ	ನವಾಲಿ ತಾಂಡ	125
24	ಬಳ್ಳಾರಿ	ಬಳ್ಳಾರಿ	ಬಳ್ಳಾರಿ ಟೌನ್	125
		ಕೂಡ್ಲಿಗಿ	ಕೂಡ್ಲಿಗಿ	125
		ಹರಪನಹಳ್ಳಿ	ಹರಪನಹಳ್ಳಿ	125
25	ಬೀದರ್	ಬೀದರ್	ಸಾಂಗೋಲಿಗ ತಾಂಡಾ	125
		ಬಸವ ಕಲ್ಯಾಣ	ಏಕಲೂರ ತಾಂಡಾ	125
		ಬಸವ ಕಲ್ಯಾಣ	ಕಲೇಕೋರ ತಾಂಡಾ	125
		ಬಸವ ಕಲ್ಯಾಣ	ಅರ್ಕೋಡ್ ತಾಂಡಾ	125
		ಬಸವ ಕಲ್ಯಾಣ	ಬಸವ ಕಲ್ಯಾಣ	125
		ಔರಾದ್	ಚಿಲ್ಕಿ ತಾಂಡಾ	125
		ಭಾಲ್ಕಿ	ನಿರ್ಮಾತನಹಳ್ಳಿ ತಾಂಡಾ	125
		ಬಸವಕಲ್ಯಾಣ	ಹುಮನಾಬಾದ್	125
	90 ವಸತಿ ಶಾಲೆಗಳು			**11250**

ವಿಧಾನ ಸಭಾ ಸದಸ್ಯರಾದ ಶ್ರೀ ಸಿದ್ದು ಸಾವದಿ (ಜಮಖಂಡಿ) ರವರ ಪ್ರಶ್ನೆ ಸಂ 871 ರ ಪ್ರಶ್ನೆ ಸಂ 'ಇ'ಕ್ಕೆ ಅನುಬಂಧ – ಆ

ಕ್ರ.ಸಂ	ಜಿಲ್ಲೆಯ ಹೆಸರು	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ	ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ	ಒಟ್ಟು
	1 ಬೆಂಗಳೂರು ನಗರ ಜಿಲ್ಲೆ			
1	ಆನೇಕಲ್ಲು	7	1	8
2	ಬೆಂಗಳೂರು ಉತ್ತರ ತಾ	13	5	18
3	ಬೆಂಗಳೂರು ದಕ್ಷಿಣ ತಾ	8	6	14
4	ಬೆಂಗಳೂರು ಪೂರ್ವ ತಾ	9	2	11
	ಒಟ್ಟು	**37**	**14**	**51**
	2 ಬೆಂಗಳೂರು (ಗ್ರಾ) ಜಿಲ್ಲೆ			
5	ಚನ್ನಪಟ್ಟಣ	7	1	8
6	ದೇವನಹಳ್ಳಿ	5	1	6
7	ದೊಡ್ಡಬಳ್ಳಾಪುರ	6	1	7
8	ಹೊಸಕೋಟೆ	6	1	7
9	ಕನಕಪುರ	13	1	14
10	ಮಾಗಡಿ	6	2	
11	ನೆಲಮಂಗಲ	5	–	5
12	ರಾಮನಗರ	6	1	7
	ಒಟ್ಟು	**54**	**8**	**62**
	3 ತುಮಕೂರು ಜಿಲ್ಲೆ			
13	ಚಿಕ್ಕನಾಯಕನಹಳ್ಳಿ	6	1	7
14	ಗುಬ್ಬಿ	7	1	8
15	ಕೊರಟಗೆರೆ	4	1	5
16	ಕುಣಿಗಲ್	6	1	7

17	ಮಧುಗಿರಿ	9	3	12
18	ಪಾವಗಡ	6	4	10
19	ಶಿರಾ	9	2	11
20	ತಿಪಟೂರು	3	1	4
21	ತುಮಕೂರು	7	7	14
22	ತುರುವೇಕೆರೆ	4	–	4
	ಒಟ್ಟು	**61**	**21**	**82**
	4 ಕೋಲಾರ ಜಿಲ್ಲೆ			
23	ಬಾಗೇಪಲ್ಲಿ	8	3	11
24	ಬಂಗಾರಪೇಟೆ	14	3	17
25	ಚಿಕ್ಕಬಳ್ಳಾಪುರ	5	4	9
26	ಚಿಂತಾಮಣಿ	13	4	17
27	ಗೌರಿಬಿದನೂರು	9	2	11
28	ಗುಡಿಬಂಡೆ	4	1	5
29	ಕೋಲಾರ	12	8	2
30	ಮಾಲೂರು	7	3	10
31	ಮುಳಬಾಗಿಲು	9	3	12
32	ಶಿಡ್ಲಗಟ್ಟ	7	1	8
33	ಶ್ರೀನಿವಾಸಪುರ	8	3	11
	ಒಟ್ಟು	**96**	**35**	**131**
	5 ಚಿತ್ರದುರ್ಗ ಜಿಲ್ಲೆ			
34	ಚಳ್ಳಕೆರೆ	9	3	12
35	ಚಿತ್ರದುರ್ಗ	8	9	17
36	ಹೊಳಲ್ಕೆರೆ	5	2	7

37	ಹೊಸದುರ್ಗ	3	2	5
38	ಮೊಳಕಾಲ್ಮೂರು	5	1	6
39	ಹಿರಿಯೂರು	16	2	18
	ಒಟ್ಟು	**46**	**19**	**65**
	6 ದಾವಣಗೆರೆ ಜಿಲ್ಲೆ			
40	ದಾವಣಗೆರೆ	8	5	13
41	ಹರಿಹರ	5	1	6
42	ಚನ್ನಗಿರಿ	11	2	13
43	ಹೊನ್ನಾಳಿ	7	–	7
44	ಹರಪನಹಳ್ಳಿ	7	3	10
45	ಜಗಳೂರು	4	1	5
	ಒಟ್ಟು	**42**	**12**	**54**
	7 ಶಿವಮೊಗ್ಗ ಜಿಲ್ಲೆ			
46	ಭದ್ರಾವತಿ	3	3	11
47	ಹೊಸನಗರ	3	–	3
48	ಸಾಗರ	5	2	7
49	ಶಿಕಾರಿಪುರ	9	2	11
50	ಶಿವಮೊಗ್ಗ	6	4	10
51	ಸೊರಬ	11	–	11
52	ತೀರ್ಥಹಳ್ಳಿ	2	–	2
	ಒಟ್ಟು	**44**	**11**	**55**
	8 ಮೈಸೂರು ಜಿಲ್ಲೆ			
53	ಹೆಗ್ಡಡದೇವನಕೋಟೆ	6	4	10
54	ಹುಣಸೂರು	6	1	7

55	ಕೆ ಆರ್ ನಗರ	5	1	6
56	ಮೈಸೂರು	7	6	13
57	ನಂಜನಗೂಡು	10	3	13
58	ಪಿರಿಯಾಪಟ್ಟಣ	3	1	4
59	ಟಿ ನರಸೀಪುರ	7	1	8
	ಒಟ್ಟು	**44**	**17**	**61**
	9 ಚಾಮರಾಜನಗರ ಜಿಲ್ಲೆ			
60	ಚಾಮರಾಜನಗರ	12	5	17
61	ಗುಂಡ್ಲುಪೇಟೆ	6	2	8
62	ಕೊಳ್ಳೇಗಾಲ	11	3	14
63	ಯಳಂದೂರು	5	–	5
	ಒಟ್ಟು	**34**	**10**	**44**
	10 ಕೊಡಗು ಜಿಲ್ಲೆ			
64	ಮಡಿಕೇರಿ	3	–	3
65	ಸೋಮವಾರಪೇಟೆ	8	1	9
66	ವಿರಾಜಪೇಟೆ (ಪೊನ್ನಂಪೇಟೆ)	7	–	7
	ಒಟ್ಟು	**18**	**1**	**19**
	11 ಮಂಡ್ಯ			
67	ಕೆ ಆರ್ ಪೇಟೆ	5	2	7
68	ಮದ್ದೂರು	8	1	9
69	ಮಳವಳ್ಳಿ	11	2	13
70	ಮಂಡ್ಯ	7	3	10
71	ನಾಗಮಂಗಲ	4	1	5

72	ಪಾಂಡವಪುರ	4	1	5
73	ಶ್ರೀರಂಗಪಟ್ಟಣ	4	1	5
	ಒಟ್ಟು	**43**	**11**	**54**
	12 ಉಡುಪಿ ಜಿಲ್ಲೆ			
74	ಕಾರ್ಕಳ	5	–	5
75	ಕುಂದಾಪುರ	4	–	4
76	ಉಡುಪಿ	8	1	9
	ಒಟ್ಟು	**17**	**1**	**18**
	13 ಹಾಸನ			
77	ಅಲೂರು	2	–	2
78	ಅರಕಲಗೂಡು	6	1	7
79	ಅರಸೀಕೆರೆ	10	1	11
80	ಬೇಲೂರು	8	2	10
81	ಚನ್ನರಾಯಪಟ್ಟಣ	5	1	6
82	ಹಾಸನ	12	5	17
83	ಹೊಳೆನರಸೀಪುರ	9	3	12
84	ಸಕಲೇಶಪುರ	5	1	6
	ಒಟ್ಟು	**57**	**14**	**71**
	14 ಚಿಕ್ಕಮಗಳೂರು ಜಿಲ್ಲೆ			
85	ಚಿಕ್ಕಮಗಳೂರು	5	4	9
86	ಕಡೂರು	10	2	12
87	ಕೊಪ್ಪ	4	–	4
88	ಮೂಡಿಗೆರೆ	5	1	6

89	ಎನ್ ಆರ್ ಪುರ	2	–	2
90	ಶೃಂಗೇರಿ	1	1	2
91	ತರೀಕೆರೆ	6	2	8
	ಒಟ್ಟು	**33**	**10**	**43**
	15 ದಕ್ಷಿಣ ಕನ್ನಡ ಜಿಲ್ಲೆ			
92	ಬೆಳ್ತಂಗಡಿ	2	–	2
93	ಬಂಟ್ವಾಳ	3	–	3
94	ಮಂಗಳೂರು	6	2	8
95	ಪುತ್ತೂರು	4	–	4
96	ಸೂಳ್ಯ	2	1	3
	ಒಟ್ಟು	**17**	**3**	**2**
	16 ಬೆಳಗಾಂ ಜಿಲ್ಲೆ			
97	ಅಥಣಿ	7	1	8
98	ಬೈಲಹೊಂಗಲ	10	1	11
99	ಬೆಳಗಾಂ	2	4	6
100	ಚಿಕ್ಕೋಡಿ	12	3	15
101	ಗೋಕಾಕ್	4	1	5
102	ಹುಕ್ಕೇರಿ	8	–	8
103	ಖಾನಾಪುರ	3	–	3
104	ರಾಯಬಾಗ್	2	–	2
105	ರಾಮದುರ್ಗ	5	1	6
106	ಸವದತ್ತಿ	7	–	7
	ಒಟ್ಟು	**60**	**11**	**71**

	17 ಬಾಗಲಕೋಟೆ ಜಿಲ್ಲೆ			
107	ಬಾಗಲಕೋಟೆ	7	1	8
108	ಬಾದಾಮಿ	9	–	9
109	ಹುನುಗುಂದ	4	–	4
110	ಜಮಖಂಡಿ	6	–	6
111	ಮುದೋಳ್	5	–	5
112	ಬೀಳಗಿ	4	–	4
	ಒಟ್ಟು	**35**	**1**	**36**
	18 ಧಾರವಾಡ ಜಿಲ್ಲೆ			
113	ಧಾರವಾಡ	3	2	5
114	ಹುಬ್ಬಳ್ಳಿ	3	2	5
115	ಕಲಘಟಗಿ	4	–	4
116	ಕುಂದಗೋಳ	1	–	1
117	ನವಲಗುಂದ	4	–	4
	ಒಟ್ಟು	**15**	**4**	**19**
	19 ಬಿಜಾಪುರ ಜಿಲ್ಲೆ			
118	ಬಸವನಬಾಗೇವಾಡಿ	9	–	9
119	ಬಿಜಾಪುರ	9	2	11
120	ಇಂಡಿ	14	–	14
121	ಮುದ್ದೇಬಿಹಾಳ	9	–	9
122	ಸಿಂಧಗಿ	13	3	16
	ಒಟ್ಟು	**54**	**5**	**59**
	20 ಗದಗ ಜಿಲ್ಲೆ			
123	ಗದಗ್	5	4	9
124	ಮುಂಡರಗಿ	5	3	8

125	ಸಿರಹಟ್ಟಿ	6	–	6
126	ನರಗುಂದ	2	–	2
127	ರೋಣ	8	1	9
	ಒಟ್ಟು	**26**	**8**	**34**
	21 ಹಾವೇರಿ ಜಿಲ್ಲೆ			
128	ಹಾವೇರಿ	4	2	6
129	ಹಿರೇಕೆರೂರು	9	2	11
130	ರಾಣೆಬೆನ್ನೂರು	3	1	4
131	ಬ್ಯಾಡಗಿ	7	–	7
132	ಸವಣೂರು	3	–	3
133	ಹಾನಗಲ್	6	1	6
134	ಶಿಗ್ಗಾಂವ್	4	–	4
	ಒಟ್ಟು	**36**	**6**	**42**
	22 ಉತ್ತರ ಕನ್ನಡ ಜಿಲ್ಲೆ			
135	ಅಂಕೋಲ	2	–	2
136	ಭಟ್ಕಳ	2	–	2
137	ಹಳಿಯಾಳ	4	–	4
138	ಹೊನ್ನಾವರ	2	–	2
139	ಕಾರವಾರ	2	–	2
140	ಕುಮಟಾ	2	–	2
141	ಮುಂಡಗೋಡ	3	–	3
142	ಸಿದ್ದಾಪುರ	3	–	3
143	ಸಿರ್ಸಿ	3	–	3

144	ಸೂಪಾ (ಜೋಯಿಡಾ)	1	–	1
145	ಯಲ್ಲಾಪುರ	3	–	3
	ಒಟ್ಟು	**27**	–	**27**
	23 ಗುಲ್ಬರ್ಗಾ ಜಿಲ್ಲೆ			
146	ಅಫ್‌ಜಲಪುರ	9	1	10
147	ಅಳಂದ	9	1	10
148	ಚಿಂಚೋಳಿ	7	1	8
149	ಚಿತ್ತಾಪುರ	12	–	12
150	ಗುಲ್ಬರ್ಗಾ	9	7	1
151	ಚೇವರ್ಗಿ	11	1	1
152	ಸೇಡಂ	9	1	10
153	ಶಹಾಪುರ	6	3	9
154	ಸುರಪೂರ್	8	1	9
155	ಯಾದಗೀರ್	20	4	24
	ಒಟ್ಟು	**100**	**20**	**120**
	24 ಕೊಪ್ಪಳ ಜಿಲ್ಲೆ			
156	ಕೊಪ್ಪಳ	8	1	9
157	ಯಲಬುರ್ಗಾ	10	2	12
158	ಕುಷ್ಟಗಿ	6	1	7
159	ಗಂಗಾವತಿ	6	1	7
	ಒಟ್ಟು	**30**	**5**	**35**
	25 ಬೀದರ್ ಜಿಲ್ಲೆ			
160	ಔರಾದ	4	3	7
161	ಬಸವಕಲ್ಯಾಣ	8	2	10

162	ಭಾಲ್ಕಿ	8	1	9
163	ಬೀದರ್	7	5	12
164	ಹುಮ್ನಾಬಾದ್	11	1	12
	ಒಟ್ಟು	**38**	**12**	**50**
	26 ಬಳ್ಳಾರಿ ಜಿಲ್ಲೆ			
165	ಬಳ್ಳಾರಿ	7	3	10
166	ಹಡಗಲಿ	11	1	12
167	ಹೊಸಪೇಟೆ	8	3	11
168	ಕೂಡ್ಲಿಗಿ	7	–	7
169	ಹೆಚ್ ಬಿ ಹಳ್ಳಿ	7	1	8
170	ಸಂಡೂರು	5	1	6
171	ಸಿರಗುಪ್ಪ	6	1	7
	ಒಟ್ಟು	**51**	**10**	**61**
	27 ರಾಯಚೂರು ಜಿಲ್ಲೆ			
172	ದೇವದುರ್ಗ	9	2	11
173	ಲಿಂಗಸುಗೂರು	13	2	15
174	ಮಾನ್ವಿ	6	2	8
175	ರಾಯಚೂರು	8	8	16
176	ಸಿಂಧನೂರು	6	1	7
	ಒಟ್ಟು	**42**	**15**	**57**
	ಒಟ್ಟು	**1156**	**279**	**1435**

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
ತಾಲ್ಲೂಕುವಾರು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ವಿವರ

ಅನುಬಂಧ–ಇ

ಕ್ರ.ಸಂ	ಜಿಲ್ಲೆ	ತಾಲ್ಲೂಕು	ವಸತಿ ಶಾಲೆಗಳ ಸಂಖ್ಯೆ
1	ಬೆಂಗಳೂರು ನಗರ	ಆನೇಕಲ್	1
		ಬೆಂಗಳೂರು (ಉ)	1
		ಬೆಂಗಳೂರು (ದ)	1
2	ಬೆಂಗಳೂರು (ಗ್ರಾ)	ಕನಕಪುರ	**5**
		ಚನ್ನಪಟ್ಟಣ	1
		ದೇವನಹಳ್ಳಿ	1
		ರಾಮನಗರ	4
		ಹೊಸಕೋಟೆ	1
		ಮಾಗಡಿ	2
3	ಚಿತ್ರದುರ್ಗ	ಹಿರಿಯೂರು	1
		ಚಿತ್ರದುರ್ಗ	3
		ಚಳ್ಳಕೆರೆ	1
		ಮೊಳಕಾಲ್ಮೂರು	1
		ಹೊಳಲ್ಕೆರೆ	1
		ಹೊಸದುರ್ಗ	1
4	ಕೋಲಾರ	ಬಂಗಾರಪೇಟೆ	2
		ಚಿಂತಾಮಣಿ	1
		ಶ್ರೀನಿವಾಸಪುರ	1
		ಗೌರಿಬಿದನೂರು	1
		ಬಾಗೇಪಲ್ಲಿ	1
		ಶಿಡ್ಲಘಟ್ಟ	1
		ಮುಳಬಾಗಿಲು	1
		ಕೋಲಾರ	3

5	ಶಿವಮೊಗ್ಗ	ಶಿಕಾರಿಪುರ	3
		ಭದ್ರಾವತಿ	2
		ತೀರ್ಥಹಳ್ಳಿ	1
		ಶಿವಮೊಗ್ಗ	3
6	ತುಮಕೂರು	ಮಧುಗಿರಿ	1
		ಪಾವಗಡ	1
		ಕುಣಿಗಲ್	2
		ಶಿರಾ	3
		ಕೊರಟಗೆರೆ	2
		ಚಿಕ್ಕನಾಯಕನಹಳ್ಳಿ	1
		ತುರುವೆಕೆರೆ	1
7	ದಾವಣಗೆರೆ	ಚೆನ್ನಗಿರಿ	1
		ಹರಪ್ಪನಹಳ್ಳಿ	2
		ಹರಿಹರ	3
		ದಾವಣಗೆರೆ	3
		ಹೊನ್ನಾಳಿ	1
		ಜಗಳೂರು	1
8	ಮೈಸೂರು	ನಂಜನಗೂಡು	4
		ಮೈಸೂರು	3
		ಹೆಚ್ ಡಿ ಕೋಟೆ	1
		ಹುಣಸೂರು	1
		ಪಿರಿಯಾಪಟ್ಟಣ	1
		ಟಿ ನರಸೀಪುರ	1
9	ಚಿಕ್ಕಮಗಳೂರು	ಕಡೂರು	6
		ಕೊಪ್ಪ	1
		ಮೂಡಿಗೆರೆ	1
		ತರಿಕೆರೆ	1
		ನರಸಿಂಹರಾಜಪುರ	1
		ಚಿಕ್ಕಮಗಳೂರು	1

10	ದಕ್ಷಿಣ ಕನ್ನಡ	ಮಂಗಳೂರು	3
		ಬೆಳ್ತಂಗಡಿ	2
		ಬಂಟ್ವಾಳ	1
11	ಹಾಸನ	ಹಾಸನ	4
		ಬೇಲೂರು	1
		ಚೆನ್ನರಾಯಪಟ್ಟಣ	1
		ಹೊಳೇನರಸೀಪುರ	3
		ಅರಕಲಗೂಡು	1
		ಅರಸೀಕೆರೆ	1
12	ಮಂಡ್ಯ	ಮಳವಳ್ಳಿ	2
		ಮಂಡ್ಯ	1
		ನಾಗಮಂಗಲ	2
		ಮದ್ದೂರು	2
		ಶ್ರೀರಂಗಪಟ್ಟಣ	2
		ಕೆ ಆರ್ ಪೇಟೆ	1
		ನಾಗಮಂಗಲ	1
		ಪಾಂಡವಪುರ	2
13	ಚಾಮರಾಜನಗರ	ಗುಂಡ್ಲುಪೇಟೆ	3
		ಕೊಳ್ಳೇಗಾಲ	2
	–	ಯಳಂದೂರು	1
		ಚಾಮರಾಜನಗರ	1
14	ಉಡುಪಿ	ಉಡುಪಿ	1
		ಕಾರ್ಕಳ	1
15	ಕೊಡಗು	ಸೋಮವಾರಪೇಟೆ	2
16	ಬೆಳಗಾಂ	ಅಥಣಿ	1
		ಹುಕ್ಕೇರಿ	4
		ಸೌದತ್ತಿ	1
		ಬೈಲಹೊಂಗಲ	2
		ಗೋಕಾಕ್	4

		ಚಿಕ್ಕೋಡಿ	3
		ರಾಮದುರ್ಗ	1
		ರಾಯಭಾಗ್	1
		ಖಾನಪುರ	1
		ಬೆಳಗಾಂ	1
17	ಬಿಜಾಪುರ	ಇಂಡಿ	4
		ಮುದ್ದೇಬಿಹಾಳ	1
		ಬಿಜಾಪುರ	2
		ಬಸವನಬಾಗೇವಾಡಿ	1
		ಸಿಂಧಗಿ	1
18	ಧಾರವಾಡ	ಧಾರವಾಡ	2
		ಹುಬ್ಬಳ್ಳಿ	2
19	ಉತ್ತರಕನ್ನಡ	ಮುಂಡಗೋಡು	1
		ಕುಮಟಾ	1
		ಕಾರವಾರ	1
		ಯಲ್ಲಾಪುರ	1
		ಹುಳಿಯಾಳ	1
		ಭಟ್ಕಳ	1
		ಜೋಯಿಡಾ	1
		ಶಿರಸಿ	1
20	ಬಾಗಲಕೋಟೆ	ಬಾಗಲಕೋಟೆ	4
		ಜಮಖಂಡಿ	1
		ಮುಧೋಳ್	4
		ಬಿಳಗಿ	1
		ಬಾದಾಮಿ	1
21	ಗದಗ	ಗದಗ	3
		ರೋಣ	1
		ಶಿರಹಟ್ಟಿ	1
		ಮುಂಡರಗಿ	1
		ನರಗುಂದ	1

22	ಹಾವೇರಿ	ಹಾನಗಲ್	2
		ಬ್ಯಾಡಗಿ	1
		ಸವಣೂರು	1
		ರಾಣೆಬೆನ್ನೂರು	1
		ಶಿಗ್ಗಾಂವ	1
		ಹಿರೇಕೆರೂರು	1
		ಹಾವೇರಿ	3
23	ಗುಲ್ಬರ್ಗ	ಅಪ್‌ಜಲಪುರ	3
		ಶಹಾಪುರ	1
		ಯಾದಗಿರಿ	4
		ಚಿತಾಪುರ	3
		ಚಿಂಚೋಳಿ	1
		ಸುರಪುರ	2
		ಗುಲ್ಬರ್ಗ	3
		ಆಳಂದ	1
		ಜೇವರ್ಗಿ	2
		ಸೇಡಂ	1
24	ಬಳ್ಳಾರಿ	ಹಗರಿಬೊಮ್ಮನಹಳ್ಳಿ	1
		ಹೊಸಪೇಟೆ	2
		ಕೂಡ್ಲಿಗಿ	2
		ಸಂಡೂರು	3
		ಶಿರಗುಪ್ಪ	1
		ಹಡಗಲಿ	3
		ಬಳ್ಳಾರಿ	2
25	ಬೀದರ್	ಔರಾದ್	1
		ಬೀದರ್	3
		ಹುಮನಾಬಾದ್	1
		ಬಸವಕಲ್ಯಾಣ	3
26	ರಾಯಚೂರು	ಲಿಂಗಸುಗೂರು	2
		ರಾಯಚೂರು	5

		ದೇವದುರ್ಗ	3
		ಮಾನ್ವಿ	3
		ಸಿಂಧನೂರು	1
27	ಕೊಪ್ಪಳ	ಗಂಗಾವತಿ	3
		ಯಲ್ಬುರ್ಗ	4
		ಕೊಪ್ಪಳ	2
		ಕುಷ್ಟಗಿ	2
		ಒಟ್ಟು	**266**

637 (872) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಬಾಲ ಕಾರ್ಮಿಕರ ಸಂಖ್ಯೆ ಎಷ್ಟು? (ಕ್ಷೇತ್ರವಾರು ಹಾಗೂ ಜಮಖಂಡಿ ತಾಲ್ಲೂಕಿನ ಮಾಹಿತಿಯನ್ನು ಒದಗಿಸುವುದು)

ಆ) ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ಸರಕಾರದಲ್ಲಿರುವ ಕಾರ್ಯ ಕ್ರಮಗಳಾವುವು?

ಇ) ಬಾಲ ಕಾರ್ಮಿಕ ಪದ್ಧತಿಯನ್ನು ತಡೆಯಲು ಇರುವ ಕಾನೂನಾತ್ಮಕ ನಿಯಮಗಳಾವುವು?

ಈ) ದಿನಾಂಕ 01-04-2006 ರಿಂದ ಇಲ್ಲಿಯವರೆಗೆ ದಾಖಲಿಸಿದ ಪ್ರಕರಣಗಳೆಷ್ಟು? ಶಿಕ್ಷೆಯಾಗಿರದ ಪ್ರಕರಣಗಳೆಷ್ಟು?

ಉ) ದಿನಾಂಕ 1-4-2005 ರಿಂದ ಎಷ್ಟು ಬಾಲ ಕಾರ್ಮಿಕರನ್ನು ಮುಕ್ತಗೊಳಿಸಲಾಗಿದೆ, ಆ ಎಲ್ಲಾ ಬಾಲ ಕಾರ್ಮಿಕರು ಈಗ ಎಲ್ಲಿದ್ದಾರೆ?

ಊ) ಬಾಲ ಕಾರ್ಮಿಕರ ಪುನರ್ವಸತಿಗಾಗಿ ಮತ್ತು ಅವರ ಶಿಕ್ಷಣಕ್ಕಾಗಿ ಇಲ್ಲಿಯವರೆಗೆ ಕೈಗೊಂಡ ಕ್ರಮಗಳೇನು?

ಋ) ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ಪ್ರತಿ ವರ್ಷ ಖರ್ಚು ಮಾಡುವ ಅನುದಾನವೆಷ್ಟು? ಸಂಪೂರ್ಣ ವಿವರ ಒದಗಿಸುವುದು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು)

ಅ) ರಾಜ್ಯ ಬಾಲ ಕಾರ್ಮಿಕರ ನಿರ್ಮೂಲನಾ ಕ್ರಿಯಾ ಯೋಜನೆ ಅನ್ವಯ 2001ರಲ್ಲಿ ರಾಜ್ಯಾದ್ಯಂತ ಜಿಲ್ಲಾ ಆಡಳಿತಗಳು ನಡೆಸಿದ ಸಮೀಕ್ಷೆಯಂತೆ 39,300 ಬಾಲ ಕಾರ್ಮಿಕರು ಇರುತ್ತಾರೆ ಅದರಂತೆ ಜಮಖಂಡಿ ತಾಲ್ಲೂಕಿನಲ್ಲಿ 96 ಬಾಲ ಕಾರ್ಮಿಕರು ಇರುತ್ತಾರೆ

ಕ್ಷೇತ್ರವಾರು ಸಮೀಕ್ಷೆ ಲಭ್ಯ ಇರುವುದಿಲ್ಲ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ

ಆ) ರಾಜ್ಯದಲ್ಲಿ ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ಕೇಂದ್ರದ ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ ಹಾಗೂ ರಾಜ್ಯ ಸರ್ಕಾರದ ಬಾಲ ಕಾರ್ಮಿಕ ಯೋಜನೆ ಹಾಗೂ ರಾಜ್ಯ ಸರ್ಕಾರದ ಬಾಲ ಕಾರ್ಮಿಕ ನಿರ್ಮೂಲನಾ ಕ್ರಿಯಾ ಯೋಜನೆಯನ್ನು ಜಾರಿ ಮಾಡಲಾಗುತ್ತಿದೆ ಈ ಯೋಜನೆಗಳ ಅಡಿಯಲ್ಲಿ ಕೆಳಕಂಡ ಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ

1] ಅಪಾಯಕಾರಿ ಅಥವಾ ಅಪಾಯಕಾರಿಯಲ್ಲದ ಕಾರ್ಯ ಚಟುವಟಿಕೆಗಳೆರಡರಲ್ಲೂ ಮಜೂರಿಗಾಗಿ ಅಥವಾ ಜೀವನೋಪಾಯಕ್ಕಾಗಿ ದುಡಿಯುವುದರಿಂದ 14 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಪ್ರತಿಬಂಧಿಸುವುದು

2] 14 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಗುರುತಿಸಲು ಮತ್ತು ಅವರು ದುಡಿಯುತ್ತಿರುವುದು ಕಂಡುಬಂದರೆ ಅವರನ್ನು ಬಿಡುಗಡೆಗೊಳಿಸಲು ಕ್ರಮಗಳನ್ನು ತೆಗೆದುಕೊಳ್ಳುವುದು

3] ಬಿಡುಗಡೆಯಾದ ಬಾಲ ಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದು

4] ಬಾಲ ಕಾರ್ಮಿಕರ ಕುಟುಂಬಗಳ ಆರ್ಥಿಕ ಅಭಿವೃದ್ಧಿಗಾಗಿ ಸರ್ಕಾರದ ವಿವಿಧ ಬಡತನ ನಿರ್ಮೂಲನಾ ಯೋಜನೆ ಅಡಿಯಲ್ಲಿ ಉದ್ಯೋಗ ನೀಡಲಾಗುತ್ತಿದೆ

5] ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನ ಮಾಡುವುದಕ್ಕೆ ಸಕಾರಾತ್ಮಕವಾದ ವಾತಾವರಣವನ್ನು ಕಲ್ಪಿಸಲು ಸಮುದಾಯ ಪಾಲ್ಗೊಳ್ಳುವಿಕೆಯ ಮೂಲಕ ಸಮೂಹಕ್ಕೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಕೈಗೆತ್ತಿಕ್ಕೊಳ್ಳುವುದು

ಇ) ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986, ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961 ಹಾಗೂ ಅವುಗಳ ಅಡಿಯಲ್ಲಿ ರಚಿಸಿರುವ ನಿಯಮಗಳು ಬಾಲ ಕಾರ್ಮಿಕ ಪದ್ಧತಿ ತಡೆಯುವ ಕಾನೂನುಗಳಾಗಿರುತ್ತವೆ

ಈ) 1-4-2006 ರಿಂದ ಇಲ್ಲಿಯವರೆಗೆ 216 ಪ್ರಕರಣಗಳು ದಾಖಲಿಸಲಾಗಿದೆ ಈ ಅವಧಿಯಲ್ಲಿ ಶಿಕ್ಷೆಯಾಗಿರದ ಪ್ರಕರಣಗಳು ಯಾವುದೂ ಇರುವುದಿಲ್ಲ

ಉ) 1-4-2005 ರಿಂದ 3614 ಬಾಲ ಕಾರ್ಮಿಕರನ್ನು ವಿಮುಕ್ತಿ ಗೊಳಿಸಲಾಗಿದ್ದು, ಅವರು ವಿಶೇಷ ಶಾಲೆಗಳಲ್ಲಿ ಅಥವಾ ಮುಖ್ಯವಾಹಿನಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ

ಊ) ಬಾಲ ಕಾರ್ಮಿಕರನ್ನು ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ/ರಾಜ್ಯ ಬಾಲ ಕಾರ್ಮಿಕರ ಕ್ರಿಯಾ ಯೋಜನೆ ಅಡಿಯಲ್ಲಿ ನಡೆಯುತ್ತಿರುವ ವಿಶೇಷ ಶಾಲೆಗಳಲ್ಲಿ ದಾಖಲು ಮಾಡಿ ಪುನರ್ ವಸತಿ ಕಲ್ಪಿಸಲಾಗುತ್ತಿದೆ ತದನಂತರ ಶಿಕ್ಷಣವನ್ನು ಮುಂದುವರೆಸಲು ಬಾಲ ಕಾರ್ಮಿಕರ ವಯಸ್ಸು ಮತ್ತು ಕಲಿಕಾ ಸಾಮರ್ಥ್ಯದ ಆಧಾರದ ಮೇಲೆ ಮುಖ್ಯ ವಾಹಿನಿ ಶಾಲೆಗಳಲ್ಲಿ ದಾಖಲು ಮಾಡಲಾಗುತ್ತಿದೆ

ಋ) ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ಪ್ರತಿ ವರ್ಷ ಖರ್ಚು ಮಾಡುವ ಅನುದಾನದ ವಿವರಗಳು ಈ ಕೆಳಕಂಡಂತೆ ಇವೆ

ವರ್ಷ	ರಾಜ್ಯ ಸರ್ಕಾರ	ಕೇಂದ್ರ ಸರ್ಕಾರ
	ರೂ	ರೂ
2001-02	19,49,308	18,64,22,110
2002-03	88,31,696	1,30,96,628
2003-04	1,68,82,802	1,99,70,337
2004-05	1,45,28,326	2,15,50,351
2005-06	1,53,34,940	3,23,68,181
2006-07 ಇಲ್ಲಿಯವರೆಗೆ	1,48,88,664	53,94,292

ಅನುಬಂಧ

ಬಾಲ ಕಾರ್ಮಿಕರ ಜಿಲ್ಲಾವಾರು ವಿವರಗಳು

ಕ್ರ.ಸಂ	ಜಿಲ್ಲೆಯ ಹೆಸರು	ಅಪಾಯಕಾರಿ ಸಂಸ್ಥೆಗಳಲ್ಲಿನ ಬಾಲ ಕಾರ್ಮಿಕರು	ಅಪಾಯಕಾರಿ ಅಲ್ಲದ ಸಂಸ್ಥೆಗಳಲ್ಲಿನ ಬಾಲ ಕಾರ್ಮಿಕರು	ಒಟ್ಟು
1	ಬೆಂಗಳೂರು (ನಗರ)	938	876	1811
2	ಬೆಂಗಳೂರು (ಗ್ರಾ)	1894	739	2633
3	ಬೆಳಗಾಂ	36	84	120
4	ಬಳ್ಳಾರಿ	382	3853	4235
5	ಬೀದರ್	65	299	364
6	ಬಿಜಾಪುರ	102	656	758
7	ಬಾಗಲಕೋಟೆ	334	338	672
8	ಚಿತ್ರದುರ್ಗ	42	1019	1061
9	ಚಿಕ್ಕಮಗಳೂರು	90	45	135
10	ಚಾಮರಾಜನಗರ	117	84	201
11	ದಕ್ಷಿಣ ಕನ್ನಡ	28	24	52
12	ಧಾರವಾಡ	41	53	94
13	ದಾವಣಗೆರೆ	419	1977	9496
14	ಗುಲ್ಬರ್ಗ	138	1254	1392
15	ಗದಗ	25	880	905
16	ಹಾಸನ	81	78	159
17	ಹಾವೇರಿ	56	1040	1096
18	ಕೊಡಗು	27	34	61

19	ಕೋಲಾರ	1382	1800	3182
20	ಕೊಪ್ಪಳ	105	269	374
21	ಮಂಡ್ಯ	299	5668	5967
22	ಮೈಸೂರು	197	368	565
23	ರಾಯಚೂರು	105	1815	1920
24	ಶಿವಮೊಗ್ಗ	44	44	88
25	ತುಮಕೂರು	133	73	206
26	ಉತ್ತರ ಕನ್ನಡ	03	1708	1711
27	ಉಡುಪಿ	29	10	39
	ಒಟ್ಟು	**7,112**	**32,188**	**39,300**

638 (873) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಘಟಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳು ಎಷ್ಟು (ಪ್ರತ್ಯೇಕ ಮಾಹಿತಿ ಒದಗಿಸುವುದು)?

ಆ) ಈ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆಗಳು ಸರ್ಕಾರದ ಮುಂದೆ ಬಂದಿದೆಯೇ? ಹಾಗಿದ್ದಲ್ಲಿ, ಏನು ಕ್ರಮ ಜರುಗಿಸಿದ್ದೀರಿ? ಈ ಬಗ್ಗೆ ಕೈಗೊಂಡ ಕ್ರಮವೇನು?

ಇ) ಮೇಲ್ದರ್ಜೆಗೇರಿಸಲು ಇರುವ ನಿಯಮಾವಳಿಗಳೇನು?

ಈ) ರಬಕವಿ ಬನಹಟ್ಟಿ ನಗರ ಸಭೆಯಲ್ಲಿ ಇರುವ ಸಮುದಾಯ ಆರೋಗ್ಯ ಕೇಂದ್ರವು ಒಂದು ಲಕ್ಷ ಜನಸಂಖ್ಯೆಯನ್ನು ಹೊಂದಿರುವುದರಿಂದ ಇದನ್ನು ಮೇಲ್ದರ್ಜೆಗೇರಿಸಲು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಯಾವಾಗ ಮೇಲ್ದರ್ಜೆಗೇರಿಸಲಾಗುವುದು?

ಉ) ತೇರದಾಳ ನಗರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಹ ಮೇಲ್ದರ್ಜೆಗೇರಿಸಲು ಈಗಾಗಲೇ ಪ್ರಸ್ತಾವನೆಯನ್ನು ಕಳಿಸಲಾಗಿದೆ ಸುಮಾರು

50,000 ಜನಸಂಖ್ಯೆ ಹೊಂದಿರುವ ಕೇವಲ ಪ್ರಾಥಮಿಕ ಚಿಕಿತ್ಸಾ ಕೇಂದ್ರದ ಸೌಲಭ್ಯ ಸಾಲದಾಗಿರುವುದರಿಂದ ಇದನ್ನು ಯಾವಾಗ ಮೇಲ್ದರ್ಜೆಗೇರಿಸಲಾಗುವುದು?

ಊ) ಈ ಎಲ್ಲಾ ಕೇಂದ್ರಗಳಲ್ಲಿ ಸಿಬ್ಬಂದಿಯ ಕೊರತೆ ಇದ್ದು ಯಾವಾಗ ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಜಮಖಂಡಿ ತಾಲ್ಲೂಕಿನಲ್ಲಿ ಒಂದು ತಾಲ್ಲೂಕು ಆಸ್ಪತ್ರೆ, ಒಂದು ಸಮುದಾಯ ಆರೋಗ್ಯ ಕೇಂದ್ರ ಹಾಗೂ 7 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳು ಇರುವುದಿಲ್ಲ

ತಾ ಆಸ್ಪತ್ರೆ, ಜಮಖಂಡಿ	100	ಹಾಸಿಗೆ
ಸ ಆ ಕೇಂದ್ರ, ರಬಕವಿ ಬನಹಟ್ಟಿ	30	ಹಾಸಿಗೆ
ಪ್ರಾ. ಆ ಕೇಂದ್ರ, ಗೋಡೆ	6	ಹಾಸಿಗೆ
ಪ್ರಾ ಆ ಕೇಂದ್ರ, ಹಿಪ್ಪರಗಿ	6	ಹಾಸಿಗೆ
ಪ್ರಾ. ಆ ಕೇಂದ್ರ, ಚಿಮ್ಮಡ	6	ಹಾಸಿಗೆ
ಪ್ರಾ. ಆ ಕೇಂದ್ರ, ಕೊಣ್ಣೂರು	6	ಹಾಸಿಗೆ
ಪ್ರಾ. ಆ ಕೇಂದ್ರ, ಲಿಂಗನೂರು	6	ಹಾಸಿಗೆ
ಪ್ರಾ. ಆ ಕೇಂದ್ರ, ಸಾವಳಗಿ	6	ಹಾಸಿಗೆ
ಪ್ರಾ. ಆ ಕೇಂದ್ರ, ತೇರದಾಳ	6	ಹಾಸಿಗೆ

ಆ) ಬಂದಿದೆ ಮಾರ್ಗಸೂಚಿ ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು

ಇ) ರಾಷ್ಟ್ರೀಯ ಮಾರ್ಗಸೂಚಿ ಪ್ರಕಾರ 30,000 ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ 1,20,000 ಜನಸಂಖ್ಯೆಗೆ ಒಂದು ಸಮುದಾಯ ಆರೋಗ್ಯ ಕೇಂದ್ರಗಳನ್ನು ತೆರೆಯಬಹುದಾಗಿದೆ

ಈ) ರಬಕವಿ ಬನಹಟ್ಟಿನಗರ ಸಭೆ ವ್ಯಾಪ್ತಿಯ ಆಸ್ಪತ್ರೆಯನ್ನು ಈಗಾಗಲೇ ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಲಾಗಿದೆ

ಊ) ತೇರದಾಳ ನಗರದಲ್ಲಿ ಈಗಾಗಲೇ ಪ್ರಾಥಮಿಕ ಆರೋಗ್ಯ ಕೇಂದ್ರವಿದ್ದು ಪಟ್ಟಣವನ್ನು ಒಳಗೊಂಡಂತೆ 57,000 ಜನಸಂಖ್ಯೆಗೆ ಆರೋಗ್ಯ ಸೌಲಭ್ಯಗಳನ್ನು ಒದಗಿಸುತ್ತದೆ ಮಾರ್ಗಸೂಚಿ ಪ್ರಕಾರ ಮೇಲ್ದರ್ಜೆಗೇರಿಸಲು ಪರಿಶೀಲಿಸಲಾಗುವುದು

ಋ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಖಾಯಂ ಆಗಿ 500 ವೈದ್ಯಾಧಿಕಾರಿಗಳನ್ನು ಎರಡು ಹಂತಗಳಲ್ಲಿ ವಿಶೇಷ ನೇಮಕಾತಿ ನಿಯಮಗಳ ಅಡಿ ಭರ್ತಿ ಮಾಡಲು ಅನುಮತಿ ನೀಡಿದ್ದು, ಇದರಲ್ಲಿ ಮೊದಲ ಹಂತವಾಗಿ 250 ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ ಆಯ್ಕೆ ಪಟ್ಟಿ ಪ್ರಕಟಿಸಿದ ನಂತರ 2ನೇ ಹಂತದಲ್ಲಿ 250 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು ಹಾಗೆಯೇ 2807 ಖಾಲಿ ಇರುವ ಅರೆ–ವೈದ್ಯಕೀಯ ಸಿಬ್ಬಂದಿಗಳನ್ನು ಭರ್ತಿ ಮಾಡುವ ಸಲುವಾಗಿ ವಿಶೇಷ ನೇರ ನೇಮಕಾತಿ ಸಮಿತಿಯ ಮುಖಾಂತರ ಅರ್ಜಿ ಆಹ್ವಾನಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಖಾಲಿ ಹುದ್ದೆಗಳನ್ನು ಆದ್ಯತೆಯ ಮೇರೆಗೆ ತುಂಬಲಾಗುವುದು

ಇದಲ್ಲದೆ ಗುತ್ತಿಗೆ ಆಧಾರದ ಮೇಲೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ

874 ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನಲ್ಲಿರುವ ಅಲ್ಪಸಂಖ್ಯಾತರ ಸಂಖ್ಯೆ ಎಷ್ಟು?

ಆ) ಯಾವ ಯಾವ ಸಮುದಾಯದವರನ್ನು ಅಲ್ಪಸಂಖ್ಯಾತರೆಂದು ಕರೆಯಲಾಗುವುದು (ಪ್ರತ್ಯೇಕವಾಗಿ ಅಂಕಿ ಅಂಶಗಳನ್ನು ಒದಗಿಸುವುದು)?

ಇ) ಯಾವ ಯಾವ ಸಮುದಾಯದ ಜನರಿಗೆ ಇಲಾಖೆಯಿಂದ ದಿನಾಂಕ 01 04 2004 ರಿಂದ ಇಲ್ಲಿಯವರೆಗೆ ಒದಗಿಸಲಾಗಿರುವ ವಿವಿಧ ಸೌಲಭ್ಯಗಳಾವುವು? (ಮಾಹಿತಿ ಒದಗಿಸುವುದು)?

ಈ) ತಾಲ್ಲೂಕಿನಲ್ಲಿ ಅನೇಕ ಪಟ್ಟಣಗಳಲ್ಲಿರುವ ಐತಿಹಾಸಿಕ ಮಸೀದಿಗಳನ್ನು ಮತ್ತು ಬಸ್ತಿಗಳ ಜೀರ್ಣೋದ್ಧಾರಕ್ಕೆ ಅನುದಾನ ಅವಶ್ಯಕತೆ ಇದ್ದು, ಯಾವಾಗ ಮಂಜೂರು ಮಾಡಲಾಗುವುದು?

ಉ) ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಯಾವ ಯಾವ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ) ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಒಟ್ಟು

ಆ) 51851 190 21196 217 24 73478

ಆ)

	ರಾಜ್ಯದ ಜನಸಂಖ್ಯೆ (ಲಕ್ಷಗಳಲ್ಲಿ)
ಮುಸ್ಲಿಂ	64 93
ಕ್ರಿಶ್ಚಿಯನ್	10 09
ಜೈನ್	4 13
ಪಾರ್ಸಿ	–
ಸಿಖ್	0 15
ಬೌದ್ಧರು	3 93
ಒಟ್ಟು	**82 93**

ಇ) ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಹಾಗೂ ಬೌದ್ಧ ಸಮುದಾಯದವರಿಗೆ ಈ ಇಲಾಖೆಯಿಂದ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗಿದೆ

1 ಹೊಸ ಮೊರಾರ್ಜಿ ದೇಸಾಯಿ ನಿವಾಸಿ ಶಾಲೆಗಳು

2 ಅಲ್ಪಸಂಖ್ಯಾತರಿಗಾಗಿ ಕೌಶಲ್ಯ ಅಭಿವೃದ್ಧಿ ಯೋಜನೆ

3 ಸರ್ಕಾರಿ ಅಲ್ಪಸಂಖ್ಯಾತರಿಗಾಗಿ ಕೌಶಲ್ಯ ಅಭಿವೃದ್ಧಿ ಯೋಜನೆ ಕಲಿಕೆ ಸಾಧನಗಳು

4 ಅನುದಾನಿತ ಅಲ್ಪಸಂಖ್ಯಾತ ಸಂಸ್ಥೆ ಆಧುನಿಕ ವಿಷಯಗಳ ಬಗ್ಗೆ ಶಿಕ್ಷಣ

5 ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಉತ್ತೇಜನ

6 ಅಲ್ಪಸಂಖ್ಯಾತರಿಗಾಗಿ ಸಮೂಹ ವಸತಿ ನಿರ್ಮಾಣದ ಯೋಜನೆ

7 ಅಲ್ಪಸಂಖ್ಯಾತರಿಗಾಗಿ ಕಾನೂನು ಪದವೀಧರರಿಗೆ ಶಿಷ್ಯವೇತನ

8 ಅಲ್ಪಸಂಖ್ಯಾತರಿಗಾಗಿ ಹಾಸ್ಟೆಲ್‌ಗಳು, ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಹಾಸ್ಟೆಲ್‌ಗಳು

9 ಅಲ್ಪಸಂಖ್ಯಾತರ ಐಟಿಐ/ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ

10 ಅಲ್ಪಸಂಖ್ಯಾತರ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ವಿದ್ಯಾರ್ಥಿ ನಿಲಯಗಳು

11 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು

12 ಅಲ್ಪಸಂಖ್ಯಾತರಿಗಾಗಿ ವೃತ್ತಿ ತರಬೇತಿ

13 ಅಲ್ಪಸಂಖ್ಯಾತರಿಗಾಗಿ ಅನಾಥಾಲಯಗಳು

ಈ) ತಾಲ್ಲೂಕಿನ ವಕ್ಫ್ ಸಂಸ್ಥೆಗಳಿಗೆ ಈ ಕೆಳಕಂಡಂತೆ ಸಹಾಯಧನ ಮಂಜೂರು ಮಾಡಲಾಗಿದೆ

ವರ್ಷ	ಸಹಾಯಧನ	ವಕ್ಫ್ಸ	ಸಂಸ್ಥೆ ಸಂಖ್ಯೆ
2003–04	ರೂ 30,000	1 ಖಬ್ಬಾ	ಮಸೀದಿ, ಜಮಖಂಡಿ
2004–05	ರೂ 20,000	1 ಮುಸ್ಲಿಂ	ಸ್ಮಶಾನ, ರಬಕವಿ
2005–06	ಇಲ್ಲ	–	
2006–07	ಇಲ್ಲ	–	

ಉ) 1 ಹೊಸ ಮೊರಾರ್ಜಿ ದೇಸಾಯಿ ನಿವಾಸಿ ಶಾಲೆಗಳು

2 ಅಲ್ಪಸಂಖ್ಯಾತರಿಗಾಗಿ ಕೌಶಲ್ಯ ಅಭಿವೃದ್ಧಿ ಯೋಜನೆ

3 ಸರ್ಕಾರಿ ಅಲ್ಪಸಂಖ್ಯಾತರ ಶಾಲೆಗಳಿಗೆ ಶಿಕ್ಷಣ ಮತ್ತು ಕಲಿಕೆ ಸಾಧನಗಳು

4 ಅನುದಾನಿತ ಅಲ್ಪಸಂಖ್ಯಾತರ ಸಂಸ್ಥೆ ಆಧುನಿಕ ವಿಷಯಗಳ ಬಗ್ಗೆ ಶಿಕ್ಷಣ

5 ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಉತ್ತೇಜನ

6 ಅಲ್ಪಸಂಖ್ಯಾತರಿಗಾಗಿ ಸಮೂಹ ವಸತಿ ನಿರ್ಮಾಣದ ಯೋಜನೆ

7 ಅಲ್ಪಸಂಖ್ಯಾತರಿಗಾಗಿ ಕಾನೂನು ಪದವೀಧರರಿಗೆ ಶಿಷ್ಯವೇತನ

8 ಅಲ್ಪಸಂಖ್ಯಾತರಿಗಾಗಿ ಹಾಸ್ಟೆಲ್‌ಗಳು, ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಹಾಸ್ಟೆಲ್‌ಗಳು

9 ಅಲ್ಪಸಂಖ್ಯಾತರ ಐಟಿಐ/ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ

10 ಅಲ್ಪಸಂಖ್ಯಾತರ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ವಿದ್ಯಾರ್ಥಿ ನಿಲಯಗಳು

11 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು

12 ಅಲ್ಪಸಂಖ್ಯಾತರಿಗಾಗಿ ವೃತ್ತಿ ತರಬೇತಿ

ಅಲ್ಪಸಂಖ್ಯಾತರಿಗಾಗಿ ಅನಾಥಾಲಯಗಳು

640 (709) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಯಲ್ಲಿ ಈಗಾಗಲೇ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವಸತಿ ಗೃಹಗಳ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಯಲ್ಲಿ ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ ಆಗಿನ ನಿರ್ದೇಶಕರು ಹಾಗೂ ಆಗಿನ ಇನ್‌ಚಾರ್ಜ್ ಎಸ್ಟೇಟ್ ಆಫೀಸರ್‌ರವರು ಇವರಿಬ್ಬರಿಗೂ ಸುಮಾರು 6 ತಿಂಗಳುಗಳ ಹಿಂದೆ ವರ್ಗಾವಣೆಯಾಗಿ, ವರ್ಗಾವಣೆಯಾದ ಸ್ಥಳಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಅವರು ಕಿಮ್ಸ್ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ತೆಗೆದುಕೊಂಡಿದ್ದ ವಸತಿ ಗೃಹ ಖಾಲಿ ಮಾಡದೇ ಅನಧಿಕೃತವಾಗಿ ತಮ್ಮ ಅಧೀನದಲ್ಲಿ ಇಟ್ಟುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಕಿಮ್ಸ್ ಆಸ್ಪತ್ರೆಯ ವಸತಿ ಗೃಹಗಳನ್ನು ಅನಧಿಕೃತವಾಗಿ ತಮ್ಮ ಅಧೀನದಲ್ಲಿ ಇಟ್ಟುಕೊಂಡಿರುವುದನ್ನು ತೆರವುಗೊಳಿಸಿ ಇವರ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು)

ಅ) – ಹೌದು –

ಆ) ಕಿಮ್ಸ್‌ನ ಹಿಂದಿನ ನಿರ್ದೇಶಕರು ಮತ್ತು ಎಸ್ಟೇಟ್ ಆಫೀಸರ್ ರವರು ಕ್ರಮವಾಗಿ ದಿನಾಂಕ 23-11-2007 ಮತ್ತು 30-09-2006 ರಂದು ವಸತಿ ಗೃಹವನ್ನು ಖಾಲಿ ಮಾಡಿ ಸ್ವಾಧೀನವನ್ನು ಈಗಾಗಲೇ ಸಂಸ್ಥೆಗೆ ವಹಿಸಿರುತ್ತಾರೆ

ಇ) – ಉದ್ಭವಿಸುವುದಿಲ್ಲ –

641 (1075) ಶ್ರೀ ಶ್ರೀರಾಮರೆಡ್ಡಿ ಜಿ ಏ (ಬಾಗೇಪಲ್ಲಿ) ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪಶುವೈದ್ಯ ಹುದ್ದೆಗಳ ಸಂಖ್ಯೆ ಎಷ್ಟು?

ಆ) ಇವುಗಳ ಪೈಕಿ ಭರ್ತಿಯಾಗಿರುವ ಮತ್ತು ಖಾಲಿ ಇರುವ ಪಶುವೈದ್ಯ ಹುದ್ದೆಗಳ ಸಂಖ್ಯೆ ಎಷ್ಟು?

ಇ) ಖಾಲಿ ಇರುವ ಪಶುವೈದ್ಯ ಹುದ್ದೆಗಳನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ರಾಜ್ಯದಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ ಒಟ್ಟಾರೆ 1985 ಪಶುವೈದ್ಯಾಧಿಕಾರಿಗಳ ಹುದ್ದೆಗಳಿವೆ

ಆ) ಇವುಗಳಲ್ಲಿ 1161 ಹುದ್ದೆಗಳು ಭರ್ತಿಯಾಗಿದ್ದು, 824 ಹುದ್ದೆಗಳು ಖಾಲಿ ಇವೆ

ಇ) ಶೇಕಡಾ 90 ರಷ್ಟು ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಮುಂಬಡ್ತಿ ಮುಖೇನ ಭರ್ತಿ ಮಾಡಲಾಗುವುದು ಶೇ 10% ರಷ್ಟು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಬೇಕಾಗಿದ್ದು 4 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ನೇರ ನೇಮಕಾತಿಗಾಗಿ ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡುವ ಕ್ರಮ ಇದ್ದು, ಪ್ರಸ್ತುತ ಕರ್ನಾಟಕ ಲೋಕ ಸೇವಾ ಆಯೋಗದಿಂದ 41 ಪಶುವೈದ್ಯಾಧಿಕಾರಿಗಳ ನೇಮಕಾತಿಗೆ ಸಂದರ್ಶನ ಮುಗಿದಿದ್ದು, ನೇಮಕಾತಿ ಆದೇಶ ನೀಡಬೇಕಾಗಿದೆ ಮತ್ತೆ 77 ಪಶುವೈದ್ಯಾಧಿಕಾರಿಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ವಿಶೇಷ ನೇಮಕಾತಿ ನಿಯಮ 2003ರ ಅಡಿ 577 ಪಶುವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಬೇಕಾಗಿದ್ದು, ಇದುವರೆಗೆ 383 ಪಶುವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಲಾಗಿದ್ದು ಉಳಿಕೆ 194 ಪಶುವೈದ್ಯಾಧಿಕಾರಿಗಳ ನೇಮಕಾತಿ ಮಾಡಲು ಪ್ರಸ್ತಾವನೆ ಸಹ ಪರಿಶೀಲನೆಯಲ್ಲಿದೆ ಪಶುವೈದ್ಯಕೀಯ ಮೇಲ್ವಿಚಾರಕರು ಮತ್ತು ಹಿರಿಯ ಪಶುವೈದ್ಯಕೀಯ ಪರೀಕ್ಷಕರು ಹುದ್ದೆಯನ್ನು ಮುಂಬಡ್ತಿ ಮುಖೇನ ಭರ್ತಿ

ಮಾಡಲಾಗುತ್ತದೆ 300 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ಇಲಾಖೆಯಲ್ಲಿನ ಎಸ್ ಎಸ್ ಎಲ್ ಸಿ ಪಾಸಾದ ಡಿ ದರ್ಜೆ ನೌಕರರಿಗೆ ತರಬೇತಿ ನೀಡಿ ಬಡ್ತಿ ಮುಖೇನ ತುಂಬಲು ಕ್ರಮವಹಿಸಿದ್ದು ಈಗಾಗಲೇ 244 ಡಿ ದರ್ಜೆ ನೌಕರರಿಗೆ ತರಬೇತಿ ನೀಡಲಾಗಿದೆ ಎಸ್ ಎಸ್ ಎಲ್ ಸಿ ಅಂಕಪಟ್ಟಿ ಪರೀಕ್ಷೆ ಮಂಡಳಿಯ ಪರಿಶೀಲನೆಗೆ ಕಳುಹಿಸಿದ್ದು ವರದಿ ಬಂದ ಕೂಡಲೇ ಭರ್ತಿ ಮಾಡಲು ಕ್ರಮ ಜರುಗಿಸಲಾಗುವುದು 300 ಡಿ ದರ್ಜೆ ನೌಕರರ ಹುದ್ದೆಗಳನ್ನು ಔಟ್ ಸೋರ್ಸ್ ಮುಖೇನ ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ

642 (876) ಶ್ರೀಮತಿ ಸುನಿತ ವೀರಪ್ಪಗೌಡ ಜೆ (ಬನ್ನೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ದಾದಿಯರ ಹುದ್ದೆಗಳೆಷ್ಟು?

ಆ) ಈ ಹುದ್ದೆಗಳಿಗೆ ನೇಮಕ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ದಾದಿಯರ ಸಂಖ್ಯೆ 536

ಆ) ದಾದಿಯರನ್ನು ನೇಮಕ ಮಾಡಲು ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿಗಳು ಪರಿಶೀಲನೆಯಲ್ಲಿದ್ದು, ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ನೇಮಕಾತಿ ಪ್ರಕ್ರಿಯೆ ಮುಗಿದ ಕೂಡಲೇ ಆದ್ಯತೆ ಮೇರೆಗೆ ಭರ್ತಿ ಮಾಡಲಾಗುವುದು

643 (877) ಶ್ರೀಮತಿ ಸುನಿತ ವೀರಪ್ಪಗೌಡ ಜೆ (ಬನ್ನೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಟ್ಟಡಗಳಿಲ್ಲದೆ ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ಕೇಂದ್ರಗಳಿಗೆ ಕಟ್ಟಡ ನಿರ್ಮಿಸಲು ಅನುದಾನ ಬಿಡುಗಡೆ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ?

ಇ) ಹಾಗಿದ್ದಲ್ಲಿ, ಯಾವಾಗ ಅನುದಾನ ಬಿಡುಗಡೆ ಮಾಡಲಾಗುವುದು?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 100 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸ್ವಂತ ಕಟ್ಟಡ ಇರುವುದಿಲ್ಲ ಪಟ್ಟಿ ಲಗತ್ತಿಸಿದೆ.

ಆ) ನಿವೇಶನ ಲಭ್ಯತೆಯ ಆಧಾರದ ಮೇಲೆ ಆರ್ ಐ ಡಿ ಎಫ್, ಕೆ ಹೆಚ್ ಎಸ್ ಡಿ ಆರ್ ಪಿ ಹಾಗೂ ಜಿಲ್ಲಾ ಪಂಚಾಯತ್ ಯೋಜನೆಯ ಅಡಿಯಲ್ಲಿ ಕಟ್ಟಡಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ

ಇ) 2007–08 ನೇ ಸಾಲಿನಲ್ಲಿ ಆರ್ ಐ ಡಿ ಎಫ್–12ರ ಯೋಜನೆ ಅಡಿಯಲ್ಲಿ 12 ಪ್ರಾ ಆ ಕೇಂದ್ರಗಳಿಗೆ ಅನುದಾನ ಬಿಡುಗಡೆಗೊಳಿಸಲಾಗುತ್ತಿದೆ ಕೆ ಹೆಚ್ ಎಸ್ ಡಿ ಆರ್ ಪಿ ಯೋಜನೆ ಅಡಿಯಲ್ಲಿ 2007–08ನೇ ಸಾಲಿನಲ್ಲಿ 38 ಪ್ರಾ.ಆ ಕೇಂದ್ರಗಳಿಗೆ ಅನುದಾನ ಬಿಡುಗಡೆಗೊಳಿಸಲಾಗುವುದು ಜಿಲ್ಲಾ ಪಂಚಾಯತ್ ಯೋಜನೆ ಅಡಿಯಲ್ಲಿ 1 ಪ್ರಾಥಮಿಕ ಆರೋಗ್ಯ ಘಟಕಕ್ಕೆ 2006–07ನೇ ಸಾಲಿನಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ತುಮಕೂರು ಜಿಲ್ಲೆಯಲ್ಲಿ 3 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡ ನಿರ್ಮಾಣ ಮಾಡಲು ಪ್ರಸಕ್ತ ಸಾಲಿನ ಜಿಲ್ಲಾ ಪಂಚಾಯತ್ ಅನುದಾನದಲ್ಲಿ ರೂ 1 21 ಕೋಟಿಗಳ ಅಂದಾಜು ವೆಚ್ಚಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ

ವಿಧಾನ ಸಭಾ ಪ್ರಶ್ನೆ ಸಂಖ್ಯೆ. 877 (ದಿನಾಂಕ:8.2.07)
ಕಟ್ಟಡಗಳು ಇಲ್ಲದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿವರ

ಕ್ರಮ ಸಂಖ್ಯೆ	ಜಿಲ್ಲೆಗಳು	ಕಟ್ಟಡವಿಲ್ಲದ ಪ್ರಾ.ಆ. ಕೇಂದ್ರಗಳ ಸಂಖ್ಯೆ
1	ಬೆಂಗಳೂರು ನಗರ	2
2	ಬೆಂಗಳೂರು ಗ್ರಾ	5
3	ತುಮಕೂರು	21
4	ಶಿವಮೊಗ್ಗ	6
5	ಕೋಲಾರ	5
6	ಚಿತ್ರದುರ್ಗ	3
7	ಬೆಳಗಾವಿ	6

8	ವಿಜಾಪುರ	3
9	ಗದಗ	3
10	ಹಾವೇರಿ	1
11	ರಾಯಚೂರು	1
12	ಚಾಮರಾಜನಗರ	1
13	ಚಿಕ್ಕಮಗಳೂರು	4
14	ದಕ್ಷಿಣ ಕನ್ನಡ	1
15	ಹಾಸನ	4
16	ಕೊಡಗು	1
17	ಮಂಡ್ಯ	11
18	ಮೈಸೂರು	15
19	ಉಡುಪಿ	2
20	ಗುಲ್ಬರ್ಗ	2
21	ಕೊಪ್ಪಳ	2
22	ಬೀದರ್	1
	ಒಟ್ಟು	**100**

644 (525) **ಶ್ರೀ ಸುರೇಶ್ ಎಸ್ ಮಾರಿಹಾಳ (ಕಿತ್ತೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?**

ಅ) ಕಿತ್ತೂರು ಪಟ್ಟಣಕ್ಕೆ ಬಾಲಕಿಯರ ವಿದ್ಯಾರ್ಥಿನಿಲಯ ಮಂಜೂರಾತಿ ಕೋರಿ ಪ್ರಸ್ತಾವನೆ ಏನಾದರೂ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಹೌದು

ಆ) ಪ್ರಸಕ್ತ ಸಾಲಿನಲ್ಲಿ ಹಿಂದುಳಿದ ವರ್ಗಗಳ 52 ವಿದ್ಯಾರ್ಥಿನಿಲಯಗಳನ್ನು ಹಾಗೂ ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ 50 ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗಿದೆ ಇದರಲ್ಲಿ ಕಿತ್ತೂರು ಪಟ್ಟಣಕ್ಕೆ ಸಂಬಂಧಪಟ್ಟಂತೆ ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಿರುವುದಿಲ್ಲ ಮುಂದಿನ ವರ್ಷದಲ್ಲಿ ಆಯವ್ಯಯದಲ್ಲಿ ಒದಗಿಸುವ ಅನುದಾನ ಅನುಸರಿಸಿ ರಾಜ್ಯದಲ್ಲಿನ ಇನ್ನಿತರ ಸ್ಥಳಗಳಲ್ಲಿನ ಬೇಡಿಕೆಗಳೊಂದಿಗೆ ಹೋಲಿಸಿ ಕಿತ್ತೂರು ಪಟ್ಟಣದಲ್ಲಿ ಹೊಸ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುವುದು

645 (526) ಶ್ರೀ ಸುರೇಶ್ ಎಸ್ ಮಾರಿಹಾಳ (ಕಿತ್ತೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿತ್ತೂರು ಮತಕ್ಷೇತ್ರದಲ್ಲಿರುವ ಪ್ರಾಥಮಿಕ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು? ಅವು ಯಾವುವು?

ಆ) ಈ ಕೇಂದ್ರಗಳಲ್ಲಿ ಇರಬೇಕಾದ ವೈದ್ಯರು ಹಾಗೂ ಇತರೆ ಸಿಬ್ಬಂದಿಗಳ ಸಂಖ್ಯೆ ಎಷ್ಟು?

ಇ) ಈಗ ಕಾರ್ಯನಿರ್ವಹಿಸುತ್ತಿರುವ ವೈದ್ಯರು ಹಾಗೂ ಸಿಬ್ಬಂದಿಯ ಸಂಖ್ಯೆ ಎಷ್ಟು?

ಈ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಕಿತ್ತೂರು ಮತಕ್ಷೇತ್ರದಲ್ಲಿ 10 ಪ್ರಾ ಆ ಕೇಂದ್ರಗಳು ಹಾಗೂ ಒಂದು ಸಮುದಾಯ ಆರೋಗ್ಯ ಕೇಂದ್ರವಿದೆ

ಕ್ರ ಸಂ	ಸ ಆರೋಗ್ಯ ಕೇಂದ್ರ	ಕಿತ್ತೂರು
1	ಪ್ರಾಥಮಿಕ ಆರೋಗ್ಯ ಕೇಂದ್ರ	ಹುಣಸೀಕಟ್ಟಿ
2	ಪ್ರಾಥಮಿಕ ಆರೋಗ್ಯ ಕೇಂದ್ರ	ಇಟಗಿ
3	ಪ್ರಾಥಮಿಕ ಆರೋಗ್ಯ ಕೇಂದ್ರ	ಎಂ ಕೆ ಹುಬ್ಬಳ್ಳಿ
4	ಪ್ರಾಥಮಿಕ ಆರೋಗ್ಯ ಕೇಂದ್ರ	ನಾಗನೂರು

5	ಪ್ರಾಥಮಿಕ ಆರೋಗ್ಯ ಕೇಂದ್ರ	ನೇಗಿನಹಾಳ
6	ಪ್ರಾಥಮಿಕ ಆರೋಗ್ಯ ಕೇಂದ್ರ	ತಿಗಡಿ
7	ಪ್ರಾಥಮಿಕ ಆರೋಗ್ಯ ಕೇಂದ್ರ	ಅಸುಂಡಿ
8	ಪ್ರಾಥಮಿಕ ಆರೋಗ್ಯ ಕೇಂದ್ರ	ಹಿರೇಕುಂಬಿ
9	ಪ್ರಾಥಮಿಕ ಆರೋಗ್ಯ ಕೇಂದ್ರ	ಇನಾಂಹೊಂಗಲ
10	ಪ್ರಾಥಮಿಕ ಆರೋಗ್ಯ ಕೇಂದ್ರ	ಕಡಬಿ

ಆ) ಕಿತ್ತೂರು ಮತಕ್ಷೇತ್ರದ ಎಲ್ಲಾ ಆಸ್ಪತ್ರೆಗಳಲ್ಲಿ 11 ವೈದ್ಯರು ಮತ್ತು 152 ಇತರೆ ಸಿಬ್ಬಂದಿ ಹುದ್ದೆಗಳು ಮಂಜೂರಾಗಿರುತ್ತವೆ

ಇ) ಕಿತ್ತೂರು ಮತಕ್ಷೇತ್ರದಲ್ಲಿ ಎಲ್ಲಾ ಆಸ್ಪತ್ರೆಗಳಲ್ಲಿ 11 ವೈದ್ಯರು ಮತ್ತು 126 ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ

ಈ) ಕಿತ್ತೂರು ಮತಕ್ಷೇತ್ರದಲ್ಲಿ ವೈದ್ಯರ ಹುದ್ದೆ ಖಾಲಿ ಇರುವುದಿಲ್ಲ 26 ಸಿಬ್ಬಂದಿಗಳ ಹುದ್ದೆ ಖಾಲಿ ಇರುತ್ತದೆ

ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಖಾಯಂ ಆಗಿ 500 ವೈದ್ಯಾಧಿಕಾರಿಗಳನ್ನು ಎರಡು ಹಂತಗಳಲ್ಲಿ ವಿಶೇಷ ನೇಮಕಾತಿ ನಿಯಮಗಳ ಅಡಿ ಭರ್ತಿ ಮಾಡಲು ಅನುಮತಿ ನೀಡಿದ್ದು, ಇದರಲ್ಲಿ ಮೊದಲ ಹಂತವಾಗಿ 250 ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ ಆಯ್ಕೆ ಪಟ್ಟಿ ಪ್ರಕಟಿಸಿದ ನಂತರ 2ನೇ ಹಂತದಲ್ಲಿ 250 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು ಹಾಗೆಯೇ 2807 ಖಾಲಿ ಇರುವ ಅರೆ–ವೈದ್ಯಕೀಯ ಸಿಬ್ಬಂದಿಗಳನ್ನು ಭರ್ತಿ ಮಾಡುವ ಸಲುವಾಗಿ ವಿಶೇಷ ನೇರ ನೇಮಕಾತಿ ಸಮಿತಿಯ ಮುಖಾಂತರ ಅರ್ಜಿ ಆಹ್ವಾನಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿದೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಖಾಲಿ ಹುದ್ದೆಗಳನ್ನು ಆದ್ಯತೆಯ ಮೇರೆಗೆ ತುಂಬಲಾಗುವುದು

ಇದಲ್ಲದೆ ಗುತ್ತಿಗೆ ಆಧಾರದ ಮೇಲೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ

646 (527) ಶ್ರೀ ಸುರೇಶ್ ಎಸ್. ಮಾರಿಹಾಳ (ಕಿತ್ತೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿತ್ತೂರು ಸಮುದಾಯ ಆರೋಗ್ಯ ಕೇಂದ್ರ ಹಾಗೂ ಸಂಪಗಾಂವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆಗಳು ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಯಾವಾಗ ಮೇಲ್ದರ್ಜೆಗೇರಿಸಲಾಗುವುದು?

ಇ) ಇದರ ಅಂದಾಜು ವೆಚ್ಚವೆಷ್ಟು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸರ್ಕಾರಕ್ಕೆ ಸದರಿ ಪ್ರಸ್ತಾವನೆಗಳು ಬಂದಿರುತ್ತವೆ

ಆ) ಮಾರ್ಗಸೂಚಿ ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು

ಇ) ಉದ್ಭವಿಸುವುದಿಲ್ಲ

647 (529) ಶ್ರೀ ತಿಮ್ಮರಾಯಪ್ಪ ಕೆ ಎಂ (ಪಾವಗಡ) ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪಶುವೈದ್ಯ ಆಸ್ಪತ್ರೆಗಳೆಷ್ಟು?

ಆ) ಪಶುವೈದ್ಯ ಆಸ್ಪತ್ರೆಗಳನ್ನು ತೆರೆಯಲು ಸರ್ಕಾರ ತೀರ್ಮಾನಿಸಿದೆಯೇ?

ಇ) ಹಾಗಿದ್ದಲ್ಲಿ, ಪಾವಗಡ ತಾಲ್ಲೂಕಿನಲ್ಲಿ ಅವಶ್ಯ ಇರುವ ಗ್ರಾಮಗಳಿಗೆ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಈ) ಹಾಲಿ ಇರುವ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಉ) ಹಾಗಿದ್ದಲ್ಲಿ, ಕೊಂಡೇತಿಮ್ಮನಹಳ್ಳಿಯ ಪಶು ವೈದ್ಯ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ರಾಜ್ಯದಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ 295 ಪಶು ಆಸ್ಪತ್ರೆಗಳನ್ನೊಳಗೊಂಡಂತೆ 3878 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ

ಆ) ಡಾ ನಂಜುಂಡಪ್ಪ ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿ ವರದಿಯ ಪ್ರಕಾರ ರಾಜ್ಯದಲ್ಲಿ 318 ಪಶುವೈದ್ಯ ಸಂಸ್ಥೆಗಳು ಕೊರತೆ ಇವೆ ಇವುಗಳು ಯಾವ ತಾಲ್ಲೂಕುಗಳಲ್ಲಿ ಕೊರತೆ ಇವೆಯೇ ಆ ತಾಲ್ಲೂಕುಗಳಲ್ಲಿ ಆದ್ಯತೆ ಮೇಲೆ 8 ವರ್ಷಗಳ ಅವಧಿಯಲ್ಲಿ ತೆರೆಯಲು ಕಾರ್ಯಕ್ರಮ ಸರ್ಕಾರದಲ್ಲಿದೆ

ಇ) ಪಾವಗಡ ತಾಲ್ಲೂಕು ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಮಿತಿ ವರದಿಯ ಪ್ರಕಾರ ಅತಿ ಹೆಚ್ಚು ಹಿಂದುಳಿದ ತಾಲ್ಲೂಕು ಆಗಿದ್ದು, 81,481 ಜಾನುವಾರು ಘಟಕಗಳಿವೆ ಪ್ರತಿ 5000 ಜಾನುವಾರುಗಳಿಗೆ ಒಂದು ಘಟಕದಂತೆ 16 ಪಶುವೈದ್ಯ ಸಂಸ್ಥೆಗಳಿರಬೇಕಾಗಿದೆ ಹಾಲಿ 17 ಸಂಸ್ಥೆಗಳು ಪಾವಗಡ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿವೆ ಆದ್ದರಿಂದ ಪಾವಗಡ ತಾಲ್ಲೂಕು ಸೇರಿದಂತೆ ಪಶುವೈದ್ಯ ಶಾಲೆ ಕೊರತೆ ಇಲ್ಲದೆ ತಾಲ್ಲೂಕುಗಳಲ್ಲಿ ಹೊಸ ಪಶು ಚಿಕಿತ್ಸಾಲಯ ತೆರೆಯಲು ಇನ್ನೂ ಯಾವುದೇ ಕಾಲಮಿತಿ ನಿಗಧಿಪಡಿಸಿರುವುದಿಲ್ಲ

ಈ) ಇಲಾಖೆಯಲ್ಲಿ ಪಶು ಚಿಕಿತ್ಸಾಲಯಗಳನ್ನು ಪಶು ಆಸ್ಪತ್ರೆಗಳನ್ನಾಗಿ ಮತ್ತು ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ / ಕೃತಕ ಗರ್ಭದಾರಣಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯ ಮೇಲ್ದರ್ಜೆಗೇರಿಸುವ ಕಾರ್ಯಕ್ರಮವಿದ್ದು ಹಂತ ಹಂತವಾಗಿ ಅನುಷ್ಠಾನವಾಗಬೇಕಾಗಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ

ಉ) ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ವೇಳೆಯಲ್ಲಿ ಕೊಂಡೇತಿಮ್ಮನಹಳ್ಳಿಯನ್ನು ಮೇಲ್ದರ್ಜೆಗೇರಿಸಲು ಪರಿಗಣಿಸಲು ಕ್ರಮ ವಹಿಸಲಾಗುವುದು

648 (712) ಶ್ರೀ ಉಮಾಪತಿ ಎ ಎ (ಹೊಳಲ್ಕೆರೆ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಾಥಮಿಕ ಹಾಗೂ ಪ್ರೌಢ (ಶಿಕ್ಷಣ) ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆಗೆ ಅನುಗುಣವಾಗ ವಿದ್ಯಾರ್ಥಿನಿಲಯಗಳು ಇವೆಯೇ?

ಆ) ಹಾಗಿದ್ದಲ್ಲಿ ಹೊಸದಾಗಿ ವಿದ್ಯಾರ್ಥಿ ನಿಲಯಗಳನ್ನು ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು).

ಅ) ಇಲ್ಲ

ಆ) ಹೌದು

ಇ) **ಸಮಾಜ ಕಲ್ಯಾಣ ಇಲಾಖೆ**

2006–07ನೇ ಸಾಲಿನಲ್ಲಿ ಆಯವ್ಯಯದಲ್ಲಿ ಒದಗಿಸಿದ ಅನುದಾನದ ಮಿತಿಯೊಳಗೆ 50 ವಿದ್ಯಾರ್ಥಿ ಸಂಖ್ಯಾಬಲದಂತೆ 50 ಪರಿಶಿಷ್ಟ ಜಾತಿಯ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲು ಈಗಾಗಲೇ ಆದೇಶಿಸಲಾಗಿದೆ ಅಲ್ಲದೆ, ರಾಜ್ಯದಲ್ಲಿನ ಹಾಲಿ ವಿದ್ಯಾರ್ಥಿನಿಲಯಗಳಲ್ಲಿರುವ ಮೂಲಭೂತ ಸೌಲಭ್ಯಗಳನ್ನು ಪರಿಗಣನೆಗೆ ತೆಗೆದುಕೊಂಡು ತಲಾ 10 ರಿಂದ 15ರವರೆಗೆ ವಿದ್ಯಾರ್ಥಿ ಸಂಖ್ಯಾಬಲ ಹೆಚ್ಚಿಸಲೂ ಈಗಾಗಲೇ ಆದೇಶಿಸಲಾಗಿದೆ ಇದರಿಂದಾಗಿ 2006–07ನೇ ಸಾಲಿನಲ್ಲಿ ರಾಜ್ಯದ 17178 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಲ್ಲಿ ಹೆಚ್ಚುವರಿಯಾಗಿ ವಿದ್ಯಾರ್ದಿಗಳಿಗೆ ಪ್ರವೇಶ ನೀಡಲಾಗಿದೆ

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಪರಿಶಿಷ್ಟ ವರ್ಗದ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ 14 ಹೊಸ ವಿದ್ಯಾರ್ಥಿನಿಲಯಗಳನ್ನು ರಾಜ್ಯವಲಯ ಅನುದಾನದಿಂದ ಹಾಗೂ 10 ವಿದ್ಯಾರ್ಥಿನಿಲಯಗಳನ್ನು ಜಿಲ್ಲಾವಲಯ ಅನುದಾನದಿಂದ ಪ್ರಾರಂಭಿಸಲು ಒಟ್ಟು 24 ವಿದ್ಯಾರ್ಥಿನಿಲಯಗಳಿಗೆ 2006–07ನೇ ಸಾಲಿನಲ್ಲಿ ಮಂಜೂರಾತಿ ನೀಡಿದೆ ಮುಂದಿನ ಸಾಲುಗಳಲ್ಲಿ ವಿದ್ಯಾರ್ಥಿನಿಲಯಗಳ ಬೇಡಿಕೆ ಹಾಗೂ ಆಯವ್ಯಯ ಲಭ್ಯತೆಯನ್ನಾಧರಿಸಿ ಹಂತ ಹಂತವಾಗಿ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದು

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

2006–07ನೇ ಸಾಲಿಗೆ 33 ಮೆಟ್ರಿಕ್ ಪೂರ್ವ ಹಾಗೂ 19 ಮೆಟ್ರಿಕ್ ನಂತರದ ಹೀಗೆ ಒಟ್ಟು 52 ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗಿದೆ ಮುಂದಿನ ಸಾಲುಗಳಲ್ಲಿ ವಿದ್ಯಾರ್ಥಿನಿಲಯಗಳ ಬೇಡಿಕೆ ಹಾಗೂ ಆಯವ್ಯಯದ ಲಭ್ಯತೆಯನ್ನಾಧರಿಸಿ ಹಂತ ಹಂತವಾಗಿ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಬಗ್ಗೆ ಪರಿಶೀಲಿಸಲಾಗುವುದು

ಅಲ್ಪಸಂಖ್ಯಾತರ ಇಲಾಖೆ

ಅಲ್ಪಸಂಖ್ಯಾತರ ಇಲಾಖೆಯಲ್ಲಿ ಒಟ್ಟು 23 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು 2007–08ನೇ ಸಾಲಿನಲ್ಲಿ 100 ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ಯೋಜನೆ ಇದೆ

649 (957) ಶ್ರೀ ವೈಜ್ಞನಾಥ ಪಾಟೀಲ್ (ಚಿಂಚೋಳಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ವಸತಿ ನಿಲಯಗಳ ಸಂಖ್ಯೆ ಎಷ್ಟು?

ಆ) ಸರ್ಕಾರದಿಂದ ನಡೆಯುತ್ತಿರುವ ಮತ್ತು ಖಾಸಗಿಯವರು ಅನುದಾನ ಪಡೆದು ನಡೆಸುತ್ತಿರುವ ವಸತಿ ನಿಲಯಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಇ) ಈ ಎಲ್ಲಾ ವಸತಿನಿಲಯಗಳ ನಿರ್ವಹಣೆಗಾಗಿ ಸರ್ಕಾರ ವಾರ್ಷಿಕವಾಗಿ ಖರ್ಚು ಮಾಡುವ ವೆಚ್ಚವೆಷ್ಟು?

ಈ) ಎಲ್ಲ ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳಲ್ಲಿನ ದುಸ್ಥಿತಿಯ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಉ) ಮೆಟ್ರಿಕ್ ಪೂರ್ವ ಮತ್ತು ನಂತರದ ಮಹಿಳಾ ಹಾಸ್ಟೆಲ್‌ಗಳೆಷ್ಟು? (ಜಿಲ್ಲಾವಾರು ವಿವರ ಹಾಗೂ ಅಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳ ವಿವರ ಒದಗಿಸುವುದು)

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) 1 ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ವಿದ್ಯಾರ್ಥಿನಿಲಯಗಳ ಸಂಖ್ಯೆ 1485

2 ಹಿಂದುಳಿದ ವರ್ಗಗಳ ಇಲಾಖೆ ವತಿಯಿಂದ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಸಂಖ್ಯೆ 1491

3 ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಲಯಗಳ ಸಂಖ್ಯೆ 147

4 ಅಲ್ಪಸಂಖ್ಯಾತರ ಇಲಾಖೆ ವತಿಯಿಂದ ಅಲ್ಪಸಂಖ್ಯಾತರ ವಿದ್ಯಾರ್ಥಿನಿಲಯಗಳ ಸಂಖ್ಯೆ 23

ಆ) ಇಲಾಖೆ	ಸರ್ಕಾರಿ ವಿದ್ಯಾರ್ಥಿನಿಲಯ	ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯ
1 ಸಮಾಜ ಕಲ್ಯಾಣ ಇಲಾಖೆ	1485	330
2 ಹಿಂದುಳಿದ ವರ್ಗಗಳ ಇಲಾಖೆ	1491	235
3 ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ	147	32
4 ಅಲ್ಪಸಂಖ್ಯಾತರ ಇಲಾಖೆ	23	53

ಇ)

ಕ್ರ ಸಂ	ಇಲಾಖೆ	2006-2007ನೇ ಸಾಲಿನ ಸರ್ಕಾರಿ ವಿದ್ಯಾರ್ಥಿನಿಲಯಗಳ ವಾರ್ಷಿಕ ವೆಚ್ಚ (ಲಕ್ಷ ರೂ.ಗಳಲ್ಲಿ)	2006-2007ನೇ ಸಾಲಿನ ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯಗಳ ವಾರ್ಷಿಕ ವೆಚ್ಚ (ಲಕ್ಷ ರೂ.ಗಳಲ್ಲಿ)
1	ಸಮಾಜ ಕಲ್ಯಾಣ ಇಲಾಖೆ	9103 37	529 26
2	ಹಿಂದುಳಿದ ವರ್ಗಗಳ ಇಲಾಖೆ	9643 36	271 55
3	ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ	993 56	59 74
4	ಅಲ್ಪಸಂಖ್ಯಾತರ ಇಲಾಖೆ		268 74

ಈ) ವಿದ್ಯಾರ್ಥಿನಿಲಯಗಳ ಸುಧಾರಣೆಗೆ ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ವಿದ್ಯಾರ್ಥಿನಿಲಯಗಳ ಕಾರ್ಯನಿರ್ವಹಣೆಯಲ್ಲಿ ಸುಧಾರಣೆ, ಉತ್ತಮ ಸೌಲಭ್ಯಗಳ ಪೂರೈಕೆಗೆ ಕ್ರಮ ಕೈಗೊಳ್ಳಲಾಗಿದ್ದು, ಈ ಬಗ್ಗೆ ಜಿಲ್ಲಾ

ಮಟ್ಟದ ಅಧಿಕಾರಿಗಳ, ನಿಲಯಗಳ ಮೇಲ್ವಿಚಾರಕರುಗಳ ಹಾಗೂ ವಿಸ್ತರಣಾಧಿಕಾರಿಗಳ ಸಭೆ ಕರೆದು ಕಟ್ಟುನಿಟ್ಟಿನ ಸೂಚನೆ ನೀಡಿ ವಿದ್ಯಾರ್ಥಿನಿಲಯಗಳಲ್ಲಿ ಉತ್ತಮ ಸೌಲಭ್ಯ, ಸ್ವಚ್ಛತೆ ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಹೆಚ್ಚಿನ ಗಮನ ನೀಡಲಾಗುತ್ತಿದೆ

ಉ)	ಇಲಾಖೆ	ಮೆಟ್ರಿಕ್ ಪೂರ್ವ	ಮೆಟ್ರಿಕ್ ನಂತರ
1	ಸಮಾಜ ಕಲ್ಯಾಣ ಇಲಾಖೆ	299	73
2	ಹಿಂದುಳಿದ ವರ್ಗಗಳ ಇಲಾಖೆ	190	137
3	ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ	38	7
4	ಅಲ್ಪಸಂಖ್ಯಾತರ ಇಲಾಖೆ	8	7

ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಪ್ರಶ್ನೆ ಸಂಖ್ಯೆ 957 ಕ್ಕೆ ಅನುಬಂಧ – ಅ

ಕ್ರ.ಸಂ.	ಜಿಲ್ಲೆಗಳ ವಿವರ	ಸರ್ಕಾರಿ ವಿದ್ಯಾರ್ಥಿ ನಿಲಯಗಳು	ಮಾನ್ಯತೆ ಪಡೆದ ಖಾಸಗಿ ವಿದ್ಯಾರ್ಥಿ ನಿಲಯಗಳ ಸಂಖ್ಯೆ
1	ಬೆಂಗಳೂರು (ನ)	51	16
2	ಬೆಂಗಳೂರು (ಗ್ರಾ)	65	12
3	ಕೋಲಾರ	133	6
4	ತುಮಕೂರು	87	17
5	ಚಿತ್ರದುರ್ಗ	65	36
6	ದಾವಣಗೆರೆ	56	41

7	ಶಿವಮೊಗ್ಗ	56	20
8	ಮೈಸೂರು	63	7
9	ಚಾಮರಾಜನಗರ	46	9
10	ಮಂಡ್ಯ	56	9
11	ಹಾಸನ	73	2
12	ಚಿಕ್ಕಮಗಳೂರು	48	
13	ದಕ್ಷಿಣ ಕನ್ನಡ	21	
14	ಉಡುಪಿ	18	
15	ಕೊಡಗು	19	
16	ಬೆಳಗಾಂ	76	10
17	ಧಾರವಾಡ	20	8
18	ಹಾವೇರಿ	42	16
19	ಗದಗ್	34	15
20	ಬಿಜಾಪುರ	61	33
21	ಬಾಗಲಕೋಟೆ	39	8
22	ಉತ್ತರ ಕನ್ನಡ	28	
23	ಗುಲ್ಬರ್ಗಾ	123	51
24	ರಾಯಚೂರು	54	2
25	ಕೊಪ್ಪಳ	35	
26	ಬೀದರ್	52	7
27	ಬಳ್ಳಾರಿ	64	5
	ಒಟ್ಟು	**1485**	**330**

ಪ್ರಶ್ನೆ ಸಂ: 957ರ ಪ್ರಶ್ನೆ ಸಂ 'ಉ' ಗೆ ಅನುಬಂಧ – ಆ

ಕ್ರ ಸಂ	ಜಿಲ್ಲೆಗಳ ವಿವರ	ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳು	ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಗಳು	ಅನುದಾನಿತ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳು	ಅನುದಾತ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಗಳು
1	ಬೆಂಗಳೂರು (ನ)	10	4	1	
2	ಬೆಂಗಳೂರು (ಗ್ರಾ)	12	1		
3	ಕೋಲಾರ	27	9	1	
4	ತುಮಕೂರು	15	6	1	
5	ಚಿತ್ರದುರ್ಗ	12	5	4	
6	ದಾವಣಗೆರೆ	10	3	3	3
7	ಶಿವಮೊಗ್ಗ	13	5	8	
8	ಮೈಸೂರು	13	5		
9	ಚಾಮರಾಜನಗರ	9	2		
10	ಮಂಡ್ಯ	13	3	1	
11	ಹಾಸನ	15	5		
12	ಚಿಕ್ಕಮಗಳೂರು	12	3		
13	ದಕ್ಷಿಣ ಕನ್ನಡ	7	1		
14	ಉಡುಪಿ	7			
15	ಕೊಡಗು	7			
16	ಬೆಳಗಾಂ	15	4	1	
17	ಧಾರವಾಡ	5	1	1	

18	ಹಾವೇರಿ	8	1	1	
19	ಗದಗ್	5	2	1	
20	ಬಿಜಾಪುರ	10	2		
21	ಬಾಗಲಕೋಟೆ	9			
22	ಉತ್ತರ ಕನ್ನಡ	10			
23	ಗುಲ್ಬರ್ಗಾ	16	4	1	
24	ರಾಯಚೂರು	12	3		
25	ಕೊಪ್ಪಳ	7	1		
26	ಬೀದರ್	6	3		
27	ಬಳ್ಳಾರಿ	14	2		
	ಒಟ್ಟು	**299**	**73**	**24**	**3**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಶ್ರೀ ವೈಜ್ಞನಾಥ ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ 957ರ (ಆ)ಕ್ಕೆ

ಅನುಬಂಧ-1

ಸರ್ಕಾರಿ ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳ ಅಂಕಿ-ಅಂಶಗಳ ವಿವರ

ಕ್ರ.ಸಂ	ಜಿಲ್ಲೆಗಳ ವಿವರ	ಒಟ್ಟು ವಿದ್ಯಾರ್ಥಿನಿಲಯಗಳ ಸಂಖ್ಯೆ			ಒಟ್ಟು ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ		
		ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
1	ಬೆಂಗಳೂರು (ನ)	8	3	11	431	160	591
2	ಬೆಂಗಳೂರು (ಗ್ರಾ)	39	7	46	2155	360	2515
3	ಬಳ್ಳಾರಿ	32	10	42	1675	520	2195
4	ಬೆಳಗಾಂ	36	9	95	4515	450	4965
5	ಬೀದರ್	38	5	43	2132	250	2382
6	ಬಿಜಾಪುರ	49	9	58	2577	425	3002
7	ಬಾಗಲಕೋಟೆ	31	3	34	1645	150	1795

8	ಚಿಕ್ಕಮಗಳೂರು	39	14	53	2095	815	2910
9	ಚಿತ್ರದುರ್ಗ	42	6	48	2120	310	2430
10	ಚಾಮರಾಜನಗರ	12	1	13	650	60	710
11	ದಕ್ಷಿಣ ಕನ್ನಡ	20	10	30	960	570	1530
12	ಧಾರವಾಡ	19	4	23	900	145	1045
13	ದಾವಣಗೆರೆ	32	7	39	1675	395	2070
14	ಗುಲ್ಬರ್ಗಾ	91	17	108	4720	825	5545
15	ಗದಗ್	28	4	32	1358	210	1568
16	ಹಾಸನ	55	7	62	2885	380	3265
17	ಹಾವೇರಿ	36	4	40	1940	210	2150
18	ಕೊಡಗು	17	4	21	840	220	1060
19	ಕೋಲಾರ	52	8	60	2850	410	3260
20	ಕೊಪ್ಪಳ	32	3	35	1675	160	1835
21	ಮಂಡ್ಯ	45	11	56	2335	555	2890
22	ಮೈಸೂರು	42	5	47	2187	260	2447
23	ರಾಯಚೂರು	30	3	33	1610	160	1770
24	ಶಿವಮೊಗ್ಗ	44	14	58	2340	845	3185
25	ತುಮಕೂರು	41	6	47	2055	315	2370
26	ಉತ್ತರ ಕನ್ನಡ	43	12	55	2115	660	2775
27	ಉಡುಪಿ	14	4	18	700	220	920
	ಒಟ್ಟು	**1017**	**190**	**1207**	**53140**	**10040**	**63180**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಶ್ರೀ ವೈದ್ಯನಾಥ ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ 957ರ (ಆ)ಕ್ಕೆ

ಅನುಬಂಧ–3

ಖಾಸಗಿ ಮೆಟ್ರಿಕ್–ಪೂರ್ವ ವಿದ್ಯಾರ್ಥಿನಿಲಯಗಳ ಅಂಕಿ–ಅಂಶಗಳ ವಿವರ

ಕ್ರ.ಸಂ	ಜಿಲ್ಲೆಗಳ ವಿವರ	ಖಾಸಗಿ ವಿದ್ಯಾರ್ಥಿ ನಿಲಯಗಳ ಸಂಖ್ಯೆ			ಖಾಸಗಿ ವಿದ್ಯಾರ್ಥಿ ನಿಲಯಗಳು		
		ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
1	ಬೆಂಗಳೂರು ನಗರ	0	0	0	0	0	0
2	ಬೆಂಗಳೂರು (ಗ್ರಾ)	3	0	3	150	0	150
3	ಬಳ್ಳಾರಿ	7	0	7	190	0	190
4	ಬೆಳಗಾಂ	7	0	7	260	0	260
5	ಬೀದರ್	5	1	6	380	50	430
6	ಬಿಜಾಪುರ	30	0	30	143	0	1403
7	ಬಾಗಲಕೋಟೆ	21	0	21	887	0	887
8	ಚಿಕ್ಕಮಗಳೂರು	9	2	11	578	120	698
9	ಚಿತ್ರದುರ್ಗ	6	1	7	296	54	350
10	ಚಾಮರಾಜನಗರ	3	2	5	150	100	250
11	ದಕ್ಷಿಣ ಕನ್ನಡ	0	0	0	0	0	0
12	ಧಾರವಾಡ	7	0	7	740	0	740
13	ದಾವಣಗೆರೆ	8	0	8	390	0	390
14	ಗುಲ್ಬರ್ಗಾ	29	1	30	1445	25	1470
15	ಗದಗ್	18	1	19	784	25	809
16	ಹಾಸನ	5	0	5	160	0	160
17	ಹಾವೇರಿ	10	2	12	390	55	445

18	ಕೊಡಗು	0	0	0	0	0	0
19	ಕೋಲಾರ	2	0	2	175	0	175
20	ಕೊಪ್ಪಳ	9	0	9	397	0	397
21	ಮಂಡ್ಯ	8	1	9	640	35	675
22	ಮೈಸೂರು	5	1	6	310	100	410
23	ರಾಯಚೂರು	3	0	3	175	0	175
24	ಶಿವಮೊಗ್ಗ	3	2	5	170	75	245
25	ತುಮಕೂರು	5	0	5	207	0	207
26	ಉತ್ತರ ಕನ್ನಡ	0	1	1	0	30	3
27	ಉಡುಪಿ	2	0	2	92	0	9
	ಒಟ್ಟು	**205**	**15**	**220**	**10369**	**669**	**11038**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಶ್ರೀ ವೈಜ್ಯನಾಥ ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ 957ರ (ಆ)ಕ್ಕೆ ಅನುಬಂಧ–4

ಖಾಸಗಿ ಮೆಟ್ರಿಕ್–ನಂತರದ ವಿದ್ಯಾರ್ಥಿನಿಲಯಗಳ ಅಂಕಿ–ಅಂಶಗಳ ವಿವರ

ಕ್ರಸಂ	ಜಿಲ್ಲೆಗಳ ವಿವರ	ಖಾಸಗಿ ವಿದ್ಯಾರ್ಥಿ ನಿಲಯಗಳ ಸಂಖ್ಯೆ			ಖಾಸಗಿ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ		
		ಬಾಲಕರು	ಬಾಲಕಿಯರು	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
1	ಬೆಂಗಳೂರು ನಗರ	1	0	1	25	0	25
2	ಬೆಂಗಳೂರು (ಗ್ರಾ)	0	0	0	0	0	0
3	ಬಳ್ಳಾರಿ	1	1	2	25	34	59
4	ಬೆಳಗಾಂ	0	0	0	0	0	0
5	ಬೀದರ್	0	0	0	0	0	0

6	ಬಿಜಾಪುರ	1	0	1	25	0	25
7	ಬಾಗಲಕೋಟೆ	0	0	0	0	0	0
8	ಚಿಕ್ಕಮಗಳೂರು	1	0	1	25	0	25
9	ಚಿತ್ರದುರ್ಗ	1	0	1	25	0	25
10	ಚಾಮರಾಜನಗರ	0	0	0	0	0	0
11	ದಕ್ಷಿಣ ಕನ್ನಡ	0	0	0	0	0	0
12	ಧಾರವಾಡ	1	0	1	40	0	40
13	ದಾವಣಗೆರೆ	0	0	0	0	0	0
14	ಗುಲ್ಬರ್ಗಾ	1	0	1	25	0	25
15	ಗದಗ್	3	0	3	75	0	75
16	ಹಾಸನ	0	0	0	0	0	0
17	ಹಾವೇರಿ	0	0	0	0	0	0
18	ಕೊಡಗು	0	0	0	0	0	0
19	ಕೋಲಾರ	0	0	0	0	0	0
20	ಕೊಪ್ಪಳ	0	0	0	0	0	0
21	ಮಂಡ್ಯ	2	0	2	50	0	50
22	ಮೈಸೂರು	0	0	0	0	0	0
23	ರಾಯಚೂರು	0	0	0	0	0	0
24	ಶಿವಮೊಗ್ಗ	0	0	0	0	0	0
25	ತುಮಕೂರು	2	0	2	75	0	75
26	ಉತ್ತರ ಕನ್ನಡ	0	0	0	0	0	0
27	ಉಡುಪಿ	0	0	0	0	0	0
	ಒಟ್ಟು	**14**	**1**	**15**	**390**	**34**	**424**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಶ್ರೀ ವೈಜ್ಯನಾಥ ಪಾಟೀಲ್ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ 957ರ (ಆ)ಕ್ಕೆ ಅನುಬಂಧ-5

ಕ್ರ ಸ	ಜಿಲ್ಲೆಯ ಹೆಸರು	ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು	ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು	ವಾರ್ಡನ್		ನಿಲಯ ಮೇಲ್ವಿಚಾರಕಿಯರು		ಅಡುಗೆಯವರು		ಅಡುಗೆ ಸಹಾಯಕರು		ರಾತ್ರಿ ಕಾವಲುಗಾರರು	
		ಬಾಲಕಿಯರು	ಬಾಲಕಿಯರು	ಭರ್ತಿ	ಖಾಲಿ	ಭರ್ತಿ	ಖಾಲಿ	ಭರ್ತಿ	ಖಾಲಿ	ಭರ್ತಿ	ಖಾಲಿ	ಭರ್ತಿ	ಖಾಲಿ
1	ಬೆಂಗಳೂರು ನಗರ	3	5	5	0	3	0	14	2	6	2	6	2
2	ಬೆಂಗಳೂರು ಗ್ರಾಮಾ	7	5	4	1	5	2	11	13	6	6	2	10
3	ಬಳ್ಳಾರಿ	10	2	2	0	6	4	10	14	7	5	10	2
4	ಬೆಳಗಾಂ	9	7	7	0	9	0	30	2	13	3	6	9
5	ಬೀದರ್	5	3	2	1	1	2	11	1	6	0	6	0
6	ಬಿಜಾಪುರ	9	3	3	0	5	4	12	11	5	7	6	6
7	ಬಾಗಲಕೋಟೆ	3	3	3	0	1	2	0	0	0	0	2	4
8	ಚಿಕ್ಕಮಗಳೂರು	14	5	2	3	4	10	33	5	17	2	12	7
9	ಚಿತ್ರದುರ್ಗ	6	2	2	0	2	4	8	6	8	0	7	0
10	ಚಾಮರಾಜ ನಗರ	1	3	0	3	1	0	5	3	4	0	4	0
11	ದಕ್ಷಿಣ ಕನ್ನಡ	10	10	2	8	2	2	17	23	15	8	13	10
12	ಧಾರವಾಡ	4	6	6	0	3	1	17	1	10	0	1	7

ಕ್ರ ಸ	ಜಿಲ್ಲೆಯ ಹೆಸರು	ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು		ವಾರ್ಡನ್		ನಿಲಯ ಮೇಲ್ವಿಚಾರಕಿಯರು		ಅಡುಗೆಯವರು		ಅಡುಗೆ ಸಹಾಯಕರು		ರಾತ್ರಿ ಕಾವಲುಗಾರರು	
		ಬಾಲಕಿಯರು	ಬಾಲಕಿಯರು	ಭರ್ತಿ	ಖಾಲಿ	ಭರ್ತಿ	ಖಾಲಿ	ಭರ್ತಿ	ಖಾಲಿ	ಭರ್ತಿ	ಖಾಲಿ	ಭರ್ತಿ	ಖಾಲಿ
13	ದಾವಣಗೆರೆ	7	3	4	1	2	5	13	10	8	3	9	2
14	ಗುಲ್ಬರ್ಗಾ	17	10	10	0	2	14	32	21	18	10	11	15
15	ಗದಗ್	4	3	2	0	3	1	10	8	6	1	6	0
16	ಹಾಸನ	7	7	0	7	1	6	18	11	10	4	3	5
17	ಹಾವೇರಿ	4	3	3	0	1	3	11	3	7	0	7	0
18	ಕೊಡಗು	4	2	0	2	0	3	10	3	10	7	5	1
19	ಕೋಲಾರ	8	4	4	0	6	2	24	20	12	9	12	5
20	ಕೊಪ್ಪಳ	3	4	1	3	3	0	8	5	7	0	7	0
21	ಮಂಡ್ಯ	11	5	0	5	0	11	7	15	2	4	2	4
22	ಮೈಸೂರು	5	6	2	4	1	4	14	8	8	3	6	5
23	ರಾಯಚೂರು	3	5	3	2	1	2	5	5	2	3	6	2
24	ಶಿವಮೊಗ್ಗ	14	15	7	8	5	6	42	22	23	10	21	6
25	ತುಮಕೂರು	6	3	2	1	4	2	16	2	6	3	6	3
26	ಉತ್ತರ ಕನ್ನಡ	12	6	4	9	5	1	29	9	13	6	14	4
27	ಉಡುಪಿ	4	4	3	1	0	4	14	2	7	1	6	1
	ಒಟ್ಟು	**190**	**134**	**83**	**59**	**76**	**95**	**421**	**225**	**236**	**97**	**196**	**110**

ಅನುಬಂಧ – 2

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಗಳ ವಿವರ

ಕ್ರ ಸಂ	ಜಿಲ್ಲೆ	ತಾಲ್ಲೂಕು		ವಿದ್ಯಾರ್ಥಿನಿಲಯದ ಸ್ಥಳದ ವಿವರ	ಮಂಜೂರಾತಿ ಸಂಖ್ಯೆ	ಮೇಲ್ವಿ ಚಾರಕರು	ಅಡುಗೆ ಯವರು	ಅಡುಗೆ ಸಹಾಯಕರು	ರಾತ್ರಿ ಕಾವಲುಗಾರರು
1	ಬೆಂಗಳೂರು (ಗ್ರಾ)	ಕನಕಪುರ	1	ಬಾಲಕಿಯರ ವಿದ್ಯಾರ್ಥಿನಿಲಯ, ಕನಕಪುರ	50	1	2	1	1
2	ಚಿತ್ರದುರ್ಗ	ಮೊಳಕಾಲ್ಮೂರು	2	ಬಾಲಕಿಯರ ವಿದ್ಯಾರ್ಥಿನಿಲಯ ಮೊಳಕಾಲ್ಮೂರು	50	1	2	1	1
3	ದಾವಣಗೆರೆ	ದಾವಣಗೆರೆ	3	ಬಾಲಕಿಯರ ವಿದ್ಯಾರ್ಥಿನಿಲಯ, ದಾವಣಗೆರೆ	50	1	2	1	1
4	ಮೈಸೂರು	ಹೆಚ್ ಡಿ ಕೋಟೆ	4	ಬಾಲಕಿಯರ ವಿದ್ಯಾರ್ಥಿನಿಲಯ, ಕೆಂಚನಹಳ್ಳಿ	50	1	2	1	1
			5	ಬಾಲಕಿಯರ ವಿದ್ಯಾರ್ಥಿನಿಲಯ, ಬಿ ಮಟಕೆರೆ	50	1	2	1	1
			6	ಬಾಲಕಿಯರ ವಿದ್ಯಾರ್ಥಿನಿಲಯ ಅಂತರಸಂತೆ	50	1	2	1	1
		ಪಿರಿಯಾಪಟ್ಟಣ	7	ಬಾಲಕಿಯರ ವಿದ್ಯಾರ್ಥಿನಿಲಯ, ಪಿರಿಯಾಪಟ್ಟಣ	25	1	1	1	1
		ಹುಣಸೂರು	8	ಬಾಲಕಿಯರ ವಿದ್ಯಾರ್ಥಿನಿಲಯ, ಹುಣಸೂರು	50	1	2	1	1
5	ಚಾಮರಾಜನಗರ	ಚಾಮರಾಜನಗರ	9	ಬಾಲಕಿಯರ ವಿದ್ಯಾರ್ಥಿನಿಲಯ ಚಾಮರಾಜನಗರ	50	1	2	1	1
		ಕೊಳ್ಳೇಗಾಲ	10	ಬಾಲಕಿಯರ ವಿದ್ಯಾರ್ಥಿನಿಲಯ ಎಂ ಎಂ ಹಿಲ್ಸ್	50	1	2	1	1
		ಗುಂಡ್ಲುಪೇಟೆ	11	ಬಾಲಕಿಯರ ವಿದ್ಯಾರ್ಥಿನಿಲಯ, ಗುಂಡ್ಲುಪೇಟೆ	40	1	2	1	1
6	ಚಿಕ್ಕಮಗಳೂರು	ಚಿಕ್ಕಮಗಳೂರು	12	ಬಾಲಕಿಯರ ವಿದ್ಯಾರ್ಥಿನಿಲಯ, ಚಿಕ್ಕಮಗಳೂರು	50	1	2	1	1
			13	ಬಾಲಕಿಯರ ವಿದ್ಯಾರ್ಥಿನಿಲಯ ಕೆಳಗೂರು	50	1	2	1	1
		ಮೂಡಿಗೆರೆ	14	ಬಾಲಕಿಯರ ವಿದ್ಯಾರ್ಥಿನಿಲಯ, ಕಳಸ	50	1	2	1	1

ಕ್ರ ಸಂ	ಜಿಲ್ಲೆ	ತಾಲ್ಲೂಕು		ವಿದ್ಯಾರ್ಥಿನಿಲಯದ ಸ್ಥಳದ ವಿವರ	ಮಂಜೂರಾತಿ ಸಂಖ್ಯೆ	ಮೇಲ್ವಿ ಚಾರಕರು	ಅಡುಗೆ ಯವರು	ಅಡುಗೆ ಸಹಾಯಕರು	ರಾತ್ರಿ ಕಾವಲುಗಾರರು
7	ಕೊಡಗು	ವೀರಾಜಪೇಟೆ	15	ಬಾಲಕಿಯರ ವಿದ್ಯಾರ್ಥಿನಿಲಯ, ಕುಟ್ಟ	50	1	2	1	1
			16	ಬಾಲಕಿಯರ ವಿದ್ಯಾರ್ಥಿನಿಲಯ, ತಿತಿಮತಿ	50	1	2	1	1
			17	ಬಾಲಕಿಯರ ವಿದ್ಯಾರ್ಥಿನಿಲಯ, ಕಾರ್ಮಾಡು	25	1	1	1	1
		ಸೋಮವಾರಪೇಟೆ	18	ಬಾಲಕಿಯರ ವಿದ್ಯಾರ್ಥಿನಿಲಯ ಕುಶಾಲನಗರ	25	1	1	1	1
8	ದಕ್ಷಿಣಕನ್ನಡ	ಬೆಳ್ತಂಗಡಿ	19	ಬಾಲಕಿಯರ ವಿದ್ಯಾರ್ಥಿನಿಲಯ, ಮುಂಡಾಜೆ	50	1	2	1	1
			20	ಬಾಲಕಿಯರ ವಿದ್ಯಾರ್ಥಿನಿಲಯ ಅಳದಂಗಡಿ	50	1	2	1	1
		ಸುಳ್ಯ	21	ಬಾಲಕಿಯರ ವಿದ್ಯಾರ್ಥಿನಿಲಯ ಸುಳ್ಯ	25	1	1	1	1
9	ಉಡುಪಿ	ಕುಂದಾಪುರ	22	ಬಾಲಕರ ವಿದ್ಯಾರ್ಥಿನಿಲಯ ಶಂಕರಾನಾರಾಯಣಪುರ	50	1	2	1	1
		ಉಡುಪಿ	23	ಬಾಲಕಿಯರ ವಿದ್ಯಾರ್ಥಿನಿಲಯ, ಆದಿಉಡುಪಿ	50	1	2	1	1
10	ಬೆಳಗಾಂ	ಹುಕ್ಕೇರಿ	24	ಬಾಲಕಿಯರ ವಿದ್ಯಾರ್ಥಿನಿಲಯ, ನರಸಿಂಗಾಪುರ	50	1	2	1	1
		ಸವದತ್ತಿ	25	ಬಾಲಕಿಯರ ವಿದ್ಯಾರ್ಥಿನಿಲಯ, ಯರಗಟ್ಟಿ	50	1	2	1	1
11	ರಾಯಚೂರು	ರಾಯಚೂರು	26	ಬಾಲಕಿಯರ ವಿದ್ಯಾರ್ಥಿನಿಲಯ ರಾಯಚೂರು	50	1	2	1	1
			27	ಬಾಲಕಿಯರ ವಿದ್ಯಾರ್ಥಿನಿಲಯ, ಅರಕೆರೆ	50	1	2	1	1
		ದೇವದುರ್ಗ	28	ಬಾಲಕಿಯರ ವಿದ್ಯಾರ್ಥಿನಿಲಯ ಕೊತ್ತದೊಡ್ಡಿ	50	1	2	1	1
12	ಕೊಪ್ಪಳ	ಗಂಗಾವತಿ	29	ಬಾಲಕಿಯರ ವಿದ್ಯಾರ್ಥಿನಿಲಯ, ತಾಳಕೇರಿ	25	1	1	1	1
			30	ಬಾಲಕಿಯರ ವಿದ್ಯಾರ್ಥಿನಿಲಯ, ಉಡಮೇಕಲ್	50	1	2	1	1
13	ಗುಲ್ಬರ್ಗಾ	ಯಾದಗೀರ್	31	ಬಾಲಕಿಯರ ವಿದ್ಯಾರ್ಥಿನಿಲಯ, ಸೈದಾಪುರ	50	1	2	1	1
		ಸುರಪುರ	32	ಬಾಲಕಿಯರ ವಿದ್ಯಾರ್ಥಿನಿಲಯ ಸುರಪುರ ಪಟ್ಟಣ	50	1	2	1	1

ಕ್ರ ಸಂ	ಜಿಲ್ಲೆ	ತಾಲ್ಲೂಕು		ವಿದ್ಯಾರ್ಥಿನಿಲಯದ ಸ್ಥಳದ ವಿವರ	ಮಂಜೂರಾತಿ ಸಂಖ್ಯೆ	ಮೇಲ್ವಿ ಚಾರಕರು	ಅಡುಗೆ ಯವರು	ಅಡುಗೆ ಸಹಾಯಕರು	ರಾತ್ರಿ ಕಾವಲುಗಾರರು
14	ಬಳ್ಳಾರಿ	ಹಗರಿಬೊಮ್ಮನಹಳ್ಳಿ	33	ಬಾಲಕಿಯರ ವಿದ್ಯಾರ್ಥಿನಿಲಯ, ಹಗರಿಬೊಮ್ಮನಹಳ್ಳಿ	50	1	2	1	1
		ಹೊಸಪೇಟೆ	34	ಬಾಲಕಿಯರ ವಿದ್ಯಾರ್ಥಿನಿಲಯ, ಹೊಸಪೇಟೆ ಟೌನ್	50	1	2	1	1
15	ಬೀದರ್	ಬೀದರ್	35	ಬಾಲಕಿಯರ ವಿದ್ಯಾರ್ಥಿನಿಲಯ, ಕಮರಾಣ	50	1	2	1	1
		ಔರಾದ್	36	ಬಾಲಕಿಯರ ವಿದ್ಯಾರ್ಥಿನಿಲಯ, ಜಮಗಿ ಬಿ	50	1	2	1	1
16	ಕೋಲಾರ	ಶ್ರೀನಿವಾಸಪುರ	37	ಬಾಲಕಿಯರ ವಿದ್ಯಾರ್ಥಿನಿಲಯ, ಯಲ್ದೂರು	50	1	2	1	1
17	ಬಿಜಾಪುರ	ಬಿಜಾಪುರ	38	ಬಾಲಕಿಯರ ವಿದ್ಯಾರ್ಥಿನಿಲಯ, ಬಿಜಾಪುರ ಸಿಟಿ	50	1	2	1	1
				ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ					
1	ಬೆಂಗಳೂರು (ನ)	ಬೆಂಗಳೂರು ಪೂರ್ವ	1	ಬಾಲಕಿಯರ ವಿದ್ಯಾರ್ಥಿನಿಲಯ ಬೆಂಗಳೂರುನಗರ	50	1	2	1	1
2	ರಾಯಚೂರು	ರಾಯಚೂರು	2	ಬಾಲಕಿಯರ ವಿದ್ಯಾರ್ಥಿನಿಲಯ ರಾಯಚೂರು	50	1	2	1	1
3	ಬಳ್ಳಾರಿ	ಬಳ್ಳಾರಿ	3	ಬಾಲಕಿಯರ ವಿದ್ಯಾರ್ಥಿನಿಲಯ, ಬಳ್ಳಾರಿ	50	1	2	1	1
4	ದಕ್ಷಿಣ ಕನ್ನಡ	ಸುಳ್ಯ	4	ಬಾಲಕಿಯರ ವಿದ್ಯಾರ್ಥಿನಿಲಯ, ಸುಳ್ಯ	50	1	2	1	1
5	ತುಮಕೂರು	ತುಮಕೂರು	5	ಬಾಲಕಿಯರ ವಿದ್ಯಾರ್ಥಿನಿಲಯ ತುಮಕೂರು ಟೌನ್	50	1	2	1	1
		ಪಾವಗಡ	6	ಬಾಲಕಿಯರ ವಿದ್ಯಾರ್ಥಿನಿಲಯ, ಪಾವಗಡ	50	1	2	1	1
6	ಧಾರವಾಡ	ಧಾರವಾಡ	7	ಬಾಲಕಿಯರ ವಿದ್ಯಾರ್ಥಿನಿಲಯ ಧಾರವಾಡ	50	1	2	1	1

ಅನುಬಂಧ-1

ಪರಿಶಿಷ್ಟ ವರ್ಗದ ಸರ್ಕಾರಿ ಹಾಗೂ ಅನುದಾನಿತ ಮೆಟ್ರಿಕ್-ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ವಿವರ

ಕ್ರ.ಸಂ	ಜಿಲ್ಲೆಯ ಹೆಸರು	ಸರ್ಕಾರಿ		ಅನುದಾನಿತ		ಒಟ್ಟು
		ಮೆಟ್ರಿಕ್ ಪೂರ್ವ	ಮೆಟ್ರಿಕ್ ನಂತರದ	ಮೆಟ್ರಿಕ್ ಪೂರ್ವ	ಮೆಟ್ರಿಕ್ ನಂತರದ	
1	ಬೆಂಗಳೂರು (ನ)		4			4
2	ಬೆಂಗಳೂರು (ಗ್ರಾ)	3				3
3	ಬಾಗಲಕೋಟೆ	1				1
4	ಬೆಳಗಾಂ	6	2	2		10
5	ಬಳ್ಳಾರಿ	10	4		1	15
6	ಬೀದರ್	4				4
7	ಬಿಜಾಪುರ	1				1
8	ಚಾಮರಾಜನಗರ	7		1	1	9
9	ಚಿಕ್ಕಮಗಳೂರು	6				6
10	ಚಿತ್ರದುರ್ಗ	4	1	17		22
11	ದಕ್ಷಿಣ ಕನ್ನಡ	9	2			11
12	ದಾವಣಗೆರೆ	6		3		9
13	ಧಾರವಾಡ	1	3	1		5
14	ಗದಗ್	2	1			3
15	ಗುಲ್ಬರ್ಗಾ	6	1		1	8
16	ಹಾಸನ	1				1
17	ಹಾವೇರಿ	4	1		1	6

18	ಕೊಡಗು	10				10
19	ಕೋಲಾರ	4				4
20	ಕೊಪ್ಪಳ	7				7
21	ಮಂಡ್ಯ	1				1
22	ಮೈಸೂರು	10	1			11
23	ರಾಯಚೂರು	7	3			10
24	ಶಿವಮೊಗ್ಗ	2				2
25	ತುಮಕೂರು	5	3	1		9
26	ಉಡುಪಿ	3		2		5
27	ಉತ್ತರ ಕನ್ನಡ	1		1		2
		121	**26**	**28**	**4**	**179**

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) ವಿಧಾನ ಸಭೆಯ ಸದಸ್ಯರು ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆಯ ಸಂಖ್ಯೆ 957ಕ್ಕೆ ಅನುಬಂಧ – 1

I) ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಗಳು

ಕ್ರ.ಸಂ	ಜಿಲ್ಲೆಯ ಹೆಸರು ಮತ್ತು ಸ್ಥಳ	ಮಂಜೂರಾತಿ ಸಂಖ್ಯೆ
1	ಬೆಂಗಳೂರು (ನ)	50
2	ಮೈಸೂರು	50
3	ದಕ್ಷಿಣ ಕನ್ನಡ	50
4	ಧಾರವಾಡ	50
5	ಗುಲ್ಬರ್ಗಾ	50
6	ದಾವಣಗೆರೆ	50
7	ರಾಯಚೂರು	50
	ಒಟ್ಟು	**350**

II) ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯಗಳು

ಕ್ರ ಸಂ.	ಜಿಲ್ಲೆಯ ಹೆಸರು	ಮಂಜೂರಾತಿ ಸಂಖ್ಯೆ
1	ಬೆಂಗಳೂರು ನಗರ	50
2	ರಾಯಚೂರು	50
3	ಬೀದರ್	50
4	ಬಾಗಲಕೋಟೆ, ಇಲಕಲ್	50
5	ಗುಲ್ಬರ್ಗಾ	50
6	ದಕ್ಷಿಣ ಕನ್ನಡ, ಗುರುಕಂಬಳ	50
7	ಮೈಸೂರು	50
8	ಬಿಜಾಪೂರ	50
	ಒಟ್ಟು	**400**

III) ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯಗಳು

ಕ್ರ ಸಂ	ಜಿಲ್ಲೆಯ ಹೆಸರು	ಮಂಜೂರಾತಿ ಸಂಖ್ಯೆ
1	ಕೊಪ್ಪಳ	50
2	ಬೀದರ್	50
3	ಬಾಗಲಕೋಟೆ	50
4	ಗುಲ್ಬರ್ಗಾ, ಜೇವರ್ಗಿ	50
5	ಬಳ್ಳಾರಿ	50
6	ಬಿಜಾಪೂರ	50
7	ಬಿಜಾಪೂರ, ಮುದ್ದೇಬಿಹಾಳ	50
8	ಬಿಜಾಪೂರ, ನಿಡಗುಂದಿ	50
	ಒಟ್ಟು	**400**
	ಮೆನ & ಮೆಪೂ ಒಟ್ಟು	**1150**

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) ವಿಧಾನ ಸಭೆಯ ಸದಸ್ಯರು ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆಯ ಸಂಖ್ಯೆ 957ಕ್ಕೆ ಅನುಬಂಧ – 2

I) ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯಗಳು

ಕ್ರ ಸಂ	ಜಿಲ್ಲೆಯ ಹೆಸರು	ಮಂಜೂರಾತಿ ಸಂಖ್ಯೆ	ಸಿಬ್ಬಂದಿ ವಿವರ			
			ವಾರ್ಡನ್	ಅಡುಗೆ ಯವರು	ಅಡುಗೆ ಸಹಾಯಕರು	ರಾತ್ರಿ ಕಾವಲುಗಾರರು
1	ಬೆಂಗಳೂರು ನಗರ	50	1	2	1	1
2	ಮೈಸೂರು	50	1	2	1	1
3	ದಕ್ಷಿಣ ಕನ್ನಡ	50	1	2	1	1
4	ಧಾರವಾಡ	50	1	2	1	1
5	ಗುಲ್ಬರ್ಗಾ	50	1	2	1	1
6	ದಾವಣಗೆರೆ	50	1	2	1	1
7	ರಾಯಚೂರು	50	1	2	1	1
	ಒಟ್ಟು	**350**	**7**	**14**	**7**	**7**

II) ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯಗಳು .

ಕ್ರ ಸಂ	ಜಿಲ್ಲೆಯ ಹೆಸರು	ಮಂಜೂರಾತಿ ಸಂಖ್ಯೆ	ಸಿಬ್ಬಂದಿ ವಿವರ			
			ಮೇಲ್ವಿಚಾರಕ	ಅಡುಗೆ ಯವರು	ಅಡುಗೆ ಸಹಾಯಕರು	ರಾತ್ರಿ ಕಾವಲುಗಾರರು
1	ಬೆಂಗಳೂರು ನಗರ	50	1	2	1	–
2	ರಾಯಚೂರು	50	1	2	1	–
3	ಬೀದರ್	50	1	2	1	–
4	ಬಾಗಲಕೋಟೆ, ಇಲಕಲ್	50	1	2	1	–
5	ಗುಲ್ಬರ್ಗಾ	50	1	2	1	–

6	ದಕ್ಷಿಣ ಕನ್ನಡ, ಗುರುಕಂಬಳ	50	1	2	1	–
7	ಮೈಸೂರು	50	1	2	1	–
8	ಬಿಜಾಪೂರ	50	1	2	1	–
	ಒಟ್ಟು	**400**	**8**	**16**	**8**	–

ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) ವಿಧಾನಸಭೆಯ ಸದಸ್ಯರು ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆಯ ಸಂಖ್ಯೆ 957ಕ್ಕೆ ಅನುಬಂಧ – III

ಯೋಜನೆ:–

ಕ್ರ ಸಂ	ಜಿಲ್ಲೆ		ಮತೀಯ ಅಲ್ಪಸಂಖ್ಯಾತರ ಖಾಸಗಿ ಅನುದಾನಿತ ವಿದ್ಯಾರ್ಥಿ ನಿಲಯಗಳ ಹೆಸರು	ಸ್ಥಳ	ಮಂಜೂರಾತಿ ಸಂಖ್ಯೆ
1	ಬೆಳಗಾವಿ	1	ಮರಿಯಾಭವನ ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯ, ಬೈಲಹೊಂಗಲ ತಾ	ಮದನಭಾವಿ	120
		2	ಸೆಂಟ್ ಜೋಸೇಫ್ ಬಾಲಕಿಯರ ವಿದ್ಯಾರ್ಥಿ ನಿಲಯ	ಬಳ್ಳಾರಿ	50
		3	ಮದ್ರಾಸಾ–ಇ–ಹಿಮಾಯತುಲ್ಲಾ ಇಸ್ಲಾಂ ಸಂಸ್ಥೆ	ಹೊಸಪೇಟೆ	100
2	ಬಳ್ಳಾರಿ	4	ಮದ್ರಾಸಾ–ಇ–ಅರೇಬಿಯಾ ಕಶೀಪುಲ್ಲಾ ಉಲ್ಮ ಬಾಲಕಿರ ವಿದ್ಯಾರ್ಥಿ ನಿಲಯ	ಕೌಲಬಜಾರ ಬಳ್ಳಾರಿ	50
		5	ಮದ್ರಾಸಾ–ಇ–ಫೈಜಾನ್–ಇ–ಖಾದ್ರಿಯಾ ಬಾಜ್ಮಿ ಸೋಫಿಯಾ ವಿದ್ಯಾರ್ಥಿ ನಿಲಯ	ಹೊಸಪೇಟೆ	50

	6	ಮೆಥೋಡಿಸ್ಟ್ ಅಲ್ಪಸಂಖ್ಯಾತರ ಬಾಲಕರ ವಿದ್ಯಾರ್ಥಿ ನಿಲಯ	ಮಂಗಲಪೇಟೆ	50
	7	ಮದರ ತೆರೆಸಾ ಬಾಲಕಿಯರ ಅಲ್ಪಸಂಖ್ಯಾತರ ಖಾಸಗಿ ವಿದ್ಯಾರ್ಥಿ ನಿಲಯ	ಮಂಗಲಪೇಟೆ	50
3 ಬೀದರ್	8	ಪ್ರೀತಮ ಖಾಸಗಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ	ಮಂದಕನ ಹಳ್ಳಿ	25
	9	ಸಮಿತ್ರಾ ಮೆಮೊರಿಯಲ್ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ	ಮಳಂಗಾವ	50
	10	ಅಲ್‌ಇ ಸೈಯದ್ ಮೆಟ್ರಿಕ್ ಪೂರ್ವ ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯ	ತಾಳೀಕೋಟೆ	44
4 ಬಿಜಾಪುರ	11	ಆದಿನಾಥ ಅಲ್ಪಸಂಖ್ಯಾತರ ಖಾಸಗಿ ಉಚಿತ ಪ್ರಸಾದ ನಿಲಯ	ಬಿಜಾಪುರ	25
	12	ಸಲ್ಪಯಾ ಖಾಸಗಿ ಅಲ್ಪಸಂಖ್ಯಾತರ ಬಾಲಕರ ವಿದ್ಯಾರ್ಥಿ ನಿಲಯ	ಐನಾಪುರ	50
5 ಚಿತ್ರದುರ್ಗ	13	ಹಜರತ ಅಲ್ಲಾಪೀರ್ ಮಾರಲ್ ಮತ್ತು ಸ್ಪಿರಿಚುಯಲ್ ಅಸೋಸಿಯೇಷನ್ (ರಿ)	ಐಮಂಗಲ ಹಿರಿಯೂರು	50
6 ಧಾರವಾಡ	14	ಸ್ವಸ್ತಿ ಶ್ರೀ 108 ಆಚಾರ್ಯ ಜಯತಿರ್ತ, ದಿಗಂಬರ್ ಜೈನ್ ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯ	ಗರಗ	40
	15	ಜವಾಹರ್ ಎಜುಕೇಶನ್ ಸೊಸೈಟಿ ಮತೀಯ ಅಲ್ಪಸಂಖ್ಯಾತರ ಖಾಸಗಿ ವಸತಿ ನಿಲಯ	ಯಾದಗಿರಿ	60

	16	ಶ್ರೀ ಜೋಹ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಟ್ರಸ್ಟ್‌ನವರು ಗುಲ್ಬರ್ಗಾದಲ್ಲಿ ನಡೆಸುತ್ತಿರುವ	ಗುಲ್ಬರ್ಗಾ	150
7 ಗುಲ್ಬರ್ಗಾ		ಹೆಣ್ಣು ಮಕ್ಕಳ ಮತೀಯ ಅಲ್ಪಸಂಖ್ಯಾತರ ಖಾಸಗಿ ವಸತಿ ನಿಲಯ		
	17	ಮೆಥೋಡಿಸ್ಟ್ ಚರ್ಚ್‌ನವರು ನಡೆಸುತ್ತಿರುವ ಬಾಲಕರ ಮತೀಯ ಅಲ್ಪಸಂಖ್ಯಾತರ ಖಾಸಗಿ ವಸತಿ ನಿಲಯ	ಗುಲ್ಬರ್ಗಾ	40
	18	ಸೀಮೆಂಡ್ಸ್ ಬಾಲಕರ ವಿದ್ಯಾರ್ಥಿ ನಿಲಯ	ಯಾದಗಿರಿ	50
8 ಕೋಲಾರ	19	ಹನೀಫಿಯಾ ಸೋಷಿಯಲ್ ಎಜುಕೇಷನ್ ಸೊಸೈಟಿ ಮತೀಯ ಅಲ್ಪಸಂಖ್ಯಾತರ ಖಾಸಗಿ ವಸತಿ ನಿಲಯ	ಮಂಡಿಕಲ್ ಚಿಕ್ಕಬಳ್ಳಾಪುರ	50
9 ಕೊಪ್ಪಳ	20	ಅಲ್ ಸುಪಾ ಮುಸ್ಲಿಂ ಹಾಸ್ಟೆಲ್	ಕುಷ್ಟಗಿ	25
	21	ಸರ್ವದರ್ಮ ಪ್ರಚಾರ ವಿದ್ಯಾಸಮತಿ (ರಿ) ಶ್ರೀ ಮೋಕ್ಷ ಮಂದಿರ ಮರ	ಲಕ್ಕವಳ್ಳಿ ಸೊರಬ ತಾ	25
	22	ಮದಿನತ್ ಉಲ್ ಉಲೂಮ್ ಬಾಲಕರ ವಸತಿ ನಿಲಯ	ಶಿಕಾರಿಪುರ	100
10 ಶಿವಮೊಗ್ಗ	23	ಸುನ್ನಿ ಎಜುಕೇಷನ್ ಅಂಡ್ ಚಾರಿಟಬಲ್ ಟ್ರಸ್ಟ್ ಮತೀಯ ಜುಬೇದ ಬಾಲಕರ ವಸತಿ ನಿಲಯ	ಶಿಕಾರಿಪುರ	100

	24	ಧ್ರೋಪಿನ ರೋಸಲಿನ್ ಪೆಥೋಟ ಕಾಂಗಸೇನ್ ಹಾಸ್ಟೆಲ್	ಮುಂಡಗೋಡು	55
11 ಉತ್ತರ ಕನ್ನಡ	25	ದಿ ನಾರ್ತ್ ಕರ್ನಾಟಕ ಜಜಿತ ಎಜುಕೇಷನ್ ಅಂಡ್ ಚಾರಿಟಬಲ್ ಸೊಸೈಟಿ ಬಾಲಕಿಯರ ಮತೀಯ ಅಲ್ಪಸಂಖ್ಯಾತರ ಖಾಸಗಿ ವಸತಿ ನಿಲಯ	ಮುಂಡಗೋಡು	50
			ಒಟ್ಟು	**1459**

ಅಲ್ಪಸಂಖ್ಯಾತರ ಇಲಾಖೆ, ಬೆಂಗಳೂರು

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) ವಿಧಾನಸಭೆಯ ಸದಸ್ಯರು ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆಯ ಸಂಖ್ಯೆ 957ಕ್ಕೆ ಅನುಬಂಧ

ಯೋಜನೇತರ

ಕ್ರ ಸಂ	ಜಿಲ್ಲೆ	ಮತೀಯ ಅಲ್ಪಸಂಖ್ಯಾತರ ಖಾಸಗಿ ಅನುದಾನಿತ ವಿದ್ಯಾರ್ಥಿ ನಿಲಯಗಳ ಹೆಸರು	ಸ್ಥಳ	ಮಂಜೂರಾತಿ ಸಂಖ್ಯೆ
1	ಬೆಂಗಳೂರು ನಗರ	1 ಮಹಾಭೋದಿ ಬಾಲಕರ ಮತೀಯ ವಿದ್ಯಾರ್ಥಿ ನಿಲಯ	ಗಾಂಧಿನಗರ	50
2	ಬೆಂಗಳೂರು ಗ್ರಾಮಾಂತರ	2 ಹಜರತ್ ಸೈಯದ್ ಗುಲಾಬ್ ಹುಸೇನಿ ಷಾಖಾದ್ರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ	ಮಾಗಡಿ	50
		3 ಮಹಾತ್ಮಗಾಂಧಿ ಸ್ಮಾರಕ ಉಚಿತ ಪ್ರಸಾದ ನಿಲಯ	ಹಲಿಯಂಗಳಿ,	25
3	ಬಾಗಲಕೋಟೆ	4 ಶ್ರೀ ಜನಸೇನಾಚಾರ್ಯ ಗುರುಕುಲ ವಸತಿ ನಿಲಯ	ತೇರದಾಳ, ಜಮಖಂಡಿ ತಾ	50
		5 ಶ್ರೀಮದ್ ಆಚಾರ್ಯ, ಶಾಂತಿಸಾಗರ ದಿಗಂಬರ ಜೈನ್ ಅನಂತ ಚಿತ್ತಾಶ್ರಮ ರತ್ನಪ್ರಿಯ ವಿದ್ಯಾರ್ಥಿ ನಿಲಯ	ಶೇಡಬಾಳ, ಅಥಣಿ ತಾ	50

	6	ಶ್ರೀ 108 ಅಚಾರ್ಯ ರತ್ನ ದೇಶಭೂಷನ ಮುನಿದಿಗಂಬರ ಜೈನ್ ಆಶ್ರಮ ಉಚಿತ ಪ್ರಸಾದ ನಿಲಯ	ಕೋಧಳಿ ಕುಪ್ಪನವಾಡಿ ಚಿಕ್ಕೋಡಿ ತಾ	100
	7	ಶ್ರೀ ಪಾರ್ಶ್ವನಾಧ ಬ್ರಹ್ಮಚರ್ಯ ಆಶ್ರಮ ಗುರುಕುಲ ಬಾಲಕರ ವಿದ್ಯಾರ್ಧಿ ನಿಲಯ	ಸ್ತುವನಿಧಿ, ಚಿಕ್ಕೋಡಿ ತಾ	150
4 ಬೆಳಗಾವಿ	8	ಶ್ರೀ ಭರಬೇಶ ಗುರುಕುಲ ಉಚಿತ ಪ್ರಸಾದ ನಿಲಯ	ಬೆ ಬಾಗೇವಾಡಿ ಹುಕ್ಕೇರಿ ತಾ	60
	9	ಶ್ರೀ ಲಕ್ಷ್ಮಿ ಸೇನಾ ಶಿಕ್ಷಣ ಸಂಸ್ಥೆಯಿಂದ ನಡೆಸಲಾಗುತ್ತಿರುವ ಶ್ರೀ ಮಹಾವೀರ ಅಲ್ಪಸಂಖ್ಯಾತರ ಉಚಿತ ಪ್ರಸಾದ ನಿಲಯ	ರಾಯಭಾಗ	25
	10	ಡಿವೈನ್ ಪ್ರಾವಿಡೆನ್ಸ್ ಅಲ್ಪಸಂಖ್ಯಾತರ ವಿದ್ಯಾರ್ಧಿ ನಿಲಯ	ಟಳಕವಾಡಿ ಬೆಳಗಾವಿ	25
5 ಬಳ್ಳಾರಿ	11	ಎಲ್ ಎಂ ಬೊರ್ಡಿಂಗ್ ಹೋಂ, ಬಳ್ಳಾರಿ	ಬಳ್ಳಾರಿ	45
6 ಬೀದರ್	12	ಸೇವೆಂತ್ ಡೇ ಅಂಡ್ವೆಂಡಿಸ್ಟ್ ಮತೀಯ ಅಲ್ಪಸಂಖ್ಯಾತರ ವಿದ್ಯಾರ್ಧಿ ನಿಲಯ	ಬೀದರ್	60
7 ಬಿಜಾಪುರ	13	ತೋಹಿದ-ಇ-ಮಿಲ್ಲತ್ ಪ್ರೀಬೋರ್ಡಿಂಗ್	ಕಲ್ಕೇರಿ, ಸಿಂಧಗಿ ತಾ	60
	14	ಶ್ರೀ ಜ್ವಾಲಾಮಾಲಿನಿ ವಿದ್ಯಾಸಂಸ್ಥೆ, ಸಮಂತಭದ್ರ ಜ್ಞಾನ ಪೀಠ ಬಾಲಕರ ವಿದ್ಯಾರ್ಧಿ ನಿಲಯ	ಬಸ್ತಿಮಠ	50
8 ಚಿಕ್ಕಮಗಳೂರು	15	ಜ್ಯೋತಿಭವನ ಬಾಲಕಿಯರ ಮತೀಯ ಅಲ್ಪಸಂಖ್ಯಾತರ ವಿದ್ಯಾರ್ಧಿ ನಿಲಯ	ನರಸಿಂಹ ರಾಜಪುರ	25

	16 ಸಂತ ಜೋಸೆಫ ಬಾಲಕಿಯರ ಬೋರ್ಡಿಂಗ್ ಹೋಂ	ಚಿಕ್ಕಮಗಳೂರು	41
9 ದಕ್ಷಿಣ ಕನ್ನಡ	17 ಸಂತ ಅಥೋಣಿ ಮತೀಯ ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯ	ನಾರಾವಿ ಬೆಳ್ತಂಗಡಿ ತಾ	
10 ಗದಗ	18 ಅಂಜುಮಾನ್ ಅಜಾದ್ ಫ್ರೀ ಬೋರ್ಡಿಂಗ್	ರೋಣ	25
11 ಗುಲ್ಬರ್ಗಾ	19 ಅಲ್ ಹುದಾ ಅಲ್ಪಸಂಖ್ಯಾತರ ವಸತಿ ನಿಲಯ	ಜೇವರ್ಗಿ	100
	20 ಇಜತುಲ್ ಇಸ್ಲಾಂ ಅಲ್ಪಸಂಖ್ಯಾತರ ವಸತಿ ನಿಲಯ	ಬೇಲೂರು	30
12 ಹಾಸನ	21 ಶ್ರೀ ಗೋಮಟೇಶ್ವರ ವಿದ್ಯಾಪೀಠ ಉಚಿತ ಜೈನ್ ವಿದ್ಯಾರ್ಥಿ ನಿಲಯ	ಶ್ರವಣಬೆಳಗೊಳ ಚನ್ನರಾಯ ಪಟ್ಟಣ ತಾ	53
13 ಮೈಸೂರು	22 ಡಿಕ್ಕಿಲಾರೆನೋ ಜಾಕೂರು ಟಿಬೇಟಿಯನ್ ವಿದ್ಯಾರ್ಥಿ ನಿಲಯ	ಬೈಲಕುಪ್ಪೆ ಪಿರಿಯಾಪಟ್ಟಣ	75
	23 ಅರುಣೋದಯ ಮಹಿಳಾ ಮಂಡಲ್	ಮರಿಯಮ್ಮನ ಹಳ್ಳಿ, ಮುದಗಲ್, ಲಿಂಗಸಗೂರು ತಾ	25
14 ರಾಯಚೂರು	24 ಬ್ರದರ್ ಜೋರ್ಡನ್ ಮಾಯಾರ್ ಪ್ರೇಮಾಶ್ರಮ	ಜವಳಗೇರ, ಸಿಂದನೂರು ತಾ	25
15 ತುಮಕೂರು	25 ಸೆಂಟ್ ಮೇರಿಸ್ ಹೆಣ್ಣು ಮಕ್ಕಳ ಜನರಲ್ ಹಾಸ್ಟೆಲ್	ಗಾಂಧಿನಗರ ತುಮಕೂರು	50

16 ಉಡುಪಿ	26 ಶ್ರೀ ಭುಜಬುಲ್ ಬ್ರಹ್ಮಚರ್ಯ ಖಾಸಗಿ ಮತೀಯ ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯ	ಹಿರಿಯಂಗಡಿ ಕಾರ್ಕಳ ತಾ	25
	27 ಮುಸ್ಲಿಂ ಮಾರ್ಡನ್ ಎಜುಕೇಶನ್ ಸೊಸೈಟಿ	ಮುಂಡಗೋಡು	60
17 ಉತ್ತರ ಕನ್ನಡ	28 ದಿ ನಾರ್ತ್ ಕರ್ನಾಟಕ ಜಜ್ಜಿತ ಎಜುಕೇಷನ್ ಅಂಡ್ ಚಾರಿಟಬಲ್ ಮೈನಾರಿಟಿ ಹಾಸ್ಟೆಲ್ (ಆಶಾಕಿರಣ)	ಮುಂಡಗೋಡು	110
		ಒಟ್ಟು	**1547**

650 (958) ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಶು ಸಂಗೋಪನೆಗಾಗಿ ಸರ್ಕಾರ ಕಳೆದ ಐದು ವರ್ಷಗಳಿಂದ ಕೈಗೊಂಡಿರುವ ಯೋಜನೆಗಳಾವುವು?

ಆ) ಇದಕ್ಕಾಗಿ ಇಲ್ಲಿಯವರೆಗೆ 2006ರ ಡಿಸೆಂಬರ್ ಅಂತ್ಯಕ್ಕೆ ಖರ್ಚು ಮಾಡಲಾಗಿರುವ ಹಣ ಎಷ್ಟು?

ಇ) ಈ ಅವಧಿಯಲ್ಲಿ ಕೈಗೊಂಡಿರುವ ಜಿಲ್ಲಾವಾರು ಯೋಜನೆಗಳು ಯಾವುವು? ಖರ್ಚಾಗಿರುವ ಮೊತ್ತವೆಷ್ಟು (ಜಿಲ್ಲಾವಾರು ವಿವರ ನೀಡುವುದು)?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ಕಳೆದ 5 ವರ್ಷಗಳಿಂದ ಪಶುಸಂಗೋಪನೆಗಾಗಿ ಈ ಕೆಳಕಂಡ ಯೋಜನೆಗಳನ್ನು ಕೈಗೊಳ್ಳಲಾಗಿದೆ

ಜಿಲ್ಲಾ ವಲಯ ಕಾರ್ಯಕ್ರಮಗಳು

1 ಪಶು ಆಸ್ಪತ್ರೆಗಳಿಗೆ ಔಷಧ ಮತ್ತು ರಾಸಾಯನಿಕಗಳ ಸರಬರಾಜು ಯೋಜನೆ

2 ದ್ರವಸಾರಜನಕ ಮತ್ತು ಕೃತಕ ಗರ್ಭಧಾರಣೆ ಸಲಕರಣೆಗಳ ಸರಬರಾಜು ಯೋಜನೆ

3 ಕಟ್ಟಡಗಳು

4 ಗಿರಿರಾಜ ಕೋಳಿ ಸಾಕಾಣೆ ಮತ್ತು ಸರಬರಾಜು

5 ಗೊಡ್ಡುರಾಸುಗಳ ಚಿಕಿತ್ಸಾ ಶಿಬಿರದ ವ್ಯವಸ್ಥೆ

6 ವಿಶೇಷ ಜಾನುವಾರು ತಳಿ ಅಭಿವೃದ್ಧಿ ಯೋಜನೆ

7 ವಿಸ್ತರಣಾ ಘಟಕಗಳ ಬಲವರ್ಧನೆ

8 ಜಿಲ್ಲಾ ಮಟ್ಟದಲ್ಲಿ ಪಾಲಿ ಕ್ಲಿನಿಕ್‌ಗಳ ಸ್ಥಾಪನೆ

9 ಪಶು ಚಿಕಿತ್ಸಾಲಯಗಳನ್ನು ತೆರೆಯುವುದು ಮತ್ತು ಮೇಲ್ದರ್ಜೆಗೇರಿಸುವುದು

10 ಟಗರು ಮತ್ತು ಹಂದಿ ಮರಿಗಳ ಸರಬರಾಜು ಕಾರ್ಯಕ್ರಮ

11 ಮುಧೋಳ ಶ್ವಾನ ರಕ್ಷಣಾ ಕಾರ್ಯಕ್ರಮ

12 ಕುರಿ ಮಂಡಳಿ ಮುಖಾಂತರ ಕುರಿ ವಿಮೆ ಯೋಜನೆ ಮತ್ತು ಕುರಿ ಮತ್ತು ಉಣ್ಣೆ ಅಭಿವೃದ್ಧಿ ಯೋಜನೆ

13 ಜಾನುವಾರು ರೋಗಗಳ ನಿಯಂತ್ರಣ ಯೋಜನೆ

14 ಮೇವಿನ ಮಿನಿ ಕಿಟ್ ಸರಬರಾಜು ಯೋಜನೆ

15 ಮೇವಿನ ಪೌಷ್ಟೀಕರಣ ಯೋಜನೆ

16 ಮೊಲ ಸಾಕಾಣಿಕೆ

ರಾಜ್ಯ ವಲಯ ಕಾರ್ಯಕ್ರಮಗಳು.

1 ಕರ್ನಾಟಕ ಪಶುವೈದ್ಯಕೀಯ ವಿಶ್ವವಿದ್ಯಾಲಯ ಸ್ಥಾಪನೆ

2 ಹಿಂದುಳಿದ ತಾಲ್ಲೂಕುಗಳಲ್ಲಿ ಹೊಸ ಪಶು ಚಿಕಿತ್ಸಾಲಯ ಸ್ಥಾಪನೆ (ಹೊಸ ಕಾರ್ಯಕ್ರಮ)

3 ಸುವರ್ಣ ಕರ್ನಾಟಕ ಗೋತಳಿ ಸಂರಕ್ಷಣೆ ಯೋಜನೆ (ಹೊಸ ಕಾರ್ಯಕ್ರಮ)

4 ಗೋಮೂತ್ರದಲ್ಲಿನ ಔಷಧಿ ಗುಣಮಟ್ಟಗಳ ಮೇಲೆ ಹೆಚ್ಚಿನ ಸಂಶೋಧನೆ (ಹೊಸ ಕಾರ್ಯಕ್ರಮ)

5 ಶಿವಮೊಗ್ಗದಲ್ಲಿ ಪಶುವೈದ್ಯಕೀಯ ಕಾಲೇಜು ಸ್ಥಾಪನೆ (ಹೊಸ ಕಾರ್ಯಕ್ರಮ)

6 ಕೇಂದ್ರ ನೆರವಿನಡಿ ಗ್ರಾಮೀಣ ನಿರ್ವಹಣೆ ಮತ್ತು ಆಡಳಿತ ಸಂಸ್ಥೆ ಸ್ಥಾಪನೆ (ಹೊಸ ಕಾರ್ಯಕ್ರಮ)

7 ಕೇಂದ್ರ ಪುರಸ್ಕೃತ ದೊಡ್ಡರೋಗ ನಿವಾರಣಾ ಯೋಜನೆ ಕಣ್ಗಾವಲು ಕಾರ್ಯಕ್ರಮ (ಹೊಸ ಕಾರ್ಯಕ್ರಮ)

8 ಶುದ್ಧ ಹಾಗೂ ಗುಣಮಟ್ಟದ ಹಾಲು ಉತ್ಪಾದನೆ (ಹೊಸ ಕಾರ್ಯಕ್ರಮ)

9 ಪಶುಸಂಗೋಪನೆ ಮೇಲಿನ ಬಂಡವಾಳ ವೆಚ್ಚ (ಹೊಸ ಕಾರ್ಯಕ್ರಮ)

ಆ) ಈ ಯೋಜನೆಗಳಿಗೆ 2006–07ರಲ್ಲಿ ಜಿಲ್ಲಾ ವಲಯ ಮತ್ತು ರಾಜ್ಯವಲಯ ಕಾರ್ಯಕ್ರಮ ಅಡಿಯಲ್ಲಿ 16400 38 ಲಕ್ಷಗಳ ಅನುದಾನ ನಿಗಧಿಯಾಗಿದೆ ರೂ 6258 29 ಲಕ್ಷ ಅನುದಾನ ಬಿಡುಗಡೆಯಾಗಿದೆ ಹಾಗೂ ರೂ 4689 26 ಲಕ್ಷ ಅನುದಾನ ಖರ್ಚು ಮಾಡಲಾಗಿದೆ

ಇ) ಜಿಲ್ಲಾ ವಲಯ ಯೋಜನೆಗಳ ವಿವರವನ್ನು ಅನುಬಂಧ–1ರಲ್ಲಿ ವಿವರವಾಗಿ ಸಲ್ಲಿಸಿದ್ದು ಡಿಸೆಂಬರ್ ಅಂತ್ಯಕ್ಕೆ ನಿಗಧಿಯಾದ ರೂ 3009 32 ಲಕ್ಷ ಅನುದಾನದಲ್ಲಿ 1771 04 ಲಕ್ಷ ಬಿಡುಗಡೆಯಾಗಿದ್ದು ರೂ 1761 54 ಲಕ್ಷಗಳ ಅನುದಾನ ಬಳಕೆಯಾಗಿದೆ ಜಿಲ್ಲಾವಾರು ವಿವರ ಅನುಬಂಧ–2 ರಲ್ಲಿ ಸಲ್ಲಿಸಿದೆ

ಪ್ರಶ್ನೆ ಸಂಖ್ಯೆ 958 ಅನುಬಂಧ–1 ಶ್ರೀ ವೈಜ್ಞನಾಥ ಪಾಟೀಲ್

ಅ) ಜಿಲ್ಲಾ ವಲಯ ಕಾರ್ಯಕ್ರಮಗಳು

1) ಜಾನುವಾರು ಆಸ್ಪತ್ರೆಯಲ್ಲಿ ಪಾಲಿಕ್ಲಿನಿಕ್ ಸ್ಥಾಪನೆ.

ಪಾಲಿಕ್ಲಿನಿಕ್ ಸ್ಥಾಪನೆಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಪ್ರಸಕ್ತ ಸಾಲಿನಲ್ಲಿ ರೂ 21 63 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ

2) ಕಟ್ಟಡಗಳು

ಜಿಲ್ಲಾವಲಯಕ್ಕೆ ಸೇರಿದ ವಿವಿಧ ಪಶು ಸಂಸ್ಥೆಗಳ ಕಟ್ಟಡಗಳ ನಿರ್ಮಾಣ ಹಾಗೂ ನಿರ್ವಹಣೆಗಾಗಿ ಪ್ರಸಕ್ತ ಸಾಲಿನಲ್ಲಿ ರೂ 135 80 ಲಕ್ಷಗಳು ನಿಗಧಿಪಡಿಸಿದೆ

3) ಔಷಧಿ ಮತ್ತು ರಾಸಾಯನಿಕ ಸರಬರಾಜು

2006–07ನೇ ಸಾಲಿನಲ್ಲಿ ಘನೀಕೃತ ವೀರ್ಯ ನಳಿಕೆಗಳನ್ನು ಸಂರಕ್ಷಿಸಲು ಬೇಕಾದ ದ್ರವ ಸಾರಜನಕ ಔಷಧಿ, ಲಸಿಕೆಗಳು ಹಾಗೂ ರಾಸಾಯನಿಕಗಳ ಖರೀದಿಗಾಗಿ ರೂ 512 09 ಲಕ್ಷಗಳ ಅನುದಾನವನ್ನು ನಿಗಧಿಪಡಿಸಿದೆ

4) ಜಾನುವಾರು ತಳಿ ಸಂವರ್ಧನಾ ಕೇಂದ್ರ

ಜಾನುವಾರು ತಳಿ ಸಂವರ್ಧನಾ ಕೇಂದ್ರ, ಬುರ್ಗಿ, ಚಾಮರಾಜನಗರ ಜಿಲ್ಲೆ ಇಲ್ಲಿಯ ಸಿಬ್ಬಂದಿಯ ವೇತನಕ್ಕಾಗಿ ಹಾಗೂ ಇತರೆ ವೆಚ್ಚಕ್ಕಾಗಿ ರೂ 6 41 ಲಕ್ಷಗಳನ್ನು ಪ್ರಸಕ್ತ ಸಾಲಿನಲ್ಲಿ ನಿಗಧಿಪಡಿಸಿದೆ

5) ಗಿರಿರಾಜ ಹಕ್ಕಿಗಳ ಸಾಕಾಣಿಕೆ

ಗ್ರಾಮೀಣ ಜನತೆಯ ಹಿತ್ತಲಲ್ಲಿ ಕೋಳಿ ಸಾಕಾಣಿಕೆ ಮಾಡಲು ಆರ್ಥಿಕ ಅಭಿವೃದ್ಧಿ ಹೊಂದಲು ಸಹಾಯವಾಗುವಂತೆ ಹೆಚ್ಚು ಹೆಚ್ಚು ಗಿರಿರಾಜ ಕೋಳಿ ಸಾಕಾಣಿಕೆ ಮಾಡಿ ಸರಬರಾಜು ಮಾಡಲು ಪ್ರಸಕ್ತ ಸಾಲಿನಲ್ಲಿ ರೂ 32 60 ಲಕ್ಷಗಳನ್ನು ನಿಗಧಿಪಡಿಸಿದೆ

6) ವಿಸ್ತರಣಾ ಘಟಕಗಳ ಬಲಪಡಿಸುವಿಕೆ

ಜಾನುವಾರು ಆರೋಗ್ಯ ಮತ್ತು ಜಾನುವಾರುಗಳ ಅಭಿವೃದ್ಧಿಗೆ ಸಂಬಂಧಿಸಿದ ವಿಸ್ತರಣಾ ಚಟುವಟಿಕೆಗಳಿಗಾಗಿ ಪ್ರಸಕ್ತ ಸಾಲಿನಲ್ಲಿ ರೂ 27 07 ಲಕ್ಷಗಳನ್ನು ನಿಗಧಿಪಡಿಸಿದೆ

7) ಮೊಲ ಸಾಕಾಣಿಕೆ ಕ್ಷೇತ್ರಗಳು

ಕೋಲಾರ ಮತ್ತು ಕೊಡಗು ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ರೂ 1 00 ಲಕ್ಷ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಮೊಲಗಳನ್ನು ಉತ್ಪಾದಿಸಿ ರೈತರಿಗೆ ವಿತರಣೆ ಮಾಡುವ ಗುರಿಯನ್ನು ಹೊಂದಲಾಗಿದೆ

8) ಜಾನುವಾರು ರೋಗಗಳ ನಿಯಂತ್ರಣ (ಕೇಂದ್ರ–75 ರಾಜ್ಯ – 25)

ಈ ಕಾರ್ಯಕ್ರಮದಲ್ಲಿ ಪ್ರಸಕ್ತ ಸಾಲಿನಲ್ಲಿ ರೂ 470 68 ಲಕ್ಷ ವೆಚ್ಚದಲ್ಲಿ ಜಾನುವಾರುಗಳಿಗೆ ಹಾಲು ಬಾಯಿ ಜ್ವರ, ಗಂಟಲು ಬೇನೆ ಹಾಗೂ ಪಿ ಪಿ ಆರ್ ರೋಗಗಳ ವಿರುದ್ಧ ಲಸಿಕೆ ಹಾಕುವ ಗುರಿ ಹೊಂದಲಾಗಿದೆ

ಆ) ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳು

9) ಗ್ರಾಮೀಣ ಪಶುವೈದ್ಯ ಶಾಲೆಗಳನ್ನು ತೆರೆಯುವುದು ಹಾಗೂ ಅವುಗಳನ್ನು ಮೇಲ್ದರ್ಜೆಗೇರಿಸುವುದು

ಹಾಲಿ ಇರುವ ಪಶು ಸಂಸ್ಥೆಗಳ ಸಿಬ್ಬಂದಿ ವೇತನ, ಹಾಗೂ ಇತರೆ ಖರ್ಚಿಗಾಗಿ ಹಾಗೂ ಹೊಸದಾಗಿ ಪ್ರಾರಂಭಿಸುವ ಪಶು ಸಂಸ್ಥೆಗಳ ಖರ್ಚಿಗಾಗಿ ಹಾಗೂ ಪಶು ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸುವುದಕ್ಕಾಗಿ ಪ್ರಸಕ್ತ ಸಾಲಿನಲ್ಲಿ ರೂ 1745 52 ಲಕ್ಷ ಅನುದಾನ ನಿಗಧಿಪಡಿಸಲಾಗಿದೆ

10) ಗೊಡ್ಡು / ಬಂಜೆ ಜಾನುವಾರುಗಳ ಶಿಬಿರದ ವ್ಯವಸ್ಥೆ

ಪ್ರಸಕ್ತ ಸಾಲಿನಲ್ಲಿ ರೂ 51 61 ಲಕ್ಷಗಳ ಅನುದಾನದೊಂದಿಗೆ ಗೊಡ್ಡು ಜಾನುವಾರು ಶಿಬಿರಗಳನ್ನು ಏರ್ಪಡಿಸುವುದು ಹಾಗೂ ರೈತರಲ್ಲಿ ಜಾನುವಾರುಗಳಲ್ಲಿನ ಬಂಜೆತನದ ಬಗ್ಗೆ ಅರಿವು ಮೂಡಿಸುವುದು ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ

11) ಟಗರು ಮತ್ತು ಹಂದಿ ಸರಬರಾಜು

ಕುರಿ ಮತ್ತು ಹಂದಿ ಅಭಿವೃದ್ಧಿಗಾಗಿ ರೂ 4 97 ಲಕ್ಷ ವೆಚ್ಚದಲ್ಲಿ ಆಯ್ದ ಐದು ಜಿಲ್ಲೆಗಳಲ್ಲಿ ಉತ್ತಮ ಗುಣಮಟ್ಟದ ಟಗರು ಮತ್ತು ಹಂದಿಗಳನ್ನು ದುರ್ಬಲ ವರ್ಗದ ಜನರಿಗೆ ಸರಬರಾಜು ಮಾಡಲು ಉದ್ದೇಶಿಲಾಗಿದೆ

ಅನುಬಂಧ–2

ಪ್ರಶ್ನೆ ಸಂಖ್ಯೆ 956 ಶ್ರೀ ವೈಜ್ಯನಾಥ ಪಾಟೀಲ್ (ಚಿಂಚೋಳಿ)
ಜಿಲ್ಲಾವಾರು ಪ್ರಗತಿ ವಿವರ

ಆರ್ಥಿಕ

ಕ್ರಮ ಸಂಖ್ಯೆ	ಜಿಲ್ಲೆ	ವಾರ್ಷಿಕ ನಿಗಧಿ	ಸಂಚಿತ ಗುರಿ	ಸಂಚಿತ ಪ್ರಗತಿ	%	ಬಿಡುಗಡೆ
1	ಬಾಗಲಕೋಟೆ	123 76	102 80	103 32	100 51	82 35
2	ಬೆಂಗಳೂರು ಗ್ರಾ	134 89	74 32	85 32	114 80	72 8
3	ಬೆಂಗಳೂರು ನಗರ	137 66	121 25	69 15	57 03	92 16

4	ಬೆಳಗಾಂ	166 23	136 28	138 44	101 58	108 75
5	ಬಳ್ಳಾರಿ	115 55	89 95	65 20	72 48	75 52
6	ಬೀದರ್	83 90	50 40	33 87	67 20	33 87
7	ಬಿಜಾಪುರ	114 71	92 72	72 40	78 08	72 40
8	ಚಾಮರಾಜನಗರ	74 22	60 00	47 26	78 77	47 26
9	ಚಿಕ್ಕಮಗಳೂರು	104 00	80 06	54 99	68 69	54 99
10	ಚಿತ್ರದುರ್ಗ	59 98	37 39	24 15	64 59	24 15
11	ದಾವಣಗೆರೆ	119 57	92 15	42 42	46 08	62 28
12	ದಕ್ಷಿಣ ಕನ್ನಡ	83 64	69 98	61 98	88 57	58 23
13	ಧಾರವಾಡ	106 94	80 79	57 52	71 20	63 54
14	ಗದಗ	49 46	42 52	40 61	95 51	32 7
15	ಗುಲ್ಬರ್ಗಾ	198 47	150 01	104 93	69 95	101 89
16	ಹಾಸನ	124 72	105 12	72 18	68 66	88 82
17	ಹಾವೇರಿ	51 28	33 31	31 94	95 89½	31 90
18	ಕೊಡಗು	49 80	23 25	18 97	81 59	22 89
19	ಕೋಲಾರ	164 10	146 03	100 65	68 92	95 00
20	ಕೊಪ್ಪಳ	75 72	61 28	47 95	78 25	17 07
21	ಮಂಡ್ಯ	128 75	93 85	74 76	79 66	74 76
22	ಮೈಸೂರು	166 83	127 50	95 34	74 78	94 13
23	ರಾಯಚೂರು	150 22	111 57	67 08	60 12	70 36
24	ಶಿವಮೊಗ್ಗ	149 88	122 50	69 57	56 79	91 23
25	ತುಮಕೂರು	162 10	128 47	95 20	72 55	85 00

26	ಉಡುಪಿ	60 78	50 50	51 27	101 52	50 50
27	ಉತ್ತರ ಕನ್ನಡ	50 16	36 24	37 07	102 29	36 4
	ಒಟ್ಟು	**3009 32**	**2320 24**	**1761 54**	**75 92**	**1771 04**

651 (959) ಶ್ರೀ ವೈಜನಾಥ ಪಾಟೀಲ್ (ಚಂಚೋಳಿ) ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ವಿವಿಧ ಕಾರ್ಮಿಕರ ಮಕ್ಕಳ ಕಲ್ಯಾಣಕ್ಕಾಗಿ ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು?

ಆ) ಅವುಗಳನ್ನು ಯಾವಾಗ ರೂಪಿಸಲಾಯಿತು?

ಇ) ಅವುಗಳಲ್ಲಿ ಜಾರಿಯಾಗುತ್ತಿರುವ ಕಲ್ಯಾಣ ಯೋಜನೆಗಳು ಯಾವುವು?

ಈ) ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸದ ನೆರವಿಗಾಗಿ ಎಲ್ಲ ಹಂತದಲ್ಲಿ ವಿದ್ಯಾಭ್ಯಾಸ ಸರ್ಕಾರ ನೀಡುವ ವಿದ್ಯಾರ್ಥಿ ವೇತನ/ಸಹಾಯ ಧನದ ಮಿತಿಯನ್ನು ಯಾವಾಗ ನಿರ್ಧರಿಸಲಾಯಿತು

ಉ) ಹಾಗಿದ್ದಲ್ಲಿ, ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಕಾರ್ಮಿಕ ಮಕ್ಕಳಿಗೆ ನೀಡುತ್ತಿರುವ ಸಹಾಯ ಧನ/ವಿದ್ಯಾರ್ಥಿ ವೇತನದ ಪರಿಷ್ಕರಣೆ ಆಗಿದೆಯೇ?

ಊ) ಹಾಗಿಲ್ಲದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಋ) ವಿವಿಧ ಜಿಲ್ಲೆಗಳ ಕಾರ್ಮಿಕರ ಮಕ್ಕಳಿಗೆ ಕಳೆದ ಮೂರು ವರ್ಷಗಳಲ್ಲಿ ನೀಡಲಾಗಿರುವ ವಿದ್ಯಾರ್ಥಿ ವೇತನ ಎಷ್ಟು?

ಎ) ಉನ್ನತ ವ್ಯಾಸಂಗಕ್ಕೆ ನೀಡಲಾದ ಸಹಾಯ ಧನದ ಮೊತ್ತವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ) ಕಾರ್ಮಿಕರ ಮಕ್ಕಳ ಕಲ್ಯಾಣಕ್ಕಾಗಿ ಸರ್ಕಾರವು ನೇರವಾಗಿ ಯಾವುದೇ ಯೋಜನೆಗಳನ್ನು ರೂಪಿಸಿರುವುದಿಲ್ಲ ಆದರೆ, ಕಾರ್ಮಿಕ ಕಲ್ಯಾಣ ಮಂಡಳಿಯ ವತಿಯಿಂದ ಕಾರ್ಮಿಕರ ಮಕ್ಕಳ ಕಲ್ಯಾಣಕ್ಕಾಗಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ

1) ವಿದ್ಯಾರ್ಥಿ ವೇತನ, ಐ ಟಿ ಐ ಮತ್ತು ಪಾಲಿಟೆಕ್ನಿಕ್ ಶಿಕ್ಷಣ ಶುಲ್ಕ

ಐ ಟಿ ಐ – ರೂ 1,500/–

ಪಾಲಿಟೆಕ್ನಿಕ್ – ರೂ 2,000/–

2) ಕಾರ್ಮಿಕರು ಹಾಗೂ ಅವರ ಕುಟುಂಬ ವರ್ಗದವರಿಗೆ ಸಂಬಂಧಿಸಿದಂತೆ ಕಣ್ಣು ಚಿಕಿತ್ಸೆ ಶಿಬಿರಗಳನ್ನು ನಡೆಸುವ ಸಂಸ್ಥೆಗಳಿಗೆ ಧನ ಸಹಾಯ ರೂ 5,000/–

ಅ) ಈ ಯೋಜನೆಗಳನ್ನು 2005 ರಿಂದ ರೂಪಿಸಲಾಗಿದೆ

ಇ) ಈ ಮೇಲಿನ ಎಲ್ಲಾ ಕಲ್ಯಾಣ ಯೋಜನೆಗಳು ಜಾರಿಯಲ್ಲಿರುತ್ತವೆ

ಈ) 8ನೇ ವರ್ಗದಿಂದ ಉನ್ನತ ಶಿಕ್ಷಣ ಪಡೆಯುವ ಕಾರ್ಮಿಕ ಮಕ್ಕಳಿಗೆ ವಿದ್ಯಾರ್ಥಿ ವೇತನವನ್ನು 1974 ರಿಂದ 2004 ರವರೆಗೆ ಜಾರಿಯಲ್ಲಿ ಇತ್ತು ತದನಂತರ 2005ರಿಂದ ಐ ಟಿ ಐ ಹಾಗೂ ಪಾಲಿಟೆಕ್ನಿಕ್ ಕಲಿಯುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಜಾರಿಗೆ ತರಲಾಯಿತು

ಉ) ಸಧ್ಯದಲ್ಲಿ ಇಲ್ಲ

ಊ) ಇದರ ಬಗ್ಗೆ ಕಲ್ಯಾಣ ಮಂಡಳಿಯು ತೀರ್ಮಾನವನ್ನು ತೆಗೆದುಕೊಳ್ಳುವಂತೆ ಕೋರಲಾಗುವುದು

ಋ) ಯಾವುದೂ ಇಲ್ಲ

ಎ) 1998–99 ರಿಂದ 2002–03ನೇ ಸಾಲಿನವರೆಗೆ ನೀಡಲಾದ ವಿದ್ಯಾರ್ಥಿ ವೇತನದ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ

ಅನುಬಂಧ

ಜಿಲ್ಲಾವಾರು ವಿದ್ಯಾರ್ಥಿ ವೇತನ ವಿವರಣಾ ಪಟ್ಟಿ

ಕ್ರ.ಸಂ	ಜಿಲ್ಲೆಗಳು	1998-99		1990-00		2000-01		2001-02		2002-03		2003-05
1	ಹಾಸನ	32	11840	40	14680	44	22800	55	29700	73	41000	ಸರ್ಕಾರಿ, ಐ.ಟಿ.ಐ
2	ಕೊಪ್ಪಳ	45	16640	48	21920	54	30700	63	34500	64	34000	ಮತ್ತು ಡಿಪ್ಲೋಮೊ
3	ಚಾಮರಾಜನಗರ	13	6680	06	4600	03	1900	10	6400	08	2900	ಕಾರ್ಮಿಕರ ಮಕ್ಕಳಿಗೆ
4	ಮಂಡ್ಯ	20	12680	18	11840	35	22300	39	29600	38	24100	ವೇತನ ಯೋಜನೆ ಜಾರಿ
5	ಕೊಡಗು	01	600	05	2840	13	9600	18	13400	12	7900	ತರಲಾಗಿದೆ ಅದರಂತೆ,
6	ಮೈಸೂರು	11	7920	15	11520	15	9700	36	25300	24	18000	ಹಳೆಯ ವಿದ್ಯಾರ್ಥಿ ವೇತನ
7	ಬಳ್ಳಾರಿ	08	6200	15	8600	12	8400	57	41500	77	54600	ಮುಂದುವರಿಕೆಯನ್ನು
8	ಬೀದರ್	26	15400	31	17760	32	22600	61	40600	76	52900	ಮಂಡಳಿ 4-1-2007
9	ಶಿವಮೊಗ್ಗ	118	71640	168	108560	187	120100	160	106700	150	98700	ರಂದು ನಡೆದ 70ನೇ
10	ಬಿಜಾಪುರ	306	160320	80	42880	73	48900	59	35900	107	67500	ಸಭೆಯಲ್ಲಿ ನಿರ್ಣಯಿಸ
11	ಗದಗ್	17	9040	30	14480	26	15200	87	52100	138	83700	ಲಾಗಿದೆ ಇದು ಮುಂದಿನ
12	ರಾಯಚೂರು	11	9800	10	8640	15	12100	29	22800	77	61800	ಶೈಕ್ಷಣಿಕ ವರ್ಷದಿಂದ
13	ಗುಲ್ಬರ್ಗಾ	164	103680	102	66080	75	55800	68	55800	107	87300	ಜಾರಿಗೆ ಬರುತ್ತದೆ
14	ಉತ್ತರ ಕನ್ನಡ	134	87280	127	82080	182	119900	118	76500	116	74000	
15	ಉಡುಪಿ	18	10680	37	19160	58	35400	77	44800	158	92200	
16	ಬೆಳಗಾಂ	138	60480	170	73120	139	87100	119	71800	212	120300	
17	ಚಿಕ್ಕಮಗಳೂರು	35	19720	27	14960	66	40100	118	72200	151	97400	
18	ಧಾರವಾಡ	30	23720	25	19520	21	18700	50	33900	73	60900	

ಕ್ರ.ಸಂ	ಜಿಲ್ಲೆಗಳು	1998-99		1990-00		2000-01		2001-02		2002-03		2003-05
19	ದಾವಣಗೆರೆ	13	9000	75	45640	122	72900	147	92400	223	132000	
20	ಕೋಲಾರ	26	17840	32	27640	86	51500	46	31200	166	89200	
21	ಚಿತ್ರದುರ್ಗ	241	177440	232	93080	205	117700	247	140600	217	127700	
22	ದಕ್ಷಿಣ ಕನ್ನಡ	49	26160	26	11720	49	28400	72	41000	249	148200	
23	ಬಾಗಲಕೋಟೆ	211	94720	621	316040	213	119600	212	121400	226	134400	
24	ತುಮಕೂರು	155	76840	197	89640	197	119700	239	143300	247	133500	
25	ಹಾವೇರಿ	144	76720	156	76480	195	119800	201	121700	234	149800	
26	ಬೆಂಗಳೂರು ಗ್ರಾಮಾಂತರ	68	37280	103	60800	139	91600	228	164100	228	151900	
27	ಬೆಂಗಳೂರು ನಗರ	125	78480	138	75760	117	88100	205	148100	255	155200	
	ಒಟ್ಟು	**2159**	**1158200**	**2554**	**1340040**	**2376**	**1492200**	**2821**	**1791300**	**3726**	**2301100**	

653 (961) ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದರಾಬಾದ್ ಕರ್ನಾಟಕ ಪ್ರದೇಶದ ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳಲ್ಲಿನ (ನಂಜುಂಡಪ್ಪ ವರದಿಯಲ್ಲಿ ಉಲ್ಲೇಖಿತ) ಆರೋಗ್ಯ ಕೇಂದ್ರಗಳ ಸುಧಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಹಾಗಿದ್ದಲ್ಲಿ, ಎಲ್ಲಾ ಯೋಜನೆಗಳಿಗಾಗಿ ಕೈಗೊಂಡಿರುವ ತಾಲ್ಲೂಕುವಾರು ವಿನಿಯೋಗಿಸುತ್ತಿರುವ ಹಣವೆಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಡಾ ನಂಜುಂಡಪ್ಪ ರವರ ವರದಿ ಪ್ರಕಾರ ರಾಜ್ಯದ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿನ 45 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ಹೈದರಾಬಾದ್ ಕರ್ನಾಟಕದ ತಾಲ್ಲೂಕುಗಳಲ್ಲಿ 17 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗಿದೆ

ಈ 39 ತಾಲ್ಲೂಕುಗಳಲ್ಲಿನ ಎಲ್ಲಾ 399 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 24 ಗಂಟೆಗಳ ನರ್ಸಿಂಗ್ ವ್ಯವಸ್ಥೆಯನ್ನು ಮಾಡಲಾಗಿದೆ ಈ ಕೇಂದ್ರಗಳಿಗೆ ಹೆಚ್ಚುವರಿ ಆಯುಶ್ ವೈದ್ಯರನ್ನು ನೇಮಿಸಲಾಗಿರುತ್ತದೆ ಹೈದರಾಬಾದ್ ಕರ್ನಾಟಕದ ಪ್ರದೇಶಗಳಲ್ಲಿ 16 ತಾಲ್ಲೂಕು ಆಸ್ಪತ್ರೆಗಳನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ಹಾಗೂ ಈ ಕೇಂದ್ರಗಳಿಗೆ ಬೇಕಾಗುವ ಅತ್ಯವಶ್ಯಕ ಉಪಕರಣ ಒದಗಿಸಲು 10 ರೂ ಕೋಟಿ ನಿಗದಿಪಡಿಸಲಾಗಿದ್ದು ಕ್ರಮ ಕೈಗೊಳ್ಳಲಾಗುತ್ತಿದೆ

NRHM ಅಡಿಯಲ್ಲಿ ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ 75,000 ರೂ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಿಗೆ 1 ಲಕ್ಷ ರೂ ನಿರ್ವಹಣೆಗಾಗಿ ಬಿಡುಗಡೆ ಮಾಡಲಾಗಿದೆ

54 ಎಫ್ ಆರ್ ಯು ಗಳಲ್ಲಿ ಹೆಚ್ಚುವರಿಯಾಗಿ ಒಬ್ಬ ಪ್ರಯೋಗ ಶಾಲಾ ತಂತ್ರಜ್ಞರನ್ನು ಒಬ್ಬ ಶುಶ್ರೂಷಕಿಯರನ್ನು ತೆಗೆದುಕೊಳ್ಳಲಾಗಿದೆ

ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿನ 399 ಪ್ರಾ.ಆ ಕೇಂದ್ರಗಳಲ್ಲಿ 24 ಗಂಟೆಗಳ ನರ್ಸಿಂಗ್ ವ್ಯವಸ್ಥೆಯನ್ನು ಕೊಡಲಾಗಿದೆ ಈ ಕೇಂದ್ರಗಳಿಗೆ ಹೆಚ್ಚುವರಿ AYUSH ವೈದ್ಯರನ್ನು ನೇಮಿಸಲಾಗಿದೆ

C ವರ್ಗದ ಜಿಲ್ಲೆಗಳಲ್ಲಿ 100 ಹೆಚ್ಚುವರಿ ವೈದ್ಯರು ಹಾಗೂ 160 ಶುಶ್ರೂಷಕಿಯರನ್ನು ನೇಮಿಸಲಾಗಿದೆ ಕಷ್ಟಕರವಾದ ರೋಗಿಗಳನ್ನು ತಜ್ಞ ವೈದ್ಯರುಗಳ ಬಳಿಗೆ ಕರೆದೊಯ್ಯಲು ಸಾಗಣೆ ವ್ಯವಸ್ಥೆಯನ್ನು ಮಾಡಲಾಗಿದೆ

ಈ ಹಿಂದೆ ಬಹುತೇಕ ಆಸ್ಪತ್ರೆಗಳಲ್ಲಿ ಮಾರ್ಗಸೂಚಿ ಪ್ರಕಾರ ಸಿಬ್ಬಂದಿ ಮಂಜೂರಾತಿ ಇದರ ಆಸ್ಪತ್ರೆಗಳಿಗೆ 1800 ಸಿಬ್ಬಂದಿಯನ್ನು ಮಂಜೂರು ಮಾಡಲಾಗಿದೆ

ಆ) ಈ ಎಲ್ಲಾ ಯೋಜನೆಗಳಿಗೆ ಒಟ್ಟು 7413 43 ಲಕ್ಷ ರೂ ಗಳನ್ನು ವಿನಿಯೋಗಿಸಲಾಗುತ್ತದೆ (ತಾಲ್ಲೂಕುವಾರು ಪಟ್ಟಿ ಲಗತ್ತಿಸಿದೆ)

ಪ್ರಶ್ನೆ ಸಂಖ್ಯೆ961 ದಿ 08-02-2007

ಹೈದರಾಬಾದ್ ಕರ್ನಾಟಕ ಪ್ರದೇಶದ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ವಿನಿಯೋಗಿಸುತ್ತಿರುವ ಹಣ

ಕ್ರ ಸಂ	ತಾಲ್ಲೂಕು	ವಿನಿಯೋಗಿಸುತ್ತಿರುವ (ಹಣ ಲಕ್ಷ ರೂ.ಗಳಲ್ಲಿ)
1	ಹಗರಿಬೊಮ್ಮನಹಳ್ಳಿ	446 86
2	ಕೂಡ್ಲಗಿ	448 62
3	ಸಂಡೂರು	279 16
4	ಸಿರಗುಪ್ಪ	447 40
5	ಜೌರಾದ್	450 27
6	ಹುಮ್ನಾಬಾದ್	450 19
7	ಭಾಲ್ಕಿ	178 50
8	ಬಸವಕಲ್ಯಾಣ	450 55
9	ಶಹಾಪುರ	454 70
10	ಅಫ್‌ಜಲ್‌ಪುರ	450 11
11	ಆಳಂದ	455 25

12	ಸುರುಪುರ	452 60
13	ಚಿತ್ತಾಪುರ	454 25
14	ಚಿಂಚೋಳಿ	451 63
15	ಕೊಪ್ಪಳ	182 32
16	ಗಂಗಾವತಿ	13 19
17	ಸಿಂಧನೂರು	278 75
18	ದೇವದುರ್ಗ	619 35
19	ಮಾನ್ವಿ	449 73
	ಒಟ್ಟು	**7413 43**

654 (469) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಆಸ್ಪತ್ರೆಗಳಿಗೆ ಪ್ರತಿ ವರ್ಷ ಖರೀದಿ ಮಾಡುವ ಔಷಧಿಗಳು ಎಷ್ಟು?

ಆ) ಔಷಧಿಯನ್ನು ಯಾವ ವಿಧಾನವನ್ನು ಅನುಸರಿಸಿ ಖರೀದಿ ಮಾಡಲಾಗುವುದು?

ಇ) ಅನೇಕ ಆಸ್ಪತ್ರೆಗಳಲ್ಲಿ ಔಷಧಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 2004–05 ನೇ ಸಾಲಿನ ದರಗುತ್ತಿಗೆ ಆದೇಶದಂತೆ ಒಟ್ಟು 228 ವಿವಿಧ ಔಷಧಿ, ರಾಸಾಯನಿಕ ಮತ್ತು ಇತರೆ ವಸ್ತುಗಳನ್ನು ಪ್ರತಿ ವರ್ಷ ಖರೀದಿಸಿ, ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡಲಾಗುತ್ತಿದೆ

ಆ) ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ಕಾಯ್ದೆ 1999 ನಿಯಮ 2000 ರನ್ವಯ ರಾಷ್ಟ್ರೀಯ ಮಟ್ಟದಲ್ಲಿ ಮೂಲ ಉತ್ಪಾದಕರಿಂದ

ಟೆಂಡರ್‌ನ್ನು ಆಹ್ವಾನಿಸಿ ದರಗುತ್ತಿಗೆ ನಿಗಧಿಪಡಿಸಿ, ರಾಜ್ಯದ ಆರೋಗ್ಯ ಸಂಸ್ಥೆಗಳ ಬೇಡಿಕೆಗನುಗುಣವಾಗಿ ಔಷಧಿಗಳನ್ನು ಖರೀದಿ ಮಾಡಲಾಗುವುದು

ಇ) ಕೆಲವು ಹಂತದ ಆಸ್ಪತ್ರೆಗಳಲ್ಲಿ ಅನುದಾನದ ಕೊರತೆಯಿಂದಾಗಿ ಔಷಧ ಪೂರೈಕೆಯ ಕೊರತೆ ಇರುವ ಅಂಶವನ್ನು ಮನಗಂಡು 2006–07 ನೇ ಸಾಲಿನಿಂದ ಅಂತಹ ಆಸ್ಪತ್ರೆಗಳಿಗೆ ಅನುದಾನವನ್ನು ಹೆಚ್ಚಿಸಿಕೊಳ್ಳಲಾಗಿದ್ದು, ಹೆಚ್ಚಳಗೊಂಡಿರುವ ಅನುದಾನದಿಂದ ಔಷಧಿ, ರಾಸಾಯನಿಕ ಮತ್ತು ಇತರೆ ವಸ್ತುಗಳನ್ನು ಖರೀದಿಸಿ ಪೂರೈಸಲಾಗುತ್ತಿದೆ

655 (470) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪಶುಸಂಗೋಪನಾ ಆಸ್ಪತ್ರೆಗಳೆಷ್ಟು?

ಆ) ಪಶುಸಂಗೋಪನಾ ಆಸ್ಪತ್ರೆಗಳಲ್ಲಿ ಕೊರತೆ ಇರುವ ವೈದ್ಯರ ಸಂಖ್ಯೆ ಎಷ್ಟು?

ಇ) ಪಶುಸಂಗೋಪನಾ ಆಸ್ಪತ್ರೆಯನ್ನು ಆಧುನೀಕರಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ 3878 ವಿವಿಧ ಪಶುವೈದ್ಯ ಸಂಸ್ಥೆಗಳಿದ್ದು, ಅವುಗಳಲ್ಲಿ ಪಶು ಆಸ್ಪತ್ರೆಗಳ ಸಂಖ್ಯೆ 295

ಆ) ಈ ಪಶು ಆಸ್ಪತ್ರೆ ಮತ್ತು ಪಶು ಚಿಕಿತ್ಸಾಲಯಗಳಲ್ಲಿ 58 ಸಹಾಯಕ ನಿರ್ದೇಶಕ ಮತ್ತು 824 ಪಶುವೈದ್ಯಾಧಿಕಾರಿಗಳ ಕೊರತೆ ಇದೆ

ಇ) (1) ಪಶು ಸಂಗೋಪನಾ ಆಸ್ಪತ್ರೆಯನ್ನು ಆಧುನೀಕರಿಸಲು ಕಟ್ಟಡ ಇಲ್ಲದ ಸ್ಥಳಗಳಲ್ಲಿ ಕಟ್ಟಡ ನಿರ್ಮಾಣ ಈ ದಿಸೆಯಲ್ಲಿ RIDF Trench XI ಮತ್ತು XII ರಲ್ಲಿ 321 ಪಶುವೈದ್ಯ ಸಂಸ್ಥೆಗಳ ಕಟ್ಟಡಗಳು ನಿರ್ಮಾಣ ಮಾಡಲು ಮಂಜೂರಾತಿ ದೊರಕಿದ್ದು RIDF XI ರ 171 ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದೆ

(2) ಶಿಥಿಲೀಕರಣ ಯಂತ್ರಗಳನ್ನೊಳಗೊಂಡಂತೆ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಎಲ್ಲಾ ತಾಲ್ಲೂಕುಗಳಲ್ಲಿ ಮಟ್ಟದ ಪ್ರಯೋಗ

ಶಾಲೆ ಸ್ಥಾಪನೆ ಮಾಡಿ ರೋಗ ತಪಾಸಣೆ/ನಿರ್ಣಯವನ್ನು ತ್ವರಿತಗೊಳಿಸಿ ಸೂಕ್ತ ಚಿಕಿತ್ಸೆ ನೀಡುವುದು

(3) ಈ ದಿಸೆಯಲ್ಲಿ ಈಗಾಗಲೇ 120 ತಾಲ್ಲೂಕು ಆಸ್ಪತ್ರೆಗಳಿಗೆ ಪ್ರಾಣಿರೋಗ, ಪ್ರಯೋಗ ಶಾಲೆ ಸ್ಥಾಪನೆಗೆ ಮೂಲಭೂತ ಸೌಲಭ್ಯ ಒದಗಿಸಲು ಕ್ರಮ ವಹಿಸಿದೆ ಎಲ್ಲಾ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು ಮತ್ತು ಕೃತಕ ಗರ್ಭಧಾರಣ ಕೇಂದ್ರಗಳನ್ನು ಹಂತ ಹಂತವಾಗಿ ಉನ್ನತೀಕರಿಸಿ ಗುಣಮಟ್ಟದ ತಜ್ಞ ವೈದ್ಯರಿಂದ ಜಾನುವಾರುಗಳಿಗೆ ಚಿಕಿತ್ಸೆ ದೊರಕಲು ಕ್ರಮವಹಿಸಿದೆ

656 (471) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳೆಷ್ಟು?

ಆ) ಔಷಧಿಗಳ ಬೆಲೆ ಹೆಚ್ಚಾಗುತ್ತಿದ್ದಲ್ಲಿ ಬೆಲೆಯನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಕಲಬೆರಕೆ ಔಷಧಿಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮವೇನು?

ಡಾ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು).

ಅ) 36

ಆ) ಔಷಧಿ ಬೆಲೆ ನಿಗದಿ ಪಡಿಸುವ ಅಧಿಕಾರವನ್ನು ಕೇಂದ್ರ ಸರ್ಕಾರವೇ ಹೊಂದಿರುತ್ತದೆ ಔಷಧ ಬೆಲೆ ನಿಯಂತ್ರಣ ಆದೇಶ 1995ನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರವು ರಾಷ್ಟ್ರೀಯ ಔಷಧಿ ಬೆಲೆ ನಿಗದಿ ಪಡಿಸುವ ಪ್ರಾಧಿಕಾರವನ್ನು ರಚಿಸಿದೆ ಪ್ರಾಧಿಕಾರವು ಕಾಲ ಕಾಲಕ್ಕೆ ಎಲ್ಲಾ ಅನುಸೂಚಿತ ಔಷಧಿಗಳ ಬೆಲೆ ನಿಗದಿಪಡಿಸಿ ಆದೇಶಗಳನ್ನು ಹೊರಡಿಸುತ್ತದೆ

ಇ) ಔಷಧಿ ಪರೀಕ್ಷಾ ಪ್ರಯೋಗಾಲಯವು ಔಷಧ ನಿಯಂತ್ರಣ ಅಧಿಕಾರಿಗಳು ವಿಶ್ಲೇಷಣೆಗೆ ಕಳುಹಿಸುವ ಔಷಧಿ ಮಾದರಿಗಳನ್ನು ವಿಶ್ಲೇಷಿಸಿ ವಿಶ್ಲೇಷಣಾ ವರದಿ ನೀಡುತ್ತಾರೆ ವರ್ಷಕ್ಕೆ ಸುಮಾರು 2,700ಕ್ಕೂ ಅಧಿಕ ಔಷಧಿಗಳನ್ನು ಪರೀಕ್ಷಿಸಲಾಗುತ್ತದೆ

657 (472) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರಾಥಮಿಕ ಹಾಗೂ ಉನ್ನತ ಆಸ್ಪತ್ರೆಗಳ ಸಂಖ್ಯೆ ಎಷ್ಟು?

ಆ) ಪ್ರಾಥಮಿಕ ಹಾಗೂ ಉನ್ನತ ಆಸ್ಪತ್ರೆಗಳಲ್ಲಿ ಕೊರತೆ ಇರುವ ವೈದ್ಯರ ಸಂಖ್ಯೆ ಎಷ್ಟು?

ಇ) ಜಿಲ್ಲಾ ಆಸ್ಪತ್ರೆಗಳನ್ನು ನವೀಕರಣಗೊಳಿಸಲು ಕೈಗೊಂಡಿರುವ ಕ್ರಮಗಳೇನು?

ಈ) ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಧಾರವಾಡಗಳಲ್ಲಿ ಇರುವ ಉನ್ನತ ಆಸ್ಪತ್ರೆಗಳು ಯಾವುವು?

ಉ) ಈ ಆಸ್ಪತ್ರೆಗಳನ್ನು ಆಧುನೀಕರಣಗೊಳಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 579 ಪ್ರಾಥಮಿಕ ಆರೋಗ್ಯ ಘಟಕಗಳು, 1679 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ತಾಲ್ಲೂಕು ಆಸ್ಪತ್ರೆಗಳನ್ನೊಳಗೊಂಡಂತೆ 301 ಸಮುದಾಯ ಆರೋಗ್ಯ ಕೇಂದ್ರಗಳು, 24 ಜಿಲ್ಲಾ ಆಸ್ಪತ್ರೆಗಳು ಹಾಗೂ 42 ಇತರೆ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯ ಅಡಿಯಲ್ಲಿ 9 ಉನ್ನತ ಆಸ್ಪತ್ರೆಗಳು ಇರುತ್ತವೆ

ಆ) ಪ್ರಾಥಮಿಕ ಹಾಗೂ ಉನ್ನತ ಆಸ್ಪತ್ರೆಗಳಲ್ಲಿ ಕೊರತೆ ಇರುವ ವೈದ್ಯರ ಸಂಖ್ಯೆ 781

ಇ) ಕೆಲವೊಂದು ಜಿಲ್ಲಾ ಆಸ್ಪತ್ರೆಗಳನ್ನು ವೈದ್ಯಕೀಯ ಮಹಾವಿದ್ಯಾಲಯವನ್ನಾಗಿ ಪರಿವರ್ತಿಸಲು ಕ್ರಮ ಕೈಗೊಂಡಿರುತ್ತದೆ ಇದರಿಂದ ಆಸ್ಪತ್ರೆಗಳಲ್ಲಿ ಹೆಚ್ಚಿನ ವೈದ್ಯಕೀಯ ಸೌಲಭ್ಯವನ್ನು ಸಾರ್ವಜನಿಕರಿಗೆ ನೀಡಲಾಗುತ್ತಿದೆ ಜಿಲ್ಲಾ ಆಸ್ಪತ್ರೆಗಳ ಹಾಸಿಗೆಗಳ ಸಾಮರ್ಥ್ಯವನ್ನು ಸಹ ಹೆಚ್ಚಿಸಿ ಅವುಗಳಿಗೆ ಬೇಕಾಗುವ ಹುದ್ದೆಗಳ ಮಂಜೂರಾತಿ ಕಟ್ಟಡ ಕಾಮಗಾರಿಗಳನ್ನು ಸಹ ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ವಿಶೇಷ ತಜ್ಞರನ್ನು ಮತ್ತು ವಿಶೇಷ ವೈದ್ಯಕೀಯ ಸೌಲಭ್ಯ ನೀಡುವ ಉಪಕರಣಗಳನ್ನು ಸಹ ಖರೀದಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಔಷಧಿ ಸರಬರಾಜನ್ನು ಕೊರತೆ ಇಲ್ಲದಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಈ ಸೌಲಭ್ಯವನ್ನು ನೀಡುವುದರಿಂದ ಸಾರ್ವಜನಿಕರಿಗೆ ವಿಶೇಷ ವೈದ್ಯಕೀಯ ಸೌಲಭ್ಯವನ್ನು ನೀಡಲು ಅನುಕೂಲವಾಗುತ್ತಿದೆ

ಈ) ಬೆಂಗಳೂರು ನಗರದಲ್ಲಿ ವಿಕ್ಟೋರಿಯಾ ಆಸ್ಪತ್ರೆ, ಬೌರಿಂಗ್ ಮತ್ತು ಲೇಡಿಕರ್ಜನ್ ಆಸ್ಪತ್ರೆ, ಸರ್ಕಾರಿ ದಂತ ವೈದ್ಯಕೀಯ ಮಹಾ ವಿದ್ಯಾಲಯ, ವಾಣಿವಿಲಾಸ ಆಸ್ಪತ್ರೆ ಮಿಂಟೋ ಕಣ್ಣಾಸ್ಪತ್ರೆ, ಎಸ್ ಡಿ ಎಸ್ ಟಿಬಿ ಮತ್ತು ರಾಜೀವ್ ಗಾಂಧಿ ಎದೆ ರೋಗಗಳ ಆಸ್ಪತ್ರೆಗಳಿವೆ ಮೈಸೂರು ನಗರದಲ್ಲಿ ಕೆ ಆರ್ ಆಸ್ಪತ್ರೆ, ಚೆಲುವಾಂಬ ಮತ್ತು ಪಿ ಕೆ ಟಿ ಬಿ ಆಸ್ಪತ್ರೆ, ಇವುಗಳು ಇವೆ

ಹುಬ್ಬಳ್ಳಿ – ಧಾರವಾಡ ಅವಳಿ ನಗರದಲ್ಲಿ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ ಮತ್ತು ಮಾನಸಿಕ ರೋಗಿಗಳ ಆಸ್ಪತ್ರೆ ಧಾರವಾಡ ಇವುಗಳು ಇದ್ದು ಅದು ಸ್ವಾಯತ್ತ ಸಂಸ್ಥೆಯಾಗಿರುತ್ತದೆ

ಉ) ಅ) ವಿಕ್ಟೋರಿಯಾ ಮತ್ತು ಬೌರಿಂಗ್ ಆಸ್ಪತ್ರೆಗಳನ್ನು ಆಧುನೀಕರಣಗೊಳಿಸಲು ರೂ 48 00 ಕೋಟಿ ಮತ್ತು 42 00 ಕೋಟಿಗಳನ್ನು ಸರ್ಕಾರದ ಆದೇಶ ಸಂಖ್ಯೆ ಆಕುಕ 166 ಎಂಎಸ್ಎಫ್ 2006 ದಿನಾಂಕ 4–8–2006 ರಂದು ರೂ 30 00 ಕೋಟಿಗಳನ್ನು ಸರ್ಕಾರವು ಒದಗಿಸಿದೆ ಅಲ್ಲದೆ ಬಿ ಡಿ ಎ ವತಿಯಿಂದ ಹೊರರೋಗಿಗಳ ವಿಭಾಗ ಮತ್ತು ತುರ್ತು ಚಿಕಿತ್ಸಾ ವಿಭಾಗವನ್ನು ಬೌರಿಂಗ್ ಆಸ್ಪತ್ರೆಯಲ್ಲಿ ನಿರ್ಮಿಸಲಾಗಿದೆ

ಅಲ್ಲದೆ ಈ ಕೆಳಕಂಡ ಆಸ್ಪತ್ರೆಗಳಿಗೆ ಪ್ರಸಕ್ತ ಸಾಲಿನಲ್ಲಿ ದುರಸ್ತಿ ಮತ್ತು ಅಭಿವೃದ್ಧಿಗಾಗಿ ಈ ಕೆಳಕಂಡ ಮೊಬಲಗನ್ನು ಬಿಡುಗಡೆ ಮಾಡಲಾಗಿದೆ

ಕ್ರ ಸಂ.	ಆಸ್ಪತ್ರೆಯ ಹೆಸರು	ರೂ. ಲಕ್ಷಗಳಲ್ಲಿ
1	ವಿಕ್ಟೋರಿಯಾ ಆಸ್ಪತ್ರೆ	116 626
2	ಬೌರಿಂಗ್ ಮತ್ತು ಲೇಡಿಕರ್ಜನ್ ಆಸ್ಪತ್ರೆ	63 765
3	ವಾಣಿ ವಿಲಾಸ	12 86
4	ಮಿಂಟೋ ಕಣ್ಣಾಸ್ಪತ್ರೆ	28 60
5	ಎಸ್ ಡಿ ಎಸ್ ಟಿ ಬಿ ಮತ್ತು ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ	155 97
6	ಕೆ ಆರ್ ಆಸ್ಪತ್ರೆ, ಮೈಸೂರು	34 51
7	ಚೆಲುವಾಂಬ ಆಸ್ಪತ್ರೆ	10 26
8	ಪಿ ಕೆ ಟಿ ಬಿ ಆಸ್ಪತ್ರೆ	34 25

ಆ) ರೋಗಿಗಳಿಗೆ ಉತ್ತಮ ಶುಶ್ರೂಷೆ ನೀಡುವ ಸಲುವಾಗಿ ವೈದ್ಯಕೀಯ ಶಿಕ್ಷಣ ವ್ಯಾಪ್ತಿಯಲ್ಲಿ ಬರುವ ಬೋಧಕ ಆಸ್ಪತ್ರೆಗಳಿಗೆ ಅತ್ಯಾವಶ್ಯಕವಾಗಿ ಬೇಕಾಗಿರುವ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನು ಖರೀದಿಸಲಾಗಿದೆ ಹಾಗೂ 2005–06 ರಲ್ಲಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ 24 ಗಂಟೆಗಳ ಕೇಂದ್ರೀಯ ಪ್ರಯೋಗ ಶಾಲಾ ಕಟ್ಟಡವನ್ನು ಕಟ್ಟಿಸಿ ಇನ್‌ಫೋಸಿಸ್ ರವರು ಉದಾರವಾಗಿ ದೇಣಿಗೆ ನೀಡಿದ್ದಾರೆ ಅದಕ್ಕೆ ಬೇಕಾದ ಪ್ರಯೋಗ ಶಾಲಾ ಸಾಧನ ಸಲಕರಣೆಗಳನ್ನು ಸುಮಾರು ರೂ 2 00 ಕೋಟಿ ಮೊತ್ತದಲ್ಲಿ ಒದಗಿಸಲಾಗಿದೆ ಮತ್ತು ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಬೆಂಗಳೂರು ಇಲ್ಲಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಹೊರರೋಗಿಗಳ ವಿಭಾಗ ಮತ್ತು ತುರ್ತು ಚಿಕಿತ್ಸಾ ವಿಭಾಗವನ್ನು ನಿರ್ಮಿಸಲಾಗಿದ್ದು, ಇಲ್ಲಿ ಟ್ರಾಮಾ ಕೇರ್ ಸೆಂಟರ್ ಪ್ರಾರಂಭಿಸುವುದಕ್ಕೆ ಬೇಕಾದ ಅತ್ಯಾಧುನಿಕ ವೈದ್ಯಕೀಯ ಉಪಕರಣ ಮತ್ತು ಪೀರೋಪಕರಣಗಳನ್ನು ಸುಮಾರು ರೂ 2 00 ಕೋಟಿ ಮೊತ್ತದಲ್ಲಿ ಖರೀದಿಸಲು ಆದೇಶ ನೀಡಲಾಗಿದೆ ಸದರಿ ಉಪಕರಣಗಳು ಸರಬರಾಜು ಹಂತದಲ್ಲಿವೆ ಮತ್ತು ಶೀಘ್ರವೇ ಟ್ರಾಮಾಕೇರ್ ಸೆಂಟರ್‌ಗೆ ವಿಭಾಗವನ್ನು ಪ್ರಾರಂಭಿಸಲಾಗುವುದು

2005–06ರಲ್ಲಿ ವೈದ್ಯಕೀಯ ಶಿಕ್ಷಣ ವ್ಯಾಪ್ತಿಯಲ್ಲಿ ಬರುವ ಬೆಂಗಳೂರು ಮತ್ತು ಮೈಸೂರು ನಗರದ ಬೋಧಕ ಆಸ್ಪತ್ರೆಗಳಿಗೆ ರೂ 4,23,24,371=00 ಗಳ ವೆಚ್ಚದಲ್ಲಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ 24 ಗಂಟೆಗಳ ಕೇಂದ್ರೀಯ ಪ್ರಯೋಗ ಶಾಲೆ ಉಪಕರಣ ಸೇರಿ ಉಪಕರಣಗಳನ್ನು ಖರೀದಿಸಲಾಗಿದೆ ಇದರಿಂದ ರೋಗಿಗಳಿಗೆ ರೋಗ ತಪಾಸಣೆಗೆ ತುಂಬಾ ಉಪಯೋಗವಾಗುತ್ತದೆ ಹಾಗೂ 2006–07 ನೇ ಇಸವಿಯಲ್ಲಿ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಬೆಂಗಳೂರು ಟ್ರಾಮಾಕೇರ್ ಸೆಂಟರ್ ಪ್ರಾರಂಭಿಸುವುದಕ್ಕೆ ಬೇಕಾದ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನು ಮತ್ತು ಇತರೆ ಆಸ್ಪತ್ರೆಗಳಿಗೆ ಉಪಕರಣಗಳನ್ನು ಒಟ್ಟು ರೂ 7,81,26,550=00 ಗಳ ವೆಚ್ಚದಲ್ಲಿ ಖರೀದಿಸಲಾಗಿದೆ ಇವುಗಳಲ್ಲಿ ಮುಖ್ಯವಾಗಿ ಸಿ ಟಿ ಸ್ಕ್ಯಾನರ್, ಹೈ–ಎಂಡ್ ಎಕ್ಸರೇ, ಮತ್ತು ರಕ್ತ ನಿಧಿ ಉಪಕರಣಗಳು, ಸಿ–ಆರ್ಮ್ ಮತ್ತು ಮ್ಯಾಮೋಗ್ರಾಫಿ ಮುಂತಾದ ಅತ್ಯಾಧುನಿಕ ಉಪಕರಣಗಳನ್ನು ಸರಬರಾಜು ಮಾಡಲಾಗಿದೆ ಅಲ್ಲದೇ ಕೆ ಆರ್ ಆಸ್ಪತ್ರೆ, ಮೈಸೂರು ಇಲ್ಲಿನ 24 ಗಂಟೆಗಳ ಕೇಂದ್ರೀಯ ಪ್ರಯೋಗ ಶಾಲೆಗೆ ಬೇಕಾದ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನು ಖರೀದಿಸಲು ಮತ್ತು ಎಂ ಸಿ ಎ

ನಿಯಮಾವಳಿಗಳ ಪ್ರಕಾರ ಎಂ ಆರ್ ಐ ಈ ಉಪಕರಣವು ಅತ್ಯಾವಶ್ಯಕವಾಗಿ ಬೇಕಾಗಿರುವುದರಿಂದ ಕಲರ್ ಡಾಪ್ಲರ್ ಮತ್ತು ಇತರೆ ಅತ್ಯಾಧುನಿಕ ವೈದ್ಯಕೀಯ ಉಪಕರಣಗಳನ್ನು ಖರೀದಿಸಲು ಸಹ ಟೆಂಡರ್ ಕರೆಯಲಾಗಿದ್ದು, ಟೆಂಡರ್‌ನ ವಿವಿಧ ಹಂತದ ಪ್ರಕ್ರಿಯೆಗಳು ಮುಗಿದಿದ್ದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಹಂತದಲ್ಲಿದೆ ಹಾಗೂ ಕೆ ಆರ್ ಆಸ್ಪತ್ರೆ, ಮೈಸೂರು ಇಲ್ಲಿನ ಟ್ರಾಮಾ ಕೇರ್ ಸೆಂಟರ್ ಪ್ರಾರಂಭಿಸಲು ರೂ 150 00 ಲಕ್ಷಗಳಿಗೆ ಕೇಂದ್ರ ಸರ್ಕಾರದ ಸಹಾಯಾನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ

658 (1069) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಸಾಂಕ್ರಾಮಿಕ ರೋಗಗಳು ಹರಡುತ್ತಿವೆ?

ಆ) ಸಾಂಕ್ರಾಮಿಕ ರೋಗವನ್ನು ತಡೆಗಟ್ಟಲು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಯಾವ ರೀತಿಯ ಕ್ರಮವನ್ನು ಕೈಗೊಳ್ಳಲಾಗಿದೆ?

ಇ) ಇದಕ್ಕಾಗಿ ಪ್ರತಿ ವರ್ಷ ಮೀಸಲಿಡಲಾಗುತ್ತಿರುವ ಹಣ ಎಷ್ಟು?

ಈ) ಇದರಲ್ಲಿ ಖರ್ಚಾದ ಹಣ ಎಷ್ಟು?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಕಾಲರಾ, ಕರಳುಬೇನೆ, ವಿಷಮಶೀತ ಜ್ವರ, ಕಾಮಾಲೆ, ಮಂಗನಕಾಯಿಲೆ ಮತ್ತು ಇಲಿಜ್ವರ, ಚಿಕೂನ್ ಗುನ್ಯ ಇತ್ಯಾದಿ ಸಾಂಕ್ರಾಮಿಕ ರೋಗಗಳು ಆಗಾಗ ಸಂಭವಿಸುತ್ತಿವೆ

ಆ) **ಈ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು,**

ಜಿಲ್ಲಾ ಮಟ್ಟದಲ್ಲಿ

- ಜಿಲ್ಲಾ ಸಾಂಕ್ರಾಮಿಕ ರೋಗಗಳ ಕಣ್ಗಾವಲು ಘಟಕವು ಕುಡಿಯುವ ನೀರಿನಿಂದ ಹರಡುವ ರೋಗಗಳನ್ನು ತಡೆಯಲು ನೀರಿನ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆ ಮಾಡುತ್ತಿದೆ
- ಈ ಪರೀಕ್ಷೆ ಫಲಿತಾಂಶದ ಆಧಾರದ ಮೇಲೆ ಯೋಗ್ಯವಲ್ಲದ ನೀರಿನ ಮೂಲಗಳನ್ನು ತಕ್ಷಣ ಕ್ಲೋರಿನೇಷನ್ ಮಾಡಲಾಗುತ್ತಿದೆ

ಮತ್ತು ಗ್ರಾಮಪಂಚಾಯತ್, ಮುನಿಸಿಪಾಲಿಟಿಗಳಿಗೆ ಸುರಕ್ಷಿತ ಕುಡಿಯುವ ನೀರನ್ನು ಪೂರೈಸಲು ಸೂಚನೆಗಳನ್ನು ನೀಡಲಾಗುತ್ತಿದೆ

- ಸಾಂಕ್ರಾಮಿಕ ರೋಗಗಳು ಸಂಭವಿಸಿದಾಗ ನಿಯಂತ್ರಣಾ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಮಟ್ಟದಲ್ಲಿ ಕ್ಷಿಪ್ರ ಕಾರ್ಯಾಚರಣೆ ಪಡೆ ತಕ್ಷಣ ಕಾರ್ಯಪ್ರವೃತ್ತರಾಗುತ್ತಿದ್ದಾರೆ
- ಜೀವರಕ್ಷಕ ಹಾಗೂ ಇತರೆ ಎಲ್ಲಾ ಅವಶ್ಯಕ ಔಷಧಿಗಳನ್ನು ಹಾಗೂ ಕ್ರಿಮಿ/ಕೀಟನಾಶಕಗಳನ್ನು ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಒದಗಿಸಲಾಗಿದೆ
- ಮಂಗನಕಾಯಿಲೆ ಪೀಡಿತ ಐದು ಜಿಲ್ಲೆಗಳ ಪ್ರದೇಶಗಳಲ್ಲಿ ಅರ್ಹ ಜನರಿಗೆ ರೋಗ ನಿರೋಧಕ ಲಸಿಕೆಗಳನ್ನು ನೀಡಲಾಗುತ್ತಿದೆ
- ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರತಿ ತಿಂಗಳು ಸಾಂಕ್ರಾಮಿಕ ರೋಗಗಳ ಸಮನ್ವಯ ಸಮಿತಿಯ ಸಭೆಯಲ್ಲಿ ಎಲ್ಲಾ ಸಾಂಕ್ರಾಮಿಕ ರೋಗಗಳ ನಿಯಂತ್ರಣಾ ಕಾರ್ಯಗಳನ್ನು ಪರಿಶೀಲಿಸಿ, ಅಧ್ಯಕ್ಷರು ಸೂಚಿಸಿರುವ ಕ್ರಮಗಳನ್ನು ಸಹ ಅನುಷ್ಠಾನಗೊಳಿಸಲಾಗುತ್ತಿದೆ

ತಾಲ್ಲೂಕು ಮಟ್ಟದಲ್ಲಿ

- ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ತಾಲ್ಲೂಕು ಆರೋಗ್ಯಾಧಿಕಾರಿಗಳ ನೇತೃತ್ವದಲ್ಲಿ ಕ್ಷಿಪ್ರ ಕಾರ್ಯಾಚರಣೆ ಪಡೆ ಕಾರ್ಯನಿರ್ವಹಿಸುತ್ತಿದೆ
- ಸಾಂಕ್ರಾಮಿಕ ರೋಗಗಳು ಸಂಭವಿಸದಂತೆ ಪ್ರತಿ ಗ್ರಾಮದಲ್ಲೂ ಸಕ್ರಿಯ ರೋಗ ಸಮೀಕ್ಷೆಯನ್ನು ನಿರಂತರವಾಗಿ ಮಾಡಿಸಲಾಗುತ್ತಿದೆ
- ನೇರ ಸಂಪರ್ಕ ಹಾಗೂ ಇತರೆ ಮಾಧ್ಯಮಗಳ ಮೂಲಕ ಜನಸಾಮಾನ್ಯರಿಗೆ ಸಾಂಕ್ರಾಮಿಕ ರೋಗಗಳ ಬಗ್ಗೆ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ

ಕೇಂದ್ರ ಸರ್ಕಾರದ ರಾಷ್ಟ್ರೀಯ ಗ್ರಾಮೀಣ ಅಭಿಯಾನ ಅಡಿಯಲ್ಲಿ ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳನ್ನು ರಚಿಸಿದ್ದು ಹಾಗೂ ಪ್ರತಿ ಗಾಮ ಸಮಿತಿಗೆ ರೂ 10,000 ಅನುದಾನವನ್ನು ಆರೋಗ್ಯ ಮತ್ತು ನೈರ್ಮಲ್ಯ ಕಾಪಾಡಲು ನೀಡುವ ಯೋಜನೆ ಜಾರಿಯಲ್ಲಿದೆ

ಉಪಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಇವುಗಳಿಗೆ ಮುಕ್ತನಿಧಿ ಅನುದಾನ ನೀಡಿದ್ದು ಸಾಂಕ್ರಾಮಿಕ ರೋಗ ತಡೆಗಟ್ಟಲು ಸಹ ಕ್ರಮ ಕೈಗೊಳ್ಳಲಾಗಿದೆ

ಆ) ಇದಕ್ಕೆಂದು ಪ್ರತ್ಯೇಕ ಹಣವನ್ನು ನಿಗದಿಪಡಿಸಿರುವುದಿಲ್ಲ ಈ ಕಾಯಿಲೆಗಳ ನಿವಾರಣೆಗಾಗಿ ಗ್ರಾಮಮಟ್ಟದಲ್ಲಿ ವಿವಿಧೋದ್ದೇಶ ಕಾರ್ಯಕರ್ತರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಉಪ ಕೇಂದ್ರಗಳಿಗೆ ತಲಾ 5 ಸಾವಿರದಂತೆ, ತಾಲ್ಲೂಕು ಆರೋಗ್ಯ ಕೇಂದ್ರಗಳಿಗೆ ತಲಾ 1 ಲಕ್ಷದಂತೆ ಔಷಧೇತರಕ್ಕೆ ನೀಡಲಾಗುತ್ತಿದೆ ಇಂತಹ ಸಾಂಕ್ರಾಮಿಕ ರೋಗಗಳು ಬಂದಾಗ ಔಷಧಿ ಹಾಗೂ ರಸಾಯನಿಕಗಳನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ 2006–07ನೇ ಸಾಲಿನಲ್ಲಿ ಚಿಕೂನ್ ಗುನ್ಯಾ ರೋಗವು ಸಾಂಕ್ರಾಮಿಕ ರೂಪ ತಾಳಿದ್ದು ಇದಕ್ಕಾಗಿ ವಿಶೇಷವಾಗಿ ರೂ 877 00 ಲಕ್ಷಗಳನ್ನು ಮೀಸಲಿಡಲಾಗಿತ್ತು

ಈ) ಚಿಕೂನ್ ಗುನ್ಯಾಕ್ಕೆ ಮೀಸಲಾಗಿಟ್ಟ ಮೊತ್ತದಲ್ಲಿ ರೂ 777 00 ಲಕ್ಷಗಳನ್ನು ಖರ್ಚು ಮಾಡಲಾಗಿದೆ

659 (970) ಶ್ರೀ ವೆಂಕಟಮುನಿಯಪ್ಪ ಬಿ ಪಿ (ಬೇತಮಂಗಲ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06ನೇ ಸಾಲಿನಲ್ಲಿ ಮಂಜೂರಾದ 129 ವೈಯಕ್ತಿಕ ಕೊಳವೆ ಬಾವಿಗಳಲ್ಲಿ 49 ಹಾಗೂ 2006–07ನೇ ಸಾಲಿನಲ್ಲಿ ಮಂಜೂರಾದ 119 ವೈಯಕ್ತಿಕ ಕೊಳವೆ ಬಾವಿಗಳನ್ನು ಇನ್ನೂ ಕೊರೆಯಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಆರ್ಥಿಕ ವರ್ಷ ಅಂತ್ಯವಾಗುತ್ತಿದ್ದರೂ ಕೊಳವೆ ಬಾವಿಗಳನ್ನು ಕೊರೆಯಿಸದ ಇಲಾಖಾಧಿಕಾರಿಗಳ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಇ) ಹಾಗಿದ್ದಲ್ಲಿ, ಮಂಜೂರಾಗಿರುವ ವೈಯಕ್ತಿಕ ಕೊಳವೆ ಬಾವಿಗಳನ್ನು ಕೊರೆಯಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) 2005–06ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯ ಬೇತಮಂಗಲ ಕ್ಷೇತ್ರಕ್ಕೆ ನಿಗದಿಪಡಿಸಿದ ಗುರಿ ಈ ಕೆಳಕಂಡಂತಿವೆ

	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ
ಆಯವ್ಯಯದಲ್ಲಿ ನಿಗದಿಪಡಿಸದ ಗುರಿ –	113	06
ಹೆಚ್ಚುವರಿ ಗುರಿಯಲ್ಲಿ ಮಂಜೂರಾದ –	–	10
ಕೊಳವೆ ಬಾವಿಗಳ ಸಂಖ್ಯೆ		
ಒಟ್ಟು	**113**	**16**

ಮೇಲ್ಕಾಣಿಸಿದಂತೆ ಪರಿಶಿಷ್ಟ ಜಾತಿಗೆ 113 ಮತ್ತು ಪರಿಶಿಷ್ಟ ವರ್ಗಕ್ಕೆ 16 ಒಟ್ಟು 129 ಕೊಳವೆಬಾವಿಗಳನ್ನು 2005-06ನೇ ಸಾಲಿನಲ್ಲಿ ಕೊರೆದು ಪೂರ್ಣಗೊಳಿಸಲಾಗಿದೆ

2006-07ನೇ ಸಾಲಿನಲ್ಲಿ ಆಯವ್ಯಯದಲ್ಲಿ ನಿಗದಿ ಪಡಿಸಿದ ಪರಿಶಿಷ್ಟ ಜಾತಿಗೆ 105 ಮತ್ತು ಪರಿಶಿಷ್ಟ ವರ್ಗಕ್ಕೆ 12 ಕೊಳವೆ ಬಾವಿಗಳನ್ನು ಕೊರೆಯಲು ಈಗಾಗಲೇ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿದ್ದು, ಅದರಂತೆ ಕಾರ್ಯಪ್ರಗತಿಯಲ್ಲಿದೆ

ಆ) ದಿನಾಂಕ 31-03-07ಕ್ಕೆ ಅಂತ್ಯಗೊಳ್ಳಲಿರುವ ಆರ್ಥಿಕ ಸಾಲಿನಲ್ಲಿ ಎಲ್ಲಾ ಕೊಳವೆಬಾವಿಗಳನ್ನು ಕೊರೆದು ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಿದ್ದು ಅದರಂತೆ ಈ ಯೋಜನೆಯ ಬಗ್ಗೆ ಹೆಚ್ಚಿನ ಆದ್ಯತೆ ನೀಡಿ ಕೊಳವೆಬಾವಿಗಳನ್ನು ಕೊರೆದು ಪೂರ್ಣಗೊಳಿಸಲು ಜಿಲ್ಲಾ ವ್ಯವಸ್ಥಾಪಕರಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ

ಇ) ಕೊಳವೆಬಾವಿ ಕೊರೆಯುವ ಕಾರ್ಯ ಪ್ರಗತಿಯಲ್ಲಿದ್ದು, ದಿನಾಂಕ 31-03-2007 ರೊಳಗೆ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ

660 (475) ಶ್ರೀ ವಿನಯ ಕುಲಕರ್ಣಿ (ಧಾರವಾಡ ಗ್ರಾಮೀಣ) ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಗ್ರಾಮೀಣ ಮತ ಕ್ಷೇತ್ರದಲ್ಲಿ ಮತ್ತು ಧಾರವಾಡ ಜಿಲ್ಲೆಯಲ್ಲಿ ಸ್ಥಳೀಯ ಜಾನುವಾರುಗಳ ತಳಿಗಳ ಅಭಿವೃದ್ಧಿ ಕಡೆಗೆ ಅಧಿಕಾರಿಗಳು ನಿರ್ಲಕ್ಷಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಸ್ಥಳೀಯ ಜಾನುವಾರುಗಳ ಅಭಿವೃದ್ಧಿಪಡಿಸುವ ಯೋಜನೆ ಏನಾದರೂ ಸರ್ಕಾರಕ್ಕೆ ಇದೆಯೆ?

ಇ) ಸ್ಥಳೀಯ ತಳಿಗಳ ಬದಲಾಗಿ ಮುರ್ರಾ ತಳಿಗಳಂತಹವು ಹೆಚ್ಚಾಗಿ ಕಂಡುಬರುತ್ತಿದ್ದು ಈ ಬಗ್ಗೆ ಸರ್ಕಾರದ ಅಭಿಪ್ರಾಯವೇನು?

ಈ) ಧಾರವಾಡ ಗ್ರಾಮೀಣ ಮತಕ್ಷೇತ್ರದಲ್ಲಿ ಸಿಬ್ಬಂದಿ ಕೊರತೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಉ) ಹಾಗಿದ್ದಲ್ಲಿ ಸಿಬ್ಬಂದಿ ಕೊರತೆಯನ್ನು ಯಾವಾಗ ಪೂರ್ಣಗೊಳಿಸ ಲಾಗುವುದು?

ಊ) ಧಾರವಾಡ ಗ್ರಾಮೀಣ ಮತಕ್ಷೇತ್ರದಲ್ಲಿ 6–7 ಕಿಲೋಮೀಟರ್ ವ್ಯಾಪ್ತಿಗೆ ಒಂದು ಪಶು ಆಸ್ಪತ್ರೆಯನ್ನು ಪ್ರಾರಂಭಿಸಿದರೆ ಇಲ್ಲಿನ ರೈತರಿಗೆ ತುಂಬಾ ಅನುಕೂಲವಾಗುವುದಿಲ್ಲವೆ?

ಋ) ಹೊಸದಾಗಿ ಆಸ್ಪತ್ರೆಗಳನ್ನು ತೆರೆಯುವ ಯೋಜನೆ ಏನಾದರೂ ಸರ್ಕಾರಕ್ಕೆ ಇದೆಯೆ? ಇದ್ದಲ್ಲಿ ಅದು ಯಾವಾಗ?

ಎ) ಧಾರವಾಡ ಗ್ರಾಮೀಣ ಮತಕ್ಷೇತ್ರದಲ್ಲಿ ಪಶು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಬಗ್ಗೆ ಈಗಾಗಲೇ ನಾನು ಹಲವು ಬಾರಿ ವಿನಂತಿಸಿದ್ದರೂ ಏನು ಪರಿಣಾಮ ಕಂಡುಬಂದಿರುವುದಿಲ್ಲ ಇದಕ್ಕೆ ಸರ್ಕಾರದ ನಿಲುವೇನು?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ಇಲಾಖೆ ಕಾರ್ಯಕ್ರಮಗಳಲ್ಲಿ ಒಂದಾದ ತಳಿ ಅಭಿವೃದ್ಧಿಯನ್ನು ಕೃತಕ ಗರ್ಭಧಾರಣೆ ಮುಖಾಂತರ ನಿರ್ವಹಿಸಲಾಗುತ್ತಿದೆ ಧಾರವಾಡ ಗ್ರಾಮೀಣ ಮತ ಕ್ಷೇತ್ರದಲ್ಲಿರುವ ಎಲ್ಲ ಪಶುವೈದ್ಯ ಸಂಸ್ಥೆಗಳಲ್ಲಿ ಸ್ಥಳೀಯ ಗೋತಳಿಯಾದ ಖಿಲಾರ ತಳಿಯ ವೀರ್ಯ ನಳಿಕೆಗಳನ್ನು ಸಹ ಕೃತಕ ಗರ್ಭಧಾರಣೆಗೆ ಉಪಯೋಗಿಸಲು ಸರಬರಾಜು ಮಾಡಿ ತಳಿ ಅಭಿವೃದ್ಧಿ ಕ್ರಮವಹಿಸಲಾಗಿದೆ ಆದ್ದರಿಂದ ಸ್ಥಳೀಯ ಗೋತಳಿ ಅಭಿವೃದ್ಧಿಗೆ ನಿರ್ಲಕ್ಷತೆ ಮಾಡಲಾಗುತ್ತಿಲ್ಲ

ಆ) ಇದೆ ಕರ್ನಾಟಕ ಪ್ರಸಿದ್ಧ ಸ್ಥಳೀಯ ಗೋತಳಿಗಳಾದ ಹಳ್ಳಿಕಾರ್, ಅಮೃತ ಮಹಲ್, ಖಿಲಾರ, ದೇವಣಿ ಕೃಷ್ಣವ್ಯಾಲಿ ತಳಿಗಳು ಅಭಿವೃದ್ಧಿಗಾಗಿ ಸುವರ್ಣ ಕರ್ನಾಟಕ ಗೋತಳಿ ಅಭಿವೃದ್ಧಿ ಯೋಜನೆ ಕಾರ್ಯಕ್ರಮ 2006–07ನೇ ಸಾಲಿನಿಂದ ಅನುಷ್ಠಾನಗೊಳಿಸಲು, ಈ ಯೋಜನೆಗೆ ರೂ 270 00 ಲಕ್ಷಗಳ ಅನುದಾನವನ್ನು ಪ್ರತಿ ಜಿಲ್ಲೆಗೆ ರೂ 10 00 ಲಕ್ಷಗಳಂತೆ ಹಂಚಲಾಗಿದೆ

ಇ) ಮುರ್ರಾ ಮತ್ತು ಸೂರ್ತಿ ತಳಿಗಳು ಎಮ್ಮೆ ತಳಿಗಳಾಗಿದ್ದು ರಾಜ್ಯದಲ್ಲಿ ಹೈನುಗಾರಿಕೆಗಾಗಿ ಎಮ್ಮೆಗಳಲ್ಲಿ ಈ ತಳಿಗಳನ್ನು ಸಾಕಲಾಗುತ್ತಿದೆ ಈ ಹಿನ್ನೆಲೆಯಲ್ಲಿ ಧಾರವಾಡ ತೇಗೂರು ಎಮ್ಮೆ ತಳಿ ಅಭಿವೃದ್ಧಿ ಕೇಂದ್ರದಲ್ಲಿ ಮುರ್ರಾ ತಳಿ ಮಾತ್ರ ಅಭಿವೃದ್ಧಿಪಡಿಸಲು ಕ್ರಮವಹಿಸಲಾಗಿದೆ ಗ್ರಾಮೀಣ ಪ್ರದೇಶದಲ್ಲಿ ಈ ಮುರ್ರಾ ತಳಿ ಹೈನುಗಾರಿಕೆಗೆ ಅತ್ಯುಪಯುಕ್ತವಾಗಿವೆ

ಈ) ಧಾರವಾಡ ಗ್ರಾಮೀಣ ಮತ ಕ್ಷೇತ್ರದಲ್ಲಿ 2 ಪಶುವೈದ್ಯಾಧಿಕಾರಿಗಳು, 2 ಪಶುವೈದ್ಯಕೀಯ ಸಹಾಯಕರು ಮತ್ತು 2 ಡಿ ದರ್ಜೆ ಹುದ್ದೆಗಳು ಮಾತ್ರ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ

ಉ) ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಕೆಳಕಂಡಂತೆ ಕ್ರಮ ತೆಗೆದುಕೊಳ್ಳಲಾಗುತ್ತಿದ್ದು, ಧಾರವಾಡ ಗ್ರಾಮೀಣ ಕ್ಷೇತ್ರದ ಖಾಲಿ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು

ಶೇಕಡಾ 90ರಷ್ಟು ಸಹಾಯಕ ನಿರ್ದೇಶಕರ ಹುದ್ದೆಗಳನ್ನು ಮುಂಬಡ್ತಿ ಮುಖೇನ ಭರ್ತಿ ಮಾಡಲಾಗುವುದು ಶೇ 10% ರಷ್ಟು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಬೇಕಾಗಿದ್ದು 4 ಸಹಾಯಕ ನಿರ್ದೇಶಕರ ಹುದ್ದೆಗಳನ್ನು ನೇರ ನೇಮಕಾತಿಗಾಗಿ ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡುವ ಕ್ರಮ ಇದ್ದು, ಪ್ರಸ್ತುತ ಕರ್ನಾಟಕ ಲೋಕ ಸೇವಾ ಆಯೋಗದಿಂದ 41 ಪಶುವೈದ್ಯಾಧಿಕಾರಿಗಳ ನೇಮಕಾತಿಗೆ ಸಂದರ್ಶನ ಮುಗಿದಿದ್ದು, ನೇಮಕಾತಿ ಆದೇಶ ನೀಡಬೇಕಾಗಿದೆ ಮತ್ತೆ 77 ಪಶು ವೈದ್ಯಾಧಿಕಾರಿಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ವಿಶೇಷ ನೇಮಕಾತಿ ನಿಯಮ 2003ರ ಅಡಿ 577 ಪಶುವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಬೇಕಾಗಿದ್ದು, ಇದುವರೆಗೆ 383 ಪಶುವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಲಾಗಿದ್ದು, ಉಳಿಕೆ 194 ಪಶುವೈದ್ಯಾಧಿಕಾರಿಗಳ ನೇಮಕಾತಿ ಮಾಡಲು ಪ್ರಸ್ತಾವನೆ ಸಹ ಪರಿಶೀಲನೆಯಲ್ಲಿದೆ ಪಶುವೈದ್ಯಕೀಯ ಮೇಲ್ವಿಚಾರಕರು ಮತ್ತು ಹಿರಿಯ ಪಶುವೈದ್ಯಕೀಯ ಪರೀಕ್ಷಕರು ಹುದ್ದೆಯನ್ನು ಮುಂಬಡ್ತಿ ಮುಖೇನ ಭರ್ತಿ ಮಾಡಲಾಗುತ್ತದೆ 300 ಪಶುವೈದ್ಯಕೀಯ ಪರೀಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಪಶುವೈದ್ಯಕೀಯ ಸಹಾಯಕರ ಹುದ್ದೆಗಳನ್ನು ಇಲಾಖೆಯಲ್ಲಿನ ಎಸ್ ಎಸ್ ಎಲ್ ಸಿ ಪಾಸಾದ ಡಿ

ದರ್ಜೆ ನೌಕರರಿಗೆ ತರಬೇತಿ ನೀಡಿ ಬಡ್ತಿ ಮುಖೇನ ತುಂಬಲು ಕ್ರಮವಹಿಸಿದ್ದು ಈಗಾಗಲೇ 244 ಡಿ ದರ್ಜೆ ನೌಕರರಿಗೆ ತರಬೇತಿ ನೀಡಲಾಗಿದೆ ಎಸ್ ಎಸ್ ಎಲ್ ಸಿ ಅಂಕಪಟ್ಟಿ ಪರೀಕ್ಷೆ ಮಂಡಳಿಯ ಪರಿಶೀಲನೆಗೆ ಕಳುಹಿಸಿದ್ದು ವರದಿ ಬಂದ ಕೂಡಲೇ ಭರ್ತಿ ಮಾಡಲು ಕ್ರಮ ಜರುಗಿಸಲಾಗುವುದು 300 ಡಿ ದರ್ಜೆ ನೌಕರರ ಹುದ್ದೆಗಳನ್ನು ಔಟ್ ಸೋರ್ಸ್ ಮುಖೇನ ಭರ್ತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ

ಊ) ರಾಷ್ಟ್ರೀಯ ಕೃಷಿ ಆಯೋಗದ 1984ರ ಮಾನದಂಡಗಳ ಪ್ರಕಾರ, ಪ್ರತಿ 5000 ಜಾನುವಾರು ಘಟಕಗಳಿಗೆ ಪಶುವೈದ್ಯಾಧಿಕಾರಿಗಳಿರುವ ಒಂದು ಪಶುವೈದ್ಯ ಸಂಸ್ಥೆ ಇರಬೇಕಾಗುತ್ತದೆ ಧಾರವಾಡ ಮತ ಕ್ಷೇತ್ರದಲ್ಲಿ 96342 ಜಾನುವಾರು ಘಟಕಗಳಿದ್ದು 19 ಪಶುವೈದ್ಯ ಸಂಸ್ಥೆಗಳೂ ಇರಬೇಕಿತ್ತು ಆದರೆ ಈಗಾಗಲೇ ಧಾರವಾಡ ಮತ ಕ್ಷೇತ್ರದಲ್ಲಿ 29 ಪಶುವೈದ್ಯ ಸಂಸ್ಥೆಗಳಿವೆ ಈ ಹಿನ್ನೆಲೆಯಲ್ಲಿ ಮತ್ತು ಧಾರವಾಡ ತಾಲ್ಲೂಕು ಡಾ ಡಿ ಎಂ ನಂಜುಂಡಪ್ಪ ಇವರ ಪ್ರಾದೇಶಿಕ ಅಸಮತೋಲನಾ ನಿವಾರಣಾ ವರದಿಯ ಮೇರೆಗೆ ಮುಂದುವರಿದ ತಾಲ್ಲೂಕು ಆಗಿದ್ದು, ಪಶು ಚಿಕಿತ್ಸಾಲಯ ಕೊರತೆ ಇರದ ಪ್ರಯುಕ್ತ ಹೊಸದಾಗಿ ಪ್ರಾರಂಭಿಸಲು ಅವಕಾಶವಿರುವುದಿಲ್ಲ

ಋ) ಡಾ ಡಿ ಎಂ ನಂಜುಂಡಪ್ಪ ಇವರ ಪ್ರಾದೇಶಿಕ ಅಸಮತೋಲನಾ ನಿವಾರಣಾ ವರದಿಯಂತೆ ಯಾವ ತಾಲ್ಲೂಕುಗಳಲ್ಲಿ ಪಶು ಚಿಕಿತ್ಸಾಲಯ ಪ್ರತಿ 5000 ಜಾನುವಾರು ಘಟಕಗಳಿಗೆ ಒಂದರಂತೆ ಇಲ್ಲವೊ ಆ ತಾಲ್ಲೂಕುಗಳು ಪ್ರಥಮ ಆದ್ಯತೆ ಮೇಲೆ ಹೊಸ ಪಶು ಚಿಕಿತ್ಸಾಲಯಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ ಕೊರತೆ ಇರುವ ಆ ತಾಲ್ಲೂಕುಗಳಲ್ಲಿ ಮಾತ್ರ ಆದ್ಯತೆ ಮೇರೆಗೆ 8 ವರ್ಷಗಳ ಅವಧಿಯಲ್ಲಿ ತೆರೆಯುವ ಕಾರ್ಯಕ್ರಮ ಸರ್ಕಾರದಲ್ಲಿದೆ

ಎ) ಧಾರವಾಡ ಮತ ಕ್ಷೇತ್ರಗಳನ್ನೊಳಗೊಂಡಂತೆ ರಾಜ್ಯದ ಎಲ್ಲ ಜಿಲ್ಲೆಗಳಿಗೂ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರ/ಕೃತಕ ಗರ್ಭಧಾರಣಾ ಕೇಂದ್ರಗಳು, ಪಶು ಚಿಕಿತ್ಸಾಲಯಗಳನ್ನಾಗಿ ಮತ್ತು ಪಶು ಚಿಕಿತ್ಸಾಲಯಗಳನ್ನು ಪಶು ಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಇಲಾಖೆಯಲ್ಲಿ ಸರ್ಕಾರದ ಪರಿಶೀಲನೆಯಲ್ಲಿದೆ ಇದಕ್ಕೆ ಯಾವುದೇ ಕಾಲಮಿತಿ ನಿಗದಿಪಡಿಸಲಾಗಿರುವುದಿಲ್ಲ

* * * * *

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು ಪಿ–5

(B) 25208